ಬೆಳೆಯುವುದಿಲ್ಲ ಅದಕ್ಕೆ ಸರ್ಕಾರದವರು ಕೊಟ್ಟಂಥ ಹಣ ಏನೇನೂ ಸಾಲದು. ಈ ನಾಲ್ಕು ತಿಂಗಳಾದ ಮೇಲೆ ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸಿ ಫ್ಯಾಮಿನ್ ಬರುವ ಪ್ರದೇಶಗಳಿಗೆ ಶಾಶ್ವತ ಪರಿಹಾರವನ್ನು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಫ್ಯಾಮಿನ್ ರಿಲೀಫ್ ವರ್ಕ್ಸ್‌ಗೆ ಹೆಚ್ಚು ಲಕ್ಷ್ಯ ಕೊಟ್ಟು ಫ್ಯಾಮಿನ್ ರಿಲೀಫ್ ಬೋರ್ಡನ್ನು ರಚನೆ ಮಾಡಬೇಕೆಂದು ಈ ಸಭಾಸದಸ್ಯರು ಎಷ್ಟೋಸಾರಿ ಒತ್ತಾಯಮಾಡಿ ಹೇಳಿದರೂ ಇದುವರೆಗೂ ಅದು ಕಾರ್ಯಗತವಾಗಲಿಲ್ಲವೆಂದು ಹೇಳುತ್ತೇನೆ. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಡಬೇಕೆಂದು ಹೇಳಿ ಇದನ್ನು ಅನುಮೋದಿಸುತ್ತಾ ಅಧ್ಯಕ್ಷರನ್ನು ಅಭಿನಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Business of the House·

Mr. SPEAKER.--I wish to inform the House, as I have already stated that the debate will conclude to-day. I would like to know from the Government what time they will require for reply so that I may adjust the time.

Sri S. R. KANTHI.—So far as I am concerned, I do not take much time. But other Ministers will take some time. It may be two hours.

Mr. SPEAKER.—It will close at 6 o'clock. So, till 4 o'clock, I will allow the debate.

DEMANDS FOR GRANTS IN ADVANCE (VOTE ON ACCOUNT) FOR THE YEAR 1962-63

ಶ್ರೀ ಬಿ. ಹುಚ್ಚೇಗೌಡ .—ಮಾನ್ಯ ಸಭಾಪತಿಗಳೇ, ಈ ದಿವಸ ಈ ಅಂದಾಜು ಪ್ರತಿಕೆಯ ಮೇಲೆ ಮಾತನಾಡ ಬೇಕಾದರೆ ನಮಗೆ ಒಂದು ಅನಾನುಕೂಲವಿದೆ. ಈಗ ತಾನೇ ಮೂರನೆಯ ಮಹಾಚುನಾವಣೆ ನಡೆದಿದೆ. ಹೊಸ ಮಂತ್ರಿ ಮಂಡಲ ಬಂದಿದೆ. ಬಂದ ಮೇಲೆ ಈ ಮಂತ್ರಿ ಮಂಡಲದವರ ನೀತಿಯನ್ನು ಮತ್ತು ಅವರ ಕಾರ್ಯಕ್ರಮದ ಒಂದು ತತ್ವವನ್ನು ಅರಿತು ನಾವು ಮಾತನಾಡಿದ್ದರೆ ಚೆನ್ನಾಗಿತ್ತು. ಏಕೆಂದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಂಚೆಯಾಗಿದ್ದರೆ ನಮಗೆ ಅವರ ತತ್ವ ದೃಷ್ಟಿಯಿಂದ ಯಾವ ಯಾವ ಬದಲಾವಣೆಯನ್ನು ತೋರಿಸುತ್ತಿದ್ದರು ಎಂಬುದನ್ನು ನೋಡಿ ಮಾತನಾಡುವುದಕ್ಕೆ ಅನುಕೂಲವಾಗಿತ್ತು. ಈಗ ಅಂತಹ ಒಂದು ಅನನುಕೂಲದ ಪರಿಸ್ಥಿತಿಯಲ್ಲಿ ಮಾತನಾಡಬೇಕಾಗಿದೆ.

ಸ್ವಾಮಿ, ಈಗ ಇನ್ನೂ ಮಂತ್ರಿ ಮಂಡಲ ರಚನೆ ಪೂರ್ಣವಾಗಿಲ್ಲ. ಏಕೆಂದರೆ ಮೊದಲನೆಯದಾಗಿ ನಮಗೆ ಇರತಕ್ಕ ಒಂದು ಮುಖ್ಯವಾದ ಅನನುಕೂಲ ಈ ಮಂತ್ರಿ ಮಂಡಲ ರಚನೆ ನಿಧಾನವಾಗುತ್ತಿರುವುದು. ಚುನಾವಣೆಯಾಗಿ ಒಂದು ತಿಂಗಳಾದರೂ ಇನ್ನೂ ಮಂತ್ರಿ ಮಂಡಲ ರಚನೆ ಯಾಗದೆಯೇ ಸರ್ಕಾರದ ಆಡಳಿತ ಯಂತ್ರ ನಡೆಯುತ್ತಿರುವುದರಿಂದ ದೇಶದಲ್ಲಿ ಜನಗಳು ಬಹಳ ಮಟ್ಟಿಗೆ ಸರ್ಕಾರದ ವಿಚಾರದಲ್ಲಿ ಒಂದು ಉದಾಸೀನ ಮನೋಭಾವವನ್ನು ತಾಳುತ್ತಿದ್ದಾರೆ. ಏತಕ್ಕೆ ಈ ರೀತಿ ಮಾತನಾಡುತ್ತಿದ್ದೇನೆಂಬುದನ್ನು ತಮ್ಮ ಮುಂದೆ ಅರಿಕೆ ಮಾಡಿ ಕೊಳ್ಳುತ್ತೇನೆ. ನಮಗೆ ದೇಶ ಮುಖ್ಯ.

1-30 P.M.

ಯಾವ ಸರ್ಕಾರ ಆಗಲಿ ಅದು ತನ್ನ ಘನತೆ, ಗೌರವಗಳನ್ನು ಹೆಚ್ಚಿಸಿಕೊಂಡು ಬರಬೇಕೆನ್ನುವುದು ಒಂದು. ಅಷ್ಟೇ ಅಲ್ಲ; ಹೊರಗಡೆಯೂ ಕೂಡ ಮೈಸೂರು ದೇಶ ಮಾದರಿ ದೇಶ ಎಂದು ಅನಿಸಿಕೊಳ್ಳಬೇಕು. ನಾವು ಪ್ರತಿ ಪಕ್ಷದಲ್ಲಿ ಇದ್ದರೂ ಕೂಡ ಮೈಸೂರು ಎಂದರೆ ಅವರು ಮಾಡುವ ತಪ್ಪಿಗೆ ನಮಗೂ ಕೆಟ್ಟ ಹೆಸರು ಬರುತ್ತದೆ ಎಂದು ನಮಗೂ ಭಯವಿದೆ. ಅವರು ಮಾಡಿದ ತಪ್ಪಿಗೂ ಕೂಡ ನಾವು ಈ ಸಭೆಯಲ್ಲಿ ಭಾಗಿಗಳಾಗಿದ್ದೇವೆ. ಆದ್ದರಿಂದ ನಮ್ಮ ದೇಶದ ಘನತೆ, ಗೌರವಗಳನ್ನು ಹೆಚ್ಚಿಸುವ ರೀತಿಯಲ್ಲಿ ಆ ಪಕ್ಷದವರು ಸರ್ಕಾರ ನಡೆಸಲಿ ಎಂದು ನಮ್ಮ ಭಾವನೆ ಇರುವಾಗ ಅವರು ಇನ್ನೂ ಸರಿಯಾದ ಒಂದು ಮಂತ್ರಿ ಮಂಡಲ ರಚನೆ ಮಾಡಿಲ್ಲ. ಒಂದು ತಿಂಗಳು ತೆಗೆದುಕೊಂಡಿದ್ದಾರೆ. ಮದರಾಸಿನಲ್ಲಿ ಎರಡು ದಿವಸಗಳಲ್ಲಿ ಮಂತ್ರಿ ಮಂಡಲ ರಚನೆ ಮಾಡಿದರು, ಕೇಂದ್ರ ಸರ್ಕಾರ ಅವರ ಮೇಲೆ ಪ್ರಭಾವ ಬೀರುವ ಹಾಗೇ ಇಲ್ಲ. ನಮ್ಮ ರಾಜ್ಯದಲ್ಲಿ ನಮ್ಮ ವ್ಯಾಜ್ಯ ಬಗೆಹರಿಸಿಕೊಳುವುದಕ್ಕಾಗದೇ ಒಂದು ಅಲೋಕೇಷನ್ ತೆಗೆದುಕೊಳ್ಳಿ, ಹಣಕಾಸಿನ ವಿಚಾರ ತೆಗೆದುಕೊಳ್ಳಿ. ಪ್ರತಿಯೊಂದಕ್ಕೂ ಅಲ್ಲಿ ಬೇಡಿಕೆಗೆ ಹೋಗಬೇಕು. ನದೀ ನೀರಿನ ವಿಷಯದಲ್ಲೂ ಸಹ ಅಸಡ್ಡೆ. ಅದರಲ್ಲೂ ಘಂಟಾ ಘೋಷವಾಗಿ ಆಂಧ್ರದವರು ಇವೊತ್ತು ತಮಗೆ ಯಾವುದು ಬೇಕೋ ಅದನ್ನು ಕಡ್ಡಾಯವಾಗಿ ತೆಗೆದು ಕೊಂಡೇ ತೆಗೆದು ಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಹೆದರಿಸಿ ತೆಗೆದು ಕೊಳ್ಳುವಷ್ಟು ಪ್ರಭಾವ ಅವರು ಬೀರುತ್ತಾರೆ. ಮದರಾಸಿನವರು ಕೂಡ ಅದೇ ರೀತಿ ಮಾಡುತ್ತಾರೆ. ಮಹಾರಾಷ್ಟ್ರದವರೂ ಕೂಡ ಅಷ್ಟೆ. ಮೂರು ಕಡೆಯವರೂ ಕೂಡ ನಮ್ಮ ಮೇಲೆ ಆಕ್ರಮಣ ನಡೆಸುತ್ತಾ ಇದ್ದಾರೆ. ಅವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತೋರಿಸುತ್ತಾ ಇದ್ದಾರೆ. ನಮ್ಮಲ್ಲಿರತಕ್ಕ ಈ ಸರ್ಕಾರದ ಅದಕ್ಷತೆ ಮತ್ತು ಇದರಲ್ಲಿರತಕ್ಕ ಗ್ರೂಪ್ಸ್ ಈ ವ್ಯಾಜ್ಯದಲ್ಲಿ ಮಂತ್ರಿ ಮಂಡಲ ರಚಿಸುವುದನ್ನೇ ತಿಂಗಳುಗಟ್ಟಲೆ ಮುಂದುವರಿಸುತ್ತಾ ಇದ್ದೀರಿ. ಇದರಿಂದ ಕೊನೆಗೆ ಏನಾಗುತ್ತದೆ ಎಂದರೆ ಆ ಗ್ರೂಪ್‌ನವರನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ, ಈ ಗ್ರೂಪ್‌ನವರನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಅವರು ಅರ್ಧ, ಇವರು ಅರ್ಧ ಸೇರಿಕೊಂಡು ಇನ್ನೊಂದು ಗ್ರೂಪ್ ಆಗುತ್ತದೆ. ಇಂಥಾ ಒಂದು ಸನ್ನಿವೇಶದಲ್ಲಿ ನಾವು ಈ ಸಭೆಯಲ್ಲಿ ಭಾಗವಹಿಸಬೇಕಾಗಿದೆಯೆಂದು ಬಹಳ ವ್ಯಸನವಾಗುತ್ತದೆ.

ನಾವು ಸುಖೀ ರಾಜ್ಯ ಬರುತ್ತದೆ, ರಾಮ ರಾಜ್ಯ ಬರುತ್ತದೆ ಎಂದು ತಿಳಿದುಕೊಂಡಿದ್ದೆವು. ಎಲ್ಲ ಜನರಿಗೂ ಅನ್ನ ಬಟ್ಟೆ ಸಿಕ್ಕುತ್ತವೆ ; ದೀನದರಿದ್ರರಿಗೆ, ಮುದುಕರು, ಅನಾಥರಿಗೆ, ಇನ್ನೂ ಕೂಡ ಹಿಂದೆ ಬಿದ್ದಿರುವವರಿಗೆ ಸಹಾಯವಾಗುತ್ತದೆ ಎಂದು ಮಾಡಿದ್ದೆವು. ಈಗ ಅವರ ಈ ಬಡ್ಜೆಟ್‌ನೊಳಗೆ ಅಂಥಾ ವಿಚಾರವೇ ಇಲ್ಲ. ನೆರೆ ರಾಜ್ಯವಾದ ಕೇರಳ ಇದೆ. ಅಲ್ಲಿ "old age pension" sanction ಮಾಡಿದ್ದಾರೆ. ಮದರಾಸಿನಲ್ಲೂ ಇದೇ ರೀತಿ ಮುಂದುವರಿದಿದ್ದಾರೆ. ಮೈಸೂರಿನಲ್ಲಿ ಏಕೆ ಮಾಡಿಲ್ಲ ಎಂದರೆ ಇವರಲ್ಲಿ ಇರುವ ಕಚ್ಚಾಟವೇ ಕಾರಣ ಮತ್ತೆ ಈ

(ಶ್ರೀ ಬಿ. ಹುಚ್ಚೇಗೌಡ)

ವಿಷಯ ಅಲ್ಲಿಗೇ ಬರುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದಕ್ಕೆ ಏನು ಮಾಡಿದ್ದೀರಿ? ಅಥವಾ ಆ ಒಂದು ಜನರ ಸಂಖ್ಯೆಯನ್ನು ಪತ್ತೆಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ? ನಮ್ಮ ದೇಶದಲ್ಲಿ ಎಷ್ಟು ಜನಕ್ಕೆ ಉದ್ಯೋಗ ಒದಗಿಸುವುದಕ್ಕೆ ನಿಮ್ಮಿಂದ ಸಾಧ್ಯವಿದೆ? ಈ ಒಂದು ಲೆಕ್ಕವನ್ನು ಇಟ್ಟುಕೊಂಡಿದ್ದೀರಾ ಎಂದರೆ ಏನೂ ಇಲ್ಲ. ಅದು ಕೂಡ ಅವರು ಧೈರ್ಯವಾಗಿ ಹೇಳುವುದಿಲ್ಲ. ಕೇರಳದಲ್ಲಿ ಅವರು ಈ ಎಲ್ಲ ಸಂಖ್ಯೆಗಳನ್ನು ಲೆಕ್ಕ ಮಾಡಿದ್ದಾರೆ. ಸುಮಾರು ಒಂಬತ್ತುವರೆ ಲಕ್ಷ ಜನ ಅಲ್ಲಿ ನಿರುದ್ಯೋಗಿಗಳಿದ್ದಾರೆ. ಅದರಲ್ಲಿ ಒಂದು ಲಕ್ಷ ಜನ ವಿದ್ಯಾವಂತ ನಿರುದ್ಯೋಗಿಗಳು. ಇಷ್ಟಾದರೂ ಸ್ಥೂಲವಾಗಿ ಅವರು ಒಂದು ಸಂಖ್ಯೆಯನ್ನು ಕೊಡಬಲ್ಲರು. ನಮ್ಮಲ್ಲಿ ಅಂಥಾ ಕಾರ್ಯಕ್ರಮ ಯಾವುದೂ ಇಲ್ಲ.

ಇನ್ನು ನೀರಾವರಿಯ ವಿಚಾರದಲ್ಲಿ ಕೂಡ, ಮುಖ್ಯ ಮಂತ್ರಿಗಳ ಭಾಷಣದಲ್ಲಿ ಅಂಥಾ ಧೈರ್ಯ ಕೊಡತಕ್ಕ ವಚನ ಏನಾದರೂ ಇದೆಯೇ ಎಂದರೆ ಏನೂ ಇಲ್ಲ. ಆಂಧ್ರದಲ್ಲಿ ಗವರ್ನರ್ ಭಾಷಣದಲ್ಲಿ ಕಡ್ಡಾಯವಾಗಿ ಕೃಷ್ಣಾ ಮತ್ತು ಗೋದಾವರಿ ನೀರು ತೆಗೆದು ಕೊಂಡೇ ತೆಗೆದು ಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ. ನಾವು ಈ ತೀರ್ಮಾನಕ್ಕೆ ಒಂದು ನ್ಯಾಯ ಮಂಡಲಿಯನ್ನಾದರೂ ಮಾಡಿ ಎಂದು ಕೂಡ ಒತ್ತಾಯ ಮಾಡುತ್ತಾ ಇಲ್ಲ. ಇದೇ ರೀತಿ ಹಂಚಿಕೆಯಾಗಬೇಕು ಎಂಬ ನಿರ್ದಿಷ್ಟವಾದ ನೀತಿ ಅಥವಾ ಇಂಡಿಯಾ ದೇಶದಲ್ಲಿ ಎಲ್ಲಾ ರಾಜ್ಯದಲ್ಲೂ ಒಂದೇ ನ್ಯಾಯ, ಇಷ್ಟೇ ನೀರು ಹೊಂದಬೇಕು ಎಂಬ ಒಂದು ಆಧಾರದ ಮೇಲೆ ಒತ್ತಾಯ ಮಾಡುವುದಕ್ಕೂ ಈ ಸರ್ಕಾರಕ್ಕೆ ಸಾಮರ್ಥ್ಯವಿಲ್ಲ.

ಆಮೇಲೆ ಶರಾವತಿ ಯೋಜನೆ. ಅದೂ ಕೂಡ ಒಂದು ದುಃಖಕರವಾದ ವಿಚಾರ. ನಮ್ಮ ದೇಶದಲ್ಲಿ ರತಕ್ಕ ಅನೇಕ ಉದ್ಯೋಗಗಳೂ ನಿಂತು ಹೋಗುವ ಸ್ಥಿತಿಯಲ್ಲಿ ಇವೆ. ಪವರ್ ಸ್ಕ್ಯಾರ್ಸಿಟಿ ಮಾಡಬೇಕಾಗಿ ಬಂತು ಎಂದೂ ಹೇಳಿದ್ದಾರೆ. ಹಿಂದೆ ಇದ್ದ ವಿದ್ಯುಚ್ಛಕ್ತಿ ಮಂತ್ರಿಗಳು ಎದೆತಟ್ಟಿ ಕೊಂಡು ೧೯೬೨ನೇ ಡಿಸೆಂಬರ್‌ನೊಳಗೆ ಪವರ್ ಕೊಡದಿದ್ದರೆ ನನ್ನನ್ನು ಬೇರೆ ಹೆಸರಿನಿಂದ ಕರೆಯಿರಿ ಎಂದು ಹೇಳಿದ್ದರು. ಎಂಟು ಕೋಟಿ ರೂಪಾಯಿ ಹೆಚ್ಚು ಖರ್ಚುಮಾಡಿದರು. ಏಕೆ ಇಷ್ಟು ದುಬಾರಿ ಆಯಿತು? ನಮ್ಮ ಇಂಜಿನಿಯರುಗಳು ಮಾಡುತ್ತಾ ಇದ್ದ ಕೆಲಸವನ್ನು ಇನ್ನೊಬ್ಬರಿಗೆ ಕೊಡಲು ಕಾರಣವೇನು, ಎಂದು ಈ ಸಭೆಯಲ್ಲಿ ಒತ್ತಾಯ ಮಾಡಿದ್ದೇವೆ. ಷೆಡ್ಯೂಲ್ ನಂತೆ ಎಂದರೆ ಡಿಸೆಂಬರ್ 62 ಕ್ಕೆ ಸರಿಯಾಗಿ ಸ್ವಿಚ್ ಹಾಕುತ್ತೇನೆ ಎಂದು ಅವರು ಹೇಳಿದರು. ಆ ಒಂದು ವರ್ಷದಲ್ಲಿ ಎಂಟು ಕೋಟಿ ರೂಪಾಯಿ ಉಳಿಯುತ್ತದೆ ಎಂದು ಹೇಳಿದರು. ಅತ್ತ ಕಡೆ ಎಂಟು ಕೋಟಿ ರೂಪಾಯಿ ಕಳೆದು ಕೊಂಡಿದ್ದೇವೆ. ಇವೊತ್ತು ೧೯೬೩ನೇ ಡಿಸೆಂಬರ್ ಎಂದು ಹೇಳುತ್ತಾ ಇದ್ದೀರಿ. ಇದಕ್ಕೆ ತಾನೆ ಯಾವ ರೀತಿ ನಂಬಿಕೆ ನಮಗೆ ಬರಬೇಕು? ನೀವು ಯಾವುದನ್ನು ಹೇಳಿದರೂ ನಿಮ್ಮ ಮಾತು ವೇದವಾಕ್ಯ; ಇದನ್ನಾರೂ question ಮಾಡುವುದಿಲ್ಲ ಎಂದು ತಿಳಿದುಕೊಂಡು ಮಾತನಾಡುತ್ತೀರಿ. ಈಗ ಏನಾಗಿದೆ? ಅವರು ಯಾವ ಭರವಸೆಯ ಮೇಲೆ ಎಂಟು ಕೋಟಿ ರೂಪಾಯಿ ಹೆಚ್ಚು ಖರ್ಚುಮಾಡಿದರು? ಒಂದು ವರ್ಷಕ್ಕೆ ಮುಂಚೆ ಉತ್ಪನ್ನ ಮಾಡಿದರೆ ಅನೇಕ ಉದ್ಯೋಗಗಳು ಆಗುತ್ತವೆ, ಆರ್ಥಿಕ ಸಂಪತ್ತು ಹೆಚ್ಚುತ್ತದೆ ಎಂದು ಆಶ್ವಾಸನ ಕೊಟ್ಟಿದ್ದರು; ಅವರಿಗೆ ಸದಸ್ಯರು ಸಹಾನುಭೂತಿ ತೋರಿಸಿದ್ದರು. ಅದೆಲ್ಲಾ ಈ ದಿನ ಸುಳ್ಳಾಗಿದೆ. ಒಂದನ್ನು ಕೂಡ ಅವರು ನಡೆಸಿ ಕೊಟ್ಟಿಲ್ಲ. ಇಂಥಾ ಸ್ಥಿತಿಯಲ್ಲಿ ನಮ್ಮ ದೇಶದ ಆಡಳಿತ ನಡೆಯುತ್ತಾ ಇದೆ. ಇದಕ್ಕೆ ಅವರೇ ಕ್ರೆಡಿಟ್ ತೆಗೆದು ಕೊಳ್ಳಬೇಕು.

ನಮ್ಮ ರಾಜ್ಯಾಂಗದಲ್ಲಿ ಕೆಲವು ಹಕ್ಕುಗಳಿವೆ, ಸೆಕ್ಷನ್ (೩೯)ರ ಪ್ರಕಾರ-" ನಾಗರಿಕರು—ಪುರುಷರು ಮತ್ತು ಸ್ತ್ರೀಯರು ಸಮಾನವಾಗಿ—ಜೀವನ ನಿರ್ವಹಣಕ್ಕೆ ತಕ್ಕಷ್ಟು ಸಾಧನಗಳನ್ನು ಪಡೆಯಲು ಅಧಿಕಾರ ಹೊಂದಿರಬೇಕು " ಎಂದು ಇದೆ.

> " ಜನತಾ ಸಮುದಾಯದ ಭೌತಿಕ ಸಾಧನ ಸಂಪತ್ತಿನ ಒಡೆತನವೂ, ಹತೋಟಿಯೂ, ಸಾಮೂಹಿಕ ಹಿತಸಾಧನೆಗೆ ಅತ್ಯುತ್ತಮ ರೀತಿಯಲ್ಲಿ ಸಹಾಯವಾಗುವಂತೆ ಹಂಚಿಕೆ ಯಾಗಬೇಕು ",
>
> " ಸರ್ವಸಾಮಾನ್ಯ ಹಿತಸಾಧನೆಗೆ ವಿರುದ್ಧ ರೀತಿಯಲ್ಲಿ ಸಂಪತ್ತು, ಉತ್ಪತ್ತಿ ಸಾಧನಗಳೂ ಕೇಂದ್ರೀಕೃತವಾಗುವ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯು ಪರಿಣಾಮ ಹೊಂದದಿರುವಂತಿರಬೇಕು ".
>
> " ಪುರುಷರಿಗೂ, ಸ್ತ್ರೀಯರಿಗೂ ಸಮಾನವಾದ ಕೆಲಸಕ್ಕೆ ಸಮಾನವಾದ ವೇತನ ದೊರೆಯುವುದು............".

ಈ ರೀತಿ ಕಾರ್ಯನೀತಿಯನ್ನು ಅಳವಡಿಸತಕ್ಕದ್ದು ಎಂದು ಇದೆ. ಈ ಸಭೆಯಲ್ಲಿ ಸದಸ್ಯರಾಗಿ ಆಗಲಿ, ಮಂತ್ರಿಗಳಾಗಿ ಆಗಲೀ ಭಾಗವಹಿಸಬೇಕಾಗಿದ್ದರೆ ರಾಜ್ಯಾಂಗವನ್ನು ತಲೆಯ ಮೇಲೆ ಇಟ್ಟುಕೊಂಡು ಕೋರ್ಟಿನಲ್ಲಿ ಹೇಳಿದಂತೆ, ಪ್ರಮಾಣ ಮಾಡುತ್ತೇನೆ ಎಂದು ಹೇಳಬೇಕಾಗಿದೆ. ಮೇಲೆ ತಿಳಿಸಿದ ರಾಜ್ಯಾಂಗದಲ್ಲಿ ಸೂಚಿತವಾಗಿರುವ ಕೆಲಸಗಳನ್ನು ನಿರ್ವಹಣೆ ಮಾಡುವುದರಲ್ಲಿ ನೀವು ಎಷ್ಟು ಮಟ್ಟಿಗೆ ನಡೆದಿದ್ದೀರಿ? ಈ ೧೫ ವರ್ಷಗಳಲ್ಲಿ ಎಷ್ಟು ಜನಕ್ಕೆ ಉದ್ಯೋಗಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ ಎಂದು ಕೇಳುತ್ತೇನೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಎನ್ನುತ್ತೀರಿ. ಹಿಂದೆ ೧೦ ವರ್ಷಗಳಲ್ಲಿ ಜಾರಿಗೆ ತರುತ್ತೇವೆ ಎಂದು ಹೇಳುತ್ತಿದ್ದರು; ಈಗ ೧೫ ವರ್ಷ ಆಯಿತು. ಇನ್ನು ಮೂರನೆ ಯೋಜನೆಯ ಕೊನೆಯ ಹೊತ್ತಿಗಾದರೂ ನಿಮ್ಮ ಗುರಿಯನ್ನು ಮುಟ್ಟುತ್ತೀರಾ ಎಂದು ಕೇಳುತ್ತೇನೆ. ಅಲ್ಲಿಗೆ, ೧೯೬೫ಕ್ಕೆ ಈ ಆಜ್ಞೆಯ ಪ್ರಕಾರ ಪ್ರಾಥಮಿಕ ವಿದ್ಯಾಭ್ಯಾಸ ಕಡ್ಡಾಯವಾಗಿ ಪೂರ್ತಿಯಾಗಿ ಜಾರಿಗೆ ಬರುತ್ತದೆ. ಉಚಿತ ಶಿಕ್ಷಣ ಕೊಡಬೇಕೆಂದಿದೆ. ಆದರೆ ಹಳ್ಳಿಗಳಲ್ಲಿ ಪ್ರಾರಂಭ ಮಾಡಿರುವ ಶಾಲೆಗಳಲ್ಲಿ ಒಂದಕ್ಕೂ ಕಟ್ಟಡವಿಲ್ಲ. ಇದನ್ನು ಹೇಳಿದರೆ ಆ ಊರಿನವರೇ ಕಟ್ಟಬೇಕೆಂದು ಹೇಳುತ್ತಾರೆ. ಹಿಂದೆ ಕಟ್ಟಡಕ್ಕೆ ಆರೂವರೆಸಾವಿರ ರೂಪಾಯಿ ಕೊಡುತ್ತಿದ್ದರು, ಈಗ ಶೇಕಡ ೬೦ ಕೊಡುತ್ತೇವೆ; ಇನ್ನು ೪೦ನ್ನು ನೀವೇ ಹಾಕಿಕೊಳ್ಳಿ ಎಂದು ಹೇಳುತ್ತಾರೆ. ಇದನ್ನು ಸರಿಯಾಗಿ ಸರ್ಕಾರ ಕೊಡುವುದಿಲ್ಲ. ಹೀಗಾದರೆ ವಿದ್ಯಾಭ್ಯಾಸ ಹೇಗೆ ನಡೆಯುತ್ತದೆ? ಈಗ ಒಂದು ರೂಮಿಗೆ ಒಂದು ಸಾವಿರದಂತೆ ಕೊಡುತ್ತೇವೆ, ನೀವೇ ಕಟ್ಟಿಸಿಕೊಳ್ಳಿ ಎಂದು ಹೇಳುತ್ತಾರೆ. ಒಂದು ರೂಮಿಗೆ ಮೂರು ಸಾವಿರ ರೂಪಾಯಿ ಖರ್ಚಾಗುತ್ತದೆ. ಊರಿನಲ್ಲಿರುವ ಒಡವೆ ವಸ್ತುಗಳನ್ನು ಮಾರಿದರೂ ಎರಡು ಸಾವಿರ ರೂಪಾಯಿ ಸಿಕ್ಕುವುದಿಲ್ಲ. ಹೀಗಿರುವಾಗ ಅವರು ಹೇಗೆ ಹಣವನ್ನು ಕೊಡು

ತ್ತಾರೆ? ಎಲ್ಲಕ್ಕಿಂತ ಹೆಚ್ಚಾಗಿ ಪ್ರಾಥಮಿಕ ಶಿಕ್ಷಣ ಅಗತ್ಯವಾದುದು. ಹಿಂದೆ ಒಂದೊಂದು ಜಿಲ್ಲೆಗೆ ಮೂರು ತಾಲ್ಲೂಕುಗಳಲ್ಲಿ ಕಡ್ಡಾಯ ಶಿಕ್ಷಣವಿತ್ತು. ಈ ಸರ್ಕಾರ ಬಂದ ಮೇಲೆ ಅದನ್ನು ತಪ್ಪಿಸಿದರು, ಇದನ್ನು ಮುಂದುವರಿಸುವುದಿಲ್ಲ. ಪಟ್ಟಣಗಳಲ್ಲಿ ಒಂದು ಒಂದೂವರೆ ಕೋಟಿ ರೂಪಾಯಿ ಖರ್ಚುಮಾಡಿ ಕಾಲೇಜನ್ನು ಕಟ್ಟಿಸುತ್ತಾರೆ. ಅದರೆ ಹಳ್ಳಿಯವರ ಮಕ್ಕಳಿಗೆ ಓನಾಮ ಕಲಿಸಲು ಸಹಾಯ ಮಾಡುವುದಿಲ್ಲ. ಇಂಥ ಸರ್ಕಾರ ಎಷ್ಟು ದಿವಸ ನಿಲ್ಲುವುದಕ್ಕೆ ಸಾಧ್ಯ? ಜನರನ್ನು ಅಜ್ಞಾನದಲ್ಲಿಟ್ಟು ಅವರ ಬಡತನ ಮೂಢತನಗಳನ್ನು ದುರುಪಯೋಗ ಪಡಿಸಿಕೊಂಡು ಅವರನ್ನು ಶೋಷಣೆ ಮಾಡಿಕೊಂಡು ಆಡಳಿತ ನಡೆಸಬೇಕೆಂಬುದು ಈ ಸರ್ಕಾರದ ಉದ್ದೇಶ. ಪರಕೀಯರ ಸರ್ಕಾರ ಹೋಗಿ ನಮ್ಮ ಸರ್ಕಾರ ಬಂತೆಂದರೆ ಇವರೂ ಅದೇ ದಾರಿಯಲ್ಲೇ ಹೋಗುತ್ತಿದ್ದಾರೆ. ಹೀಗಿರುವಾಗ ನೀವು ಹಣ ಕೊಡಿ ಎಂದರೆ ಕೊಡಲು ಹೇಗೆ ಸಾಧ್ಯ? ಹಳ್ಳಿಗಾಡಿನವರು ವಿದ್ಯಾಭ್ಯಾಸ ಮಾಡಿ ಹೇಗೆ ಮುಂದೆ ಬರಬೇಕು, ತಮ್ಮ ಸ್ಥಿತಿಯ ವಿಷಯದಲ್ಲಿ ಪರಿಜ್ಞಾನ ಹೊಂದಲು ಅವರಿಗೆ ಅವಕಾಶವಾಗುವುದು ಯಾವಾಗ ಎಂದು ಕೇಳುತ್ತೇನೆ. ನೆನ್ನೆಯ ದಿನ ಒಬ್ಬ ಮಾನ್ಯ ಸದಸ್ಯರು ಹಿಂದೆ ಹತ್ತು ಹದಿನೈದು ಮೈಲಿಗೊಂದು ಮಿಡ್ಲ್‌ಸ್ಕೂಲು ಕೂಡ ಸಿಕ್ಕುತ್ತಿರಲಿಲ್ಲವೆಂದೂ ಈಗ ಹೆಚ್ಚಾಗಿದೆಯೆಂದೂ ಹೇಳಿದರು. ಆಗ ನಾವು ಕೊಡುತ್ತಿದ್ದ ಕರವೆಷ್ಟೆಂಬುದನ್ನು ಅವರು ಯೋಚನೆ ಮಾಡಬೇಕು. ಹಿಂದೆ ರಾಜ್ಯದ ವರಮಾನ ಎಂಟು ಹತ್ತು ಕೋಟಿ ಇದ್ದುದು ಈಗ ೯೦ ಕೋಟಿ ಆಗಿದೆ. ಈ ಹಣ ಹೇಗೆ ಬಂತು? ನಮ್ಮ ಹಳೆಯ ಮೈಸೂರಿನಲ್ಲಿ ೧೯೪೮ ರಿಂದಲೂ ನಾವು ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಇದನ್ನು ಮಾಡಬೇಕೆಂದು ಅದಾಯ ತೆರಿಗೆಯನ್ನು ಹಾಕಲು ನಾವು ಒಪ್ಪಿದೆವು. ಈ ಸರ್ಕಾರ ಬಂದು ಹದಿನೈದು ವರ್ಷಗಳಾದರೂ ಇನ್ನೂ ಅದರ ಫಲ ಬರುತ್ತಿಲ್ಲ.

ಇನ್ನೊಂದು ವಿಚಾರ ಹೈಸ್ಕೂಲುಗಳ ವಿಷಯದಲ್ಲಿ ಎಲ್ಲವೂ ಖಾಸಗಿ ಯಾಗಿರಬೇಕೆಂದು ಹೇಳಿದರು. ಈಗ ಬರೀ ಖಾಸಗಿ ಸಂಸ್ಥೆಗಳು ಮಾತ್ರ ನಡೆಯುತ್ತಿವೆಯೇ ಯೆಂದು ಕೇಳುತ್ತೇನೆ. ಸರ್ಕಾರ ಮತ್ತೆ ಪ್ರಾರಂಭ ಮಾಡುತ್ತಿಲ್ಲವೆ? ತಮಗೆ ಇಷ್ಟ ಬಂದ ಕಡೆ, ಇಷ್ಟ ಬಂದವರಿಗೆ ಸರ್ಕಾರಿ ಸ್ಕೂಲುಗಳನ್ನು ಕೊಡುತ್ತಿದ್ದಾರೆ, ಈ ವಿಷಯದಲ್ಲಿ ನನ್ನ ಸ್ನೇಹಿತರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಆಗಲೇ ಹೇಳಿದ್ದಾರೆ. ಮೊನ್ನೆ ಕಡೂರು ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಹೈಸ್ಕೂಲನ್ನು ಪ್ರಾರಂಭ ಮಾಡಿದ್ದಾರೆ. ಇದು ಯಾವ ನೀತಿ? ಯಾವ ಹೈಸ್ಕೂಲೂ ಇಲ್ಲದೇಯಿರುವ ತಾಲ್ಲೂಕುಗಳಲ್ಲಿ ತೆರೆಯುತ್ತೇವೆಂದು ಉತ್ತರ ಹೇಳುತ್ತಾರೆ. ಅವರಿಗೆ ಇಷ್ಟ ಬಂದ ಕಡೆ ಮಾಡುತ್ತಿದ್ದಾರೆ. ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರದವರು ತಮ್ಮ ಪಕ್ಷದವರಿಗೇ ಅನುಕೂಲ ಮಾಡುತ್ತಿದ್ದರು. ಇಲ್ಲಿಯೂ ಹಾಗಾಗಿದೆ. ಒಂದೊಂದು ತಾಲ್ಲೂಕಿನಲ್ಲಿ ಎರಡು ಮೂರು ಸರ್ಕಾರಿ ಹೈಸ್ಕೂಲುಗಳನ್ನು ಮಾಡಿದ್ದಾರೆ. ಇಲ್ಲದೇ ಇರುವ ಕಡೆ ಇಲ್ಲ. ನಮ್ಮ ಮಕ್ಕಳು ಕೆಟ್ಟು ಹೋಗುತ್ತಾರೆಂದು ನಾವು ಒಂದು ಹೈಸ್ಕೂಲನ್ನು ಪ್ರಾರಂಭ ಮಾಡಿದೆವು, ಅಪ್‌ಸೆಟ್ ಬೆಲೆಗೆ ಒಂದು ಭೂಮಿಯನ್ನು ತೆಗೆದುಕೊಂಡೆವು. ಹತ್ತೆಕರೆಯಷ್ಟಿದೆ. ಅದರ ಮೇಲೆ ಎಕರೆಗೆ 400 ರೂಪಾಯಿ ನಂತೆ 4,000 ರೂಪಾಯಿ ಕೊಡಬೇಕೆಂದರು. ಹೀಗೆ ಮಾಡಿದರೆ ವಿದ್ಯಾಭ್ಯಾಸ ಹಳ್ಳಿಗಳಲ್ಲಿ ಹೇಗೆ ಅಭಿವೃದ್ಧಿಯಾಗಬೇಕು? ವಿದ್ಯಾ ಸಂಸ್ಥೆಗಳನ್ನು ಸ್ಥಾಪನೆ ಮಾಡಿ, ನಾವು ಗ್ರ್ಯಾಂಟು ಕೊಡುತ್ತೇವೆ ಎಂದು ಸರ್ಕಾರ ಹೇಳಿ, ಅಲ್ಲಿ ಒಂದು ಕಟ್ಟಡ ಕಟ್ಟಬೇಕೆಂದು ನಾವು ಪ್ರಯತ್ನ ಮಾಡಿದರೆ ಅಲೀನೇಷನ್ ಹಣ ಕೊಡಿ, ವ್ಯವಸಾಯವಲ್ಲದೆ ಬೇರೆ ಕೆಲಸಕ್ಕೆ ಜಮೀನು ಉಪಯೋಗ ಮಾಡಿದ್ದಕ್ಕೆ ನಾಲ್ಕು ಸಾವಿರ ರೂಪಾಯಿ ಸ್ಪೆಷಲ್ ಫೈನ್ ಕೊಡಿ ಎಂದು ಕೇಳುತ್ತಾರೆ. ಹೀಗೆಲ್ಲ ಮಾಡುವುದರಲ್ಲಿ ಸರ್ಕಾರದ ಉದ್ದೇಶವೇನೆಂದು ಕೇಳುತ್ತೇನೆ. ಹಳ್ಳಿಯ ಜನರನ್ನು ವಿದ್ಯಾವಂತರಾಗಿ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲವೆಂದು ಹೇಳುತ್ತೇನೆ, ಒತ್ತಾಯ ಶಿಕ್ಷಣ ಕಾನೂನು ಜಾರಿಯಲ್ಲಿದೆ, ಹುಡುಗರು ಶಾಲೆಗಳಿಗೆ ಬರುತ್ತಿದ್ದಾರೆಂದು ಹೇಳಿದರು. ಎಂದ ಮೇಲೆ, ವಿದ್ಯಾಭ್ಯಾಸ ಮಾಡಬೇಕೆಂದು ಜನರಲ್ಲಿ ಕಾತುರತೆಯಿದೆಯೆಂದಾಯಿತು. ಆದರೆ ಅದಕ್ಕೆ ಅವರಿಗೆ ಅನುಕೂಲವಿಲ್ಲದೇಯಿರುವುದರಿಂದ ಕಷ್ಟವಾಗಿದೆ. ಕಟ್ಟಡಗಳೂ ಉಪಾಧ್ಯಾಯರೂ ಇಲ್ಲದೆ ಕಷ್ಟವಾಗಿದೆ. Single teacher schools ವಿಷಯ ಶ್ರೀ ಮಾದಯ್ಯಗೌಡರು ಹೇಳಿದರು; ಬರಿಯ ಕೈಗಿಂತ ಹಿತ್ತಾಳೆ ಕಡಗ ಲೇಸು ಎಂದು ಹೇಳುವ ಹಾಗೆ, ನಮ್ಮ ಮಕ್ಕಳು ಅನಕ್ಷರಸ್ಥರಾಗಿರುವುದಕ್ಕಿಂತ ಓನಾಮವನ್ನಾದರೂ ಕಲಿಯಲಿ ಎಂದು ನಮ್ಮ ಇಷ್ಟ. ನಮಗೇನೂ ಭಾರಿ ಕಟ್ಟಡ ಬೇಕೆಂದು ಕೇಳುವುದಿಲ್ಲ. ಹೀಗೆಯೇ ಕಟ್ಟಡ ಕಟ್ಟಬೇಕೆಂದು ಒತ್ತಾಯ ಮಾಡಬಾರದು, ಅದಷ್ಟು ಮಟ್ಟಿಗೆ ಸಲಕರಣೆಯಿದ್ದರೆ ಸಾಕು. ಇನ್ನೂ ಮೂರು ಸಾವಿರ ಸ್ಕೂಲು ಕಟ್ಟಡಗಳು ಬೇಕಾಗುತ್ತವೆ, ಒಂದೆರಡು ಕೋಟಿ ರೂಪಾಯಿ ಖರ್ಚು ಮಾಡಿದರೆ ಸಾಕು, ಹೆಚ್ಚು ಮಾಡಬೇಕಾಗಿಲ್ಲ. ಒಂದು ಪಟ್ಟಣದಲ್ಲಿ ಮಾಡುವ ಖರ್ಚನ್ನು ದೇಶಕ್ಕೆಲ್ಲ ಕೊಡಬಹುದು, ಹುಡುಗಿಯರಿಗೆ ಕಾಲೇಜು ವಿದ್ಯಾಭ್ಯಾಸವನ್ನು ಕೊಡಬೇಕೆಂದು ನೆನ್ನೆಯ ದಿವಸ ಶ್ರೀಮತಿ ರತ್ನಮ್ಮನವರು ಹೇಳಿದರು. ಅದನ್ನು ನಾನು ಬೇಡವೆನ್ನುವುದಿಲ್ಲ, ಅದರೆ ಲಕ್ಷಾಂತರ ಜನರನ್ನು ಅವಿದ್ಯಾವಂತರನ್ನಾಗಿಟ್ಟುಕೊಂಡಿರುವಾಗ ಇದು ಸರಿಯೆ? ಸೇಕಡ 75 ರಷ್ಟು ಜನ ಹಳ್ಳಿಗಳಲ್ಲಿ ಕತ್ತಲೆಯಲ್ಲಿರುವವರನ್ನು ನೋಡಬೇಕು, ಇದರಲ್ಲಿ ಯಾವುದು ಮುಖ್ಯವಾದುದೆಂಬುದನ್ನು ಸರ್ಕಾರ ನೋಡಬೇಕು, "Education Seminars" ಎಂದು, 'Education Reforms', ಎಂದು ಸರ್ಕಾರದವರು ಅಟ್ಟಹಾಸ ಮಾಡಿದರು. ಅದಕ್ಕೆ ನೂರಾರು ಜನ ವಿದ್ವಾಂಸರನ್ನೂ ಕರೆಸಿದರು, ಅದರ ಫಲವೇನಾಯಿತು? ರಜಾದಿನಗಳನ್ನು ಹೆಚ್ಚು ಮಾಡಿ, ವ್ಯತ್ಯಾಸ ಮಾಡಿ, ತೊಂದರೆಯಾಯಿತು.

ಆ ಮೇಲೆ ಆ ಪ್ರೋಗ್ರಾಮನ್ನು ವಜಾ ಮಾಡಿದರು. ಮಳೆಗಾಲದಲ್ಲಿ ರಜಾ ಕೊಡಕೂಡದು, ಬೇಸಿಗೆ ಕಾಲದಲ್ಲಿ ರಜಾ ಕೊಡಕೂಡದು ಎಂದು ಮಾಡಿದರು. ಆದರೆ ಆಗ ಮಳೆಗಾಲದಲ್ಲಿಯೂ ರಜಾ ಸಿಕ್ಕಿತು, ಬೇಸಿಗೆ ಕಾಲದಲ್ಲಿಯೂ ರಜಾ ಸಿಕ್ಕಿತು, ಹೀಗೆ ಪ್ರಯೋಗವನ್ನು ಹುಡುಗರ ಮೇಲೆ ನಡೆಸಿಕೊಂಡು ಹೋಗುತ್ತಿದ್ದಾರೆ. ಆ ಮೇಲೆ ಮೊದಲಿಯಾರ್ ಕಮಿಟಿ ರಿಪೋರ್ಟ್ ಬಂತು. ಅದು ಏನಾಯಿತೋ ಗೊತ್ತಿಲ್ಲ. ಎಲ್ಲಾ ರಿಪೋರ್ಟುಗಳನ್ನು ತರಿಸಿಕೊಳ್ಳುತ್ತಾರೆ. ಆದರೆ ಯಾವುದನ್ನೂ ಸರಿಯಾಗಿ ಮಾಡುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅದು ಎಲ್ಲಾ ಹಳೆಯ ಮಾತಾಯಿತು. ಈಗ ಎಲ್ಲಾ ಸರಿಯಾಗಿ ನಡೆದಿದೆ

ಶ್ರೀ ಬಿ. ಹುಚ್ಚೇಗೌಡ.—ಇವೆಲ್ಲಾ ಕಾಂಗ್ರೆಸ್ಸಿನವರೇ ಮಾಡಿದ್ದು. ಇದೇ ಪಾರ್ಟಿಯವರೇ ಅಧಿಕಾರದಲ್ಲಿದ್ದುಕೊಂಡು ಮಾಡಿದ್ದು. ಅದು ಬೇರೆ ಎಂದು ಹೇಳಿದರೆ ನಮಗೆ ಭಯವಾಗುತ್ತದೆ. ಹಿಂದೆ ಕೆಲವು ಪ್ರಾಜೆಕ್ಟ್‌ಗಳನ್ನು ಕಟ್ಟಲೇಬೇಕು ಎಂದು ಮಾಡಿದರು. ಆದರೆ ಇವೊತ್ತಿನ ದಿವಸ ಅದನ್ನು ರೀ ಕನ್‌ಸಿಡರ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ರೀತಿ ಶಬ್ದ ಪ್ರಯೋಗ ಮಾಡುವುದರಿಂದ ದೇಶದ ಗತಿ ಏನಾಗುತ್ತದೆ ಮತ್ತು ನಮ್ಮ ಆರ್ಥಿಕ ಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

ಆ ಮೇಲೆ ಇನ್ನೊಂದು ಹೆಚ್ಚಿನ ವಿಚಾರವನ್ನು ಹೇಳುತ್ತೇನೆ. ಪ್ರತಿಯೊಂದಕ್ಕೂ ನಮ್ಮ ಸರ್ಕಾರದವರು ಮಾತೆತ್ತಿದರೆ ಕೇಂದ್ರ ಸರ್ಕಾರದವರನ್ನು ಕೇಳುತ್ತಾರೆ. ಒಂದೊಂದು ಸಾವಿರ ರೂಪಾಯಿಗಳ ಗ್ರಾಂಟ್ ಬರುವಂಥಾ ಐಟಮ್‌ಗಳೂ ಇವೆ. ಕೆಲವು ಐಟಮ್‌ಗಳಿಗೆ ೨೦೦ ರೂಪಾಯಿಗಳ ಗ್ರಾಂಟೂ ಬಂದಿದೆ. ಆ ಕಾಗದಕ್ಕಾದರೂ ಬೆಲೆಯಿಲ್ಲವೇ? ಕೆಲವನ್ನು ಒಟ್ಟಿಗೆ ಲಂಪ್‌ಸಮ್ ಆಗಿ ತೆಗೆದುಕೊಳ್ಳುತ್ತಾರೆ. ಇದಲ್ಲದೆ ಒಂದು ಲಕ್ಷ, ಐದು ಲಕ್ಷ, ಹತ್ತು ಲಕ್ಷ ಸಾಲದ ರೂಪವಾಗಿ ತೆಗೆದುಕೊಳ್ಳತಕ್ಕಂಥ ಐಟಂಗಳು ಬೇಕಾದಷ್ಟು ಇವೆ. ಕೇಂದ್ರ ಸರ್ಕಾರದವರು ಸಾಧಿಸತಕ್ಕ ಪ್ರತಿಯೊಂದು ವಿಷಯವನ್ನು ನಮ್ಮ ಸರ್ಕಾರದವರು ಮಾಡುತ್ತಿದ್ದಾರೆ. ಅದೂ ಅಲ್ಲದೆ ಇದರಲ್ಲಿ ಅನೇಕ ಗ್ರಾಂಟುಗಳನ್ನು ನಮ್ಮ ಸರ್ಕಾರದವರು ಕೇಳಿದ್ದಾರೆ. ಇದು ಅಷ್ಟು ಉಚಿತವಾಗಿ ಕಾಣುವುದಿಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಇನ್ನು ಮುಂದಾದರೂ ತಮ್ಮ ಒಂದು ವ್ಯಕ್ತಿತ್ವವನ್ನು ಮತ್ತು ನಮ್ಮ ಮೈಸೂರಿನ ಮಾದರಿಯನ್ನಾದರೂ ಕೂಡ ಇಟ್ಟು ಕೊಂಡು ಮೈಸೂರಿನ ಹೆಸರನ್ನು ಉಳಿಸಬೇಕು ಎನ್ನುವ ಜವಾಬ್ದಾರಿಯಿಂದ ನಡೆಯುತ್ತಾರೆ, ತಮ್ಮ ಪ್ರತಿಭೆಯನ್ನು ತೋರಿಸಿ ದೇಶಕ್ಕೆ ಕಲ್ಯಾಣವನ್ನುಂಟು ಮಾಡುತ್ತಾರೆಂದು ನಂಬಿ ನಾನು ಇದನ್ನು ವಿರೋಧಿಸುತ್ತೇನೆ.

*ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು).—ಸ್ವಾಮಿ, ಈಗ ಈ ಸಭೆಯಲ್ಲಿ ವೋಟ್ ಆನ್ ಅಕೌಂಟ್ ವಿಷಯದಲ್ಲಿ ಚರ್ಚಿಸಿ ಇದರ ಮಂಜೂರಾತಿ ಆಗಲಿಕ್ಕೆ ಸರ್ಕಾರದವರು ಇದನ್ನು ಸಭೆಯ ಮುಂದೆ ಇಟ್ಟಿದ್ದಾರೆ. ವೋಟ್ ಆನ್ ಅಕೌಂಟ್ ಎಂದು ಹೇಳಿದರೆ ಇದು ಬಡ್ಜೆಟ್ಟಿನ ಒಳಗೆ ಸೇರಿದ ಒಂದು ಅಂಶ. ಬಡ್ಜೆಟ್ಟಿನ ಗ್ರೂಪಿನಲ್ಲಿ ಈ ಅಕೌಂಟ್ಸ್ ಕೂಡ ಇವೆ. ಏಪ್ರಿಲ್ ಒಂದರಿಂದ ಜುಲೈ ೩೧ರ ವರೆಗೆ ಆಗುವ ಖರ್ಚಿನ ಅಂಶವನ್ನು ಮಂಜೂರು ಮಾಡಲಿಕ್ಕೆ ಸುಲಭ ರೀತಿಯಲ್ಲಿ ವೋಟ್ ಆನ್ ಅಕೌಂಟ್ ಎಂದು ಹೇಳಿ ನಮ್ಮ ಮುಂದೆ ಇದನ್ನು ಇಟ್ಟಿದ್ದಾರೆ. ನಾವು ಇದನ್ನು ಒಪ್ಪಿದರೆ ಬಡ್ಜೆಟ್ಟನ್ನು ಕೂಡ ಒಪ್ಪಿದ ಹಾಗೆ ಆಗುತ್ತದೆ. ಹೀಗಿರುವಾಗ ಮಾನ್ಯ ಮುಖ್ಯ ಮಂತ್ರಿಗಳು ವೋಟ್ ಆನ್ ಅಕೌಂಟ್ ಅನ್ನು ನಮ್ಮ ಮುಂದೆ ಇಟ್ಟಾಗ ಇಡೀ ನಮ್ಮ ಪ್ರಾಂತದ ಸಾಂಪತ್ತಿಕ ವಿಚಾರದ ಚಿತ್ರವನ್ನು ಕೂಡ ಕೊಡಬೇಕಾಗಿತ್ತು. ಆದರೆ ಸೂಕ್ಷ್ಮ ರೀತಿಯಲ್ಲಿ ವೋಟ್ ಆನ್ ಅಕೌಂಟ್ ಎಂದು ಈ ಸಭೆಯ ಮುಂದೆ ಇಟ್ಟಿದ್ದಾರೆ. ೫೭ ಕೋಟಿ ರೂಪಾಯಿಗಳು ಇದರಲ್ಲಿ ಸೇರಿವೆ. ವೋಟ್ ಆನ್ ಅಕೌಂಟ್ ಎಂದು ಚರ್ಚೆ ಮಾಡುವಾಗ ನಮ್ಮ ಪ್ರಾಂತದ ಒಂದು ಪರಿಸ್ಥಿತಿ ಮತ್ತು ಸಾಂಪತ್ತಿಕ ಹಿನ್ನೆಲೆಯನ್ನು ಕೂಡ ಈ ಸಭೆಯ ಮುಂದೆ ಇಟ್ಟು, ಅದನ್ನು ಗಮನಕ್ಕೆ ತೆಗೆದುಕೊಂಡು ಇದನ್ನು ಚರ್ಚಿಸುವುದು ಅಗತ್ಯವಾಗಿ ಇದೆ. ನಮ್ಮ ಪ್ರಾಂತದ ಆರ್ಥಿಕ ಸ್ಥಿತಿ ಹೇಗಿದೆ ಎಂದರೆ ನಮಗೆ ಈಗ ೧೩೭ ಕೋಟಿ ರೂಪಾಯಿಗಳ ಸಾಲ ಇದೆ. ಅದರಲ್ಲಿ ಸಾರ್ವಜನಿಕರ ಸಾಲ 38 ಕೋಟಿ ಚಿಲ್ಲರೆ ಕೇಂದ್ರ ಸರ್ಕಾರದ ಸಾಲ 90 ಕೋಟಿ ಚಿಲ್ಲರೆ ರೂಪಾಯಿಗಳು. ಇತರೇ ಸಾಲ 8 ಕೋಟಿ ರೂಪಾಯಿಗಳು. ೧೯೬೨-೬೩ ನೇ ಇಸವಿಯಲ್ಲಿ ಇದು ೧೯೦ ಕೋಟಿಗೆ ಹೋಗುವ ಸಾಧ್ಯತೆಯಿದೆ. ಇದು ಸಾಲದ ಬಾಕಿ ಆಯಿತು. ಇನ್ನು ಸರ್ಕಾರದವರು ಒಂದು ವರ್ಷಕ್ಕೆ ಆರು ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡಬೇಕಾಗಿದೆ. ನಮ್ಮ ಸಾಂಪತ್ತಿಕ ಸ್ಥಿತಿ ಏನು, ಪ್ರತ್ಯಕ್ಷವಾಗಿ ತೆರಿಗೆಯ ಮೂಲಕ ನಾವು ಪಡೆಯುವ ಹಣ ಎಷ್ಟು, ಅಪ್ರತ್ಯಕ್ಷವಾಗಿ ಪಡೆಯುವ ಹಣ ಎಷ್ಟು ಎಂಬುದನ್ನು ವಿಚಾರಿಸುವುದು ಕೂಡ ಅಗತ್ಯವಾಗಿದೆ. ಸೋಷಿಯಲಿಸ್ಟಿಕ್ ಎಕಾನಮಿ, ಪ್ಲಾನ್ಡ್ ಎಕಾನಮಿ, ಪ್ಲಾನ್ಡ್ ಪ್ರೋಗ್ರಾಂ, ಪ್ಲಾನ್ಡ್ ಡೆವಲಪ್‌ಮೆಂಟ್ ಎಂದು ಹೇಳುತ್ತೀರಿ. ಅಪ್ರತ್ಯಕ್ಷ ತೆರಿಗೆ ಎಷ್ಟು, ಪ್ರತ್ಯಕ್ಷ ತೆರಿಗೆ ಎಷ್ಟು ಎಂಬುದನ್ನು ವಿಚಾರಿಸಬೇಕು. ಕೆಲವು ವರ್ಷಗಳಲ್ಲಿ ಅಪ್ರತ್ಯಕ್ಷ ತೆರಿಗೆ ಎಷ್ಟು ಪ್ರಮಾಣದಿಂದ ಎಷ್ಟು ಪ್ರಮಾಣದವರೆಗೆ ಏರಿದೆ, ಪ್ರತ್ಯಕ್ಷ ತೆರಿಗೆ ಎಷ್ಟು ಪ್ರಮಾಣದಿಂದ ಎಷ್ಟು ಪ್ರಮಾಣದವರೆಗೆ ಏರಿದೆ. ಅಪ್ರತ್ಯಕ್ಷ ತೆರಿಗೆಯಿಂದ ಡಿಫಿಜಿಟ್ ಎಷ್ಟು ಕೂಡಿ ಬಂತು, ಪ್ರತ್ಯಕ್ಷ ತೆರಿಗೆಯಿಂದ ಡಿಫಿಜಿಟ್ ಎಷ್ಟು ಕೂಡಿ ಬಂತು ಎಂಬುದು ಡಿಫಿಜಿಟ್ ಫೈನಾನ್ಸಿಗೆ ಸಂಬಂಧ ಉಂಟು.

Sri S. R. KANTHI.—He can make all these remarks at the time of the discussion of the Budget. This is only a Vote on Account. It is not necessary to traverse all that ground while discussing the Vote on Account because the same ground will have to be covered at the time of the discussion on the budget.

Mr. SPEAKER.—The member will bear the suggestion in mind, but I cannot prevent him from covering that ground.

Sri A. KRISHNA SETTY.—I shall raise it in some other form at that time. The Vote on account is also a part of the Budget and so let us face it squarely.

2-00 P.M.

ವಿವರಣೆ ಬೇಡ ಎಂದು ಹೇಳಿದರೆ, ಬೇರೆ ವಿಷಯವನ್ನು ಹೇಳುತ್ತೇನೆ.

ಓಟ್ ಆನ್ ಅಕೌಂಟ್ ಪ್ರಸ್ತಾಪ ಮಾಡುವಾಗ ಈ ವಿಷಯಗಳ ಹಿನ್ನೆಲೆಯನ್ನು ತಿಳಿದುಕೊಳ್ಳುವ ಅಗತ್ಯವುಂಟು. ಕೆಲವು ವರ್ಷಗಳ ಆಡಳಿತ ನಮ್ಮಲ್ಲಿ ಹೇಗೆ ನಡೆದಿದೆ, ನಮ್ಮ ನೆರೆ ಪ್ರಾಂತಗಳಲ್ಲಿ ಹೇಗೆ ನಡೆದಿದೆ ಎಂದು ನೋಡಿ ಪ್ರಗತಿಯಿಂದ ಮುಂದುವರಿದಿದೆಯೋ ಎಂಬುದನ್ನು ತಿಳಿಯಬಹುದು. ಮದ್ರಾಸು ಮತ್ತು ಆಂಧ್ರ ದೊಡನೆ ಹೋಲಿಸಿ ನೋಡಿದರೆ ಅಲ್ಲಿ ಜನರಿಗೆ ಸಿಕ್ಕುತ್ತಿರುವ ಸೌಲತ್ತು ಇಲ್ಲಿ ಸಿಕ್ಕುತ್ತಿಲ್ಲವೆಂದು ಹೇಳಬಹುದು. ಒಂದೇ

*Asterisk indicates that the remarks or speeches have not been revised by the member concerned

ಒಂದು ದೃಷ್ಟಾಂತವನ್ನು ತೆಗೆದುಕೊಳ್ಳಬಹುದು. ೧೯೫೬ನೆಯ ಇಸವಿ ಪ್ರಾರಂಭದಲ್ಲಿ ವಿದ್ಯುಚ್ಛಕ್ತಿ ಜನರ ಬಳಕೆಗೆ ಇಲ್ಲಿ ಒದಗಿದ್ದಷ್ಟು ಮದ್ರಾಸು ಮತ್ತು ಕೇರಳಾದಲ್ಲಿ ಒದಗಿರಲಿಲ್ಲ. ಇವೊತ್ತು ನೋಡಿದರೆ. ಆ ಎರಡು ಪ್ರಾಂತಗಳಿಗಿಂತ ಕಡಮೆ ವಿದ್ಯುಚ್ಛಕ್ತಿಯನ್ನು ನಾವು ಉಪಯೋಗಿಸುತ್ತಿದ್ದೇವೆ. ನಿರುದ್ಯೋಗದ ಪ್ರಶ್ನೆ ಬಹಳ ದೊಡ್ಡದಾಗಿದೆ. ಅದರಲ್ಲೂ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಹೀಗಿರುವಾಗ ಶ್ರೀ ಎ. ಜಿ. ರಾಮಚಂದ್ರ ರಾಯರ ಸಮಿತಿ ಶಿಫಾರ್ಸು ಬಹಳ ಅಮೂಲ್ಯವಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಖೋತಾ ಬಡ್ಜೆಟ ಇರುವಾಗ ಆ ಅಮೂಲ್ಯ ಶಿಫಾರ್ಸುಗಳು ಜಾರಿಗೆ ಬರುತ್ತವೆಂಬ ಅಭಿಪ್ರಾಯವಿದೆ. ಹಾಗಿರುವಾಗ ತೆರಿಗೆ ಹೆಚ್ಚುತ್ತದೆ. ಬಾಕಿ ಪ್ರಾಂತಗಳಿಗಿಂತ ಈ ಪ್ರಾಂತದಲ್ಲಿ ತೆರಿಗೆ ಹೆಚ್ಚಾಗಿದೆ. ಈ ರೀತಿ ಇರುವುದರಿಂದ ಓಟ್ ಆನ್ ಅಕೌಂಟ್ ತೆಗೆದು ಕೊಳ್ಳುವಾಗ ಚೆನ್ನಾಗಿ ವಿಚಾರಮಾಡುವ ಅಗತ್ಯವುಂಟು. ಮೂರನೆಯ ಪಂಚವಾರ್ಷಿಕ ಯೋಜನೆಗೆ ಕಾಲಿಡುತ್ತಿದ್ದೇವೆ. ಮೂರನೆಯ ಚುನಾವಣೆ ಮುಗಿದಿದೆ, ಸಮಾಜವಾದೀ ಸಮಾಜವನ್ನು ರಚಿಸಲಿದ್ದಾರೆ. ಈ ಸಮಾಜವಾದಿ ಸಮಾಜ ರಚನೆಯ ಕೊನೆಯ ಹಂತದಲ್ಲಿ ಕೆಲಸ ಮಾಡುತ್ತಿರುವಾಗ ಖೋತಾ ಬಡ್ಜೆಟ್ ಬರುವುದು ಸರಿಯಲ್ಲ. ಸಮಾಜವಾದಿ ಸಮಾಜಕ್ಕೂ ಖೋತಾ ಬಡ್ಜೆಟ್ಟಿಗೂ ಸಂಬಂಧವಿದೆ, ಹಾಗೆಯೇ ಇನ್‌ಡೈರೆಕ್ಟ್ ಟ್ಯಾಕ್ಸೇಷನ್ನಿಗೂ ಸಂಬಂಧವಿದೆ. ಆದುದರಿಂದ ಸ್ವಲ್ಪ ಆಲೋಚಿಸಿ ಈ ಬಡ್ಜೆಟ್ ಜನರ ಬಡ್ಜೆಟ್ ಆಗುವ ರೀತಿ ಸಲಹೆ ಮಾಡಿ ಬೇಕಾದ ತಿದ್ದುಪಡಿ ಮಾಡುವ ಅಗತ್ಯತೆಯನ್ನು ಪ್ರತಿಪಾದಿಸಲು ಬಯಸುತ್ತೇನೆ.

ಈಗ ಕೆಲವು ವಿಷಯಗಳ ಮಟ್ಟಿಗೆ ಇಲ್ಲಿ ಚರ್ಚೆ ನಡೆದಿದೆ. ನಾನೂ ಕೆಲವು ಅಭಿಪ್ರಾಯಗಳನ್ನು ನಿಮ್ಮ ಮುಂದಿಡಲು ಪ್ರಯತ್ನ ಮಾಡುತ್ತೇನೆ. ಜನರಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ ನಂಬರ್ ೧೦ ಐಟಂ ನಂಬರ್ ೧೯, ಈ ಸಂದರ್ಭದಲ್ಲಿ ಪರ್ಕಿನ್ ಸನ್ಸ್ ಲಾ ನನ್ನ ನೆನಪಿಗೆ ಬರುತ್ತಿದೆ. ಒಂದು ಯೋಜನೆಗನುಸಾರವಾಗಿ, ಉದ್ದೇಶಕ್ಕನುಸಾರವಾಗಿ ಕೆಲಸ ಮಾಡದಿದ್ದರೆ ಆಡಳಿತ ಸರಿಯಾಗಿ ನಡೆಯಲಾರದು. ನನಗೆ ತಿಳಿದ ಮಟ್ಟಿಗೆ ಇಲ್ಲಿನ ಆಡಳಿತ ಅಸಮರ್ಪಕವಾಗಿದೆ. ಒಂದೇ ಒಂದು ದೃಷ್ಟಾಂತ: ಅಡಿಕೆ ೧೯೫೬ನೆಯ ಇಸವಿಗೆ ಮುಂಚೆ ಕೇರಳದಿಂದ ಇಲ್ಲಿಗೆ ಬರುತ್ತಿತ್ತು. ಈಗ ಅಲ್ಲಿ ಕನ್ನಡಿಗರಿದ್ದರೂ ಒಂದು ಖಂಡಿ ಅಡಿಕೆಯಾಗಲಿ, ಇತರ ಸಾಮಾನುಗಳಾಗಲಿ ಇಲ್ಲಿಗೆ ಬರಲು ಸಾಧ್ಯವಿಲ್ಲವಾಗಿದೆ. ಅಲ್ಲಿರುವ ಕನ್ನಡಿಗರು ಅಲ್ಲೇ ಇರಬೇಕೆ ಅಥವಾ ಇಲ್ಲಿಗೆ ಬರಲು ಅವಕಾಶವಿದೆಯೇ ಎಂಬ ವಿಚಾರದಲ್ಲಿ ಅನುಮಾನವಿದೆ. ಇದನ್ನು ಸರಿಯಾಗಿ ಆಲೋಚಿಸಿ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಮಹಾರಾಷ್ಟ್ರದ ಜನರು ಮೈಸೂರಿನಲ್ಲಿದ್ದೂ ಚಳುವಳಿ ನಡೆಯುತ್ತಿದೆ. ಈ ವಿಚಾರದಲ್ಲೂ ಕೂಡ ಒಂದು ಸಮರ್ಪಕವಾದ ವ್ಯವಸ್ಥೆ ಮಾಡಲು ಸಾಧ್ಯವಾಗಿಲ್ಲ. ಇದು ಸರಿಯಲ್ಲ. ನಾನು ಮಂತ್ರಿ ಮಂಡಲದ ವಿಚಾರವನ್ನು ಹೇಳುವುದಿಲ್ಲ. ಏಕೆಂದರೆ ನಮ್ಮ ಮಂತ್ರಿಮಂಡಲ ಒಳ್ಳೆಯದು, ದೊಡ್ಡದಾದರೂ ಆಗಲಿ. ಆದರೆ ಸಮಾಜವಾದಿ ಸಮಾಜರಚನೆ ಮುಂತಾದ ಉದ್ದೇಶಗಳೇನಿವೆ ಅವನ್ನು ಒಂದುಗೂಡಿಸಿ ಸರಿಯಾಗಿ ಜಾರಿಗೆ ತರಬೇಕು. ನಿಮಗೆ ಬೇಕಾದ ಜನರನ್ನು ಸೇರಿಸಿಕೊಂಡು ಕೆಲಸ ಮಾಡಬಹುದು. ಅದನ್ನು ಬಿಟ್ಟು ಬೇಜವಾಬ್ದಾರಿಯಿಂದ ಕರ್ತವ್ಯ ವಿಮುಖರಾಗಿ ಆಡಳಿತ ಸರಿಯಾಗಿ ನಡೆಸದಿದ್ದರೆ ದೇಶಕ್ಕೆ ಹಾನಿಯಾಗಿ ಅದು ಮುಂದೆ ಚರಿತ್ರೆಯಲ್ಲಿ ದಪ್ಪ ಅಕ್ಷರಗಳಲ್ಲಿ ಬರೆಯಲ್ಪಡುತ್ತದೆ.

ಇನ್ನು ಕೋಆಪರೇಷನ್ ವಿಚಾರ. ಈ ವಿಷಯದಲ್ಲಿ ನಾನು ಹೇಳಬೇಕಾದ್ದು ತುಂಬಾ ಉಂಟು. ಕಾಲಾವಕಾಶವಿಲ್ಲದ್ದರಿಂದ ಸ್ವಲ್ಪ ಮಾತ್ರ ಹೇಳುತ್ತೇನೆ. ಸಹಕಾರ ಸಂಘದಿಂದ ಸಾಲ ಸುಲಭವಾಗಿ ಸಿಕ್ಕುತ್ತದೆ. ಆದರೆ ಕೆಲವು ವರ್ಷಗಳಲ್ಲಿ ಅದು ಹನುಮಂತನ ಬಾಲದಂತೆ ಬೆಳೆಯುತ್ತಿದೆ. ಸಾಲವನ್ನು ವಸೂಲು ಮಾಡಲು ಸರಿಯಾದ ಪ್ರಯತ್ನ ನಡೆದಿದೆಯೋ ಎಂಬುದನ್ನು ನೋಡಬೇಕು. ಸಾಲ ಸರಿಯಾಗಿ ವಸೂಲು ಮಾಡದಿರುವುದರಿಂದ ಜನರಿಗೆ ಅದರಿಂದ ನೆರವು ಆಗಿಲ್ಲ. ಈ ವಿಚಾರದಲ್ಲಿ ಸರಿಯಾದ ಕ್ರಮವನ್ನು ಕೈಗೊಳ್ಳದಿದ್ದರೆ ನಿಜವಾಗಿಯೂ ಸಹಕಾರ ತತ್ವವನ್ನು ಸರಿಯಾಗಿ ಪರಿಪಾಲಿಸಿದಂತಾಗುವುದಿಲ್ಲ.

ಪಾನನಿರೋಧವನ್ನು ನೋಡಿದರೆ ಅದನ್ನು ಮುಂದುವರಿಸಿದರೆ ನೈತಿಕ ಅಧಃಪತನವಾಗುವುದೆಂಬ ಅಭಿಪ್ರಾಯ ಬರುತ್ತದೆ. ಇದಕ್ಕೆ ಅವಕಾಶವಿಲ್ಲದಂತೆ ಸರಿಯಾಗಿ ಮುಂದುವರೆಸುವುದು ಆವಶ್ಯಕ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ಕುರಿತು ಹೇಳುವುದಾದರೆ ಅಲ್ಲಿ ಕುಡಿದು ಮತ್ತರಾಗುವಂತೆ ಬೆಂಗಳೂರಿನಲ್ಲಿ ಆಗುತ್ತಿಲ್ಲ. ಅಲ್ಲಿ ಪಾನನಿರೋಧವಿದೆ. ಇದನ್ನು ಹೀಗೆಯೇ ಬಿಡುವುದು ಸರಿಯಲ್ಲ.

ಮೀನುಗಾರಿಕೆಗಾಗಿ ಸಾಲ ಕೊಟ್ಟಿದ್ದಾರೆ. 200 ರೂಪಾಯಿಗಳ ಸಾಲ ಸಿಕ್ಕಬೇಕಾದರೆ 80 ರೂಪಾಯಿಗಳ ಪಾಲು ಬಂಡವಾಳ ಇಟ್ಟಿರಬೇಕು. ಹಾಗಾದರೆ 120 ರೂಪಾಯಿಗಳು ಉಳಿದೀತು. ಸೇಕಡ ಎರಡರಂತೆ ಹಿಂದಕ್ಕೆ ಕೊಡಬೇಕು. 44 ಸಾವಿರ ರೂಪಾಯಿಗಳ ಖರ್ಚಿದೆ. ಬರುವ ಆದಾಯ ಸೇಕಡ ಒಂದು ಪಾಲು ಕೊಡುವಾಗ ಕಡಮೆ ಬಡ್ಡಿ ಅಂದರೆ ಹೀಗೆ ಕೊಡಬೇಕು ?

ಅರಣ್ಯದ ವಿಷಯದಲ್ಲಿ ನಾನು ಇಷ್ಟು ಹೇಳಬಯಸುತ್ತೇನೆ. ಇಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಾಡುಗಳನ್ನು ನೋಡಿದರೆ ನಾವೇನು ಪಶ್ಚಿಮ ಘಟ್ಟಗಳಲ್ಲಿದ್ದೇವೋ ಅಥವಾ ರಾಜಸ್ಥಾನದ ಅರಾವಳಿ ಪರ್ವತದ ಸಾಲಿನಲ್ಲಿದ್ದೇವೋ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಏನುಮಾಡಿದರೂ ಪ್ರಕೃತಿಗೆ ವಿಮುಖರಾಗಿ ಹೋಗುವುದಕ್ಕಾಗುವುದಿಲ್ಲವೆಂಬುದನ್ನು ನೆನಪಿನಲ್ಲಿಡಬೇಕು.

ಇನ್ನು ನಾನು ಹೆಚ್ಚು ಮುಂದುವರಿಸುವುದಕ್ಕೆ ಪ್ರಯತ್ನಪಡುವುದಿಲ್ಲ. ಮುಖ್ಯವಾಗಿ ಯಾವ ಉದ್ದೇಶದಿಂದ ಈ "Vote on Account"ನ್ನು ಕೊಡುತ್ತಾ ಬಂದಿದ್ದೀರೋ ಆ ಉದ್ದೇಶ ಇದುವರೆಗೂ ಸಾರ್ಥಕವಾಗಿಲ್ಲ. ಈ ರಾಜ್ಯದಲ್ಲಿ ಇದುವರೆಗೂ ನಮ್ಮ ಕೈಗಾರಿಕಾ ಮಿತ್ರರ ಮಜೂರಿಯನ್ನು ನಿರ್ಣಯಿಸುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಜನ ಹಿತದೃಷ್ಟಿಯಿಂದ ಈ ವೋಟ್ ಆನ್ ಅಕೌಂಟನ್ನು ತಿದ್ದುಪಡಿಯಾದರೂ ಮಾಡಬೇಕೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ನಿನ್ನೆಯಿಂದ ಈ ಸಭೆಯ ಅನೇಕ ಮಾನ್ಯ ಸ್ನೇಹಿತರುಗಳು, ವಿರೋಧಪಕ್ಷದವರು ಬಹಳ ದೀರ್ಘವಾಗಿ ಮಂತ್ರಿಮಂಡಳದ ಬಗೆಗೆ ಮಾತನಾಡಿದ್ದಾರೆ. ಅದರಲ್ಲೂ ಶ್ರೀಮಾನ್ ಮುಕ್ಕಣ್ಣಪ್ಪನವರನ್ನು ಕಂಡರೆ ನನಗೆ ಬಹಳ ಪ್ರೀತಿ; ಮೂರು ಕಣ್ಣು ಮುಕ್ಕಪ್ಪನೆಂದೇ ನಾನು ಅವರನ್ನು ಕರೆಯುತ್ತೇನೆ. ಅವರು ಒಂದು ವಿಧದಲ್ಲಿ ಎಚ್ಚರಿಕೆ ಕೊಡುವ ರೀತಿಯಲ್ಲಿ ಮಾತನಾಡಿದರು, ಆದರೆ ಇಡೀ ಮೈಸೂರು ರಾಜ್ಯದ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಪ್ರತಿಯೊಂದು ಕೆಲಸವನ್ನೂ ಮಂತ್ರಿಗಳೊಬ್ಬರೇ ಮಾಡುವುದಕ್ಕಾಗುವುದಿಲ್ಲ. ಮಂತ್ರಿಮಂಡಳವೆಂಬುದು ಒಂದು ಕಾರಿನ ಎಂಜಿನ್ ಇದ್ದ ಹಾಗೆ. ಆ ಎಂಜಿನ್ನಿಗೆ ಎಷ್ಟೋ ಬೋಲ್ಟ್‌ಗಳು, ಚಕ್ರಗಳು, ಗೇರುಗಳು, ಪಿಸ್ಟನ್‌ಗಳು ಹೀಗೆ ನಾನಾ ರೂಪದಲ್ಲಿ ಉಪಕರಣಗಳಿದ್ದರೆ ಅದು ನಡೆಯುತ್ತದೆಯೇ ಹೊರತು ಬರೀ ಎಂಜಿನ್ ಒಂದೇ ಏನೂ ಕೆಲಸ ಮಾಡದು. ಅಂತೆಯೇ ಈ ಹೊತ್ತು ಮಂತ್ರಿಮಂಡಳ ಚೆನ್ನಾಗಿ ಕೆಲಸ ನಡೆಸಿಕೊಂಡು ಹೋಗಬೇಕಾದರೆ ಇಡೀ ಮೈಸೂರು ರಾಜ್ಯದಲ್ಲಿರತಕ್ಕ ದೊಡ್ಡ ಅಧಿಕಾರಿಗಳು, ಚಿಕ್ಕ ಅಧಿಕಾರಿಗಳು, ಗುಮಾಸ್ತರುಗಳು ಎಲ್ಲರೂ ದೇಶದ ಅಭಿಮಾನದಿಂದ ಕೂಡಿ ನಮ್ಮ ದೇಶ, ನಮ್ಮ ರಾಜ್ಯ ಎಂಬ ಪ್ರೇಮದಿಂದ ಕೂಡಿ ಕೆಲಸ ಮಾಡಬೇಕು. ಪ್ರತಿಯೊಬ್ಬರೂ ಪ್ರಾಮಾಣಿಕತೆಯಿಂದ ದೇಶಸೇವೆ ಮಾಡಬೇಕು. ನಾವು ಬರೀ ನೌಕರಿಗಾಗಿ, ನಮ್ಮ ಜೀವನ ನಡೆಸುವುದಕ್ಕಾಗಿ ಬಂದಿಲ್ಲ. ದೇಶದ ಕಲ್ಯಾಣಕ್ಕಾಗಿ ದೇಶದ ಅಭಿವೃದ್ಧಿಗಾಗಿ ದುಡಿದು ದೇಶದ ಪ್ರತಿಯೊಬ್ಬ ಮಾನವನೂ ಕೂಡ ಸುಖದಿಂದ ಬಾಳಿ ಹೊಟ್ಟೆತುಂಬ ಅನ್ನ-ಬಟ್ಟೆ ಮಾಡಿಕೊಂಡಿರುವ ಹಾಗೆ ಕೆಲಸ ಮಾಡಬೇಕೆಂಬ ಆಶಾಕಾಂಕ್ಷೆ ಪ್ರತಿಯೊಬ್ಬ ಅಧಿಕಾರಿಯ ಹೃದಯಾಂತರಾಳದಿಂದ ಬಂದರೇನೇ ನಮ್ಮ ದೇಶ ಅಭಿವೃದ್ಧಿಗೆ ಬಂದೀತು. ಅದನ್ನೆಲ್ಲಾ ಮರೆತು ಮಾನ್ಯ ಮಿತ್ರರು ಬರೀ ಮಂತ್ರಿಗಳಿಗೆ ಎಚ್ಚರಿಕೆಯನ್ನು ಕೊಟ್ಟರೆ ಏನು ಪ್ರಯೋಜನ? ಯಾವ ಕೆಲಸವನ್ನೇ ಆಗಲಿ, ಎಷ್ಟು ಕೆಲಸವನ್ನೇ ಆಗಲಿ, ಮಂತ್ರಿಗಳು ಮಾಡಿಯಾರು?

ಆದರೆ ಸರ್ಕಾರವೆಂಬುದು ಒಂದು ಮನೆಯ ಸಂಸಾರವಿದ್ದ ಹಾಗೆ. ಮನೆಯ ಯಜಮಾನನು ಹಣವನ್ನು ಕೊಡಿಟ್ಟರೂ ಮನೆಯಲ್ಲಿರತಕ್ಕ ವಿಶಿಷ್ಟ ಅಣ್ಣ ತಮ್ಮಂದಿರು ಅದನ್ನು ನ್ಯಾಯವಾಗಿ ಖರ್ಚುಮಾಡಿಕೊಂಡು ನ್ಯಾಯವಾಗಿ ದುಡಿಮೆ ಮಾಡಿಕೊಂಡು ಸಂಸಾರವನ್ನು ನಡೆಸಿಕೊಂಡು ಬಂದರೇನೇ ಆ ಮನೆ ಚೆನ್ನಾಗಿ ಬೆಳೆದೀತು. ಹಾಗಿಲ್ಲದೆ, ಸಿಕ್ಕಾಪಟ್ಟೆ ಅಲಕ್ಷ್ಯದಿಂದ ಹಣ ಖರ್ಚುಮಾಡಿದರೆ ಆ ಮನೆ ಬೇಗನೆ ಮುರಿದು ಹೋಗುತ್ತದೆ. ಹೀಗೆ ಸರ್ಕಾರ ಕೆಲಸ ಮಾಡಬೇಕಾದರೂ ರಾಜ್ಯದಲ್ಲಿರತಕ್ಕ ಎಲ್ಲಾ ಅಧಿಕಾರಿಗಳೂ ಪ್ರಾಮಾಣಿಕತೆಯಿಂದ ದುಡಿಯಬೇಕಾಗಿದೆ.

ಶರಾವತಿ ನದಿಯಿಂದಾಗಿ ಮುಳುಗಡೆಯಾಗುವ ಜಮೀನುದಾರರಿಗೆ ಭದ್ರಾವತಿಯ ತಾಲ್ಲೂಕಿನಲ್ಲಿ ಜಮೀನು ಕೊಡಬೇಕೆಂದು ಕೆಲವು ಭಾಗಗಳನ್ನು ರಿಸರ್ವ್ ಮಾಡಿರುವುದಾಗಿ ನಾನು ಕೇಳಿ ತಿಳಿದಿದ್ದೇನೆ. ಮುಳುಗಡೆಯಾಗತಕ್ಕ ಜನರಿಗೆ ಜಮೀನು ಕೊಡಬೇಕೆಂಬುದೇನೋ ನ್ಯಾಯ. ಏಕೆಂದರೆ ಶರಾವತಿ ಪ್ರದೇಶದಯವರು ಬಹಳ ಕಷ್ಟದಲ್ಲಿದ್ದಾರೆ. ಅವರೂ ನಮ್ಮ ಹಾಗೆ ದೇಶದ ಮಕ್ಕಳೇ. ಅವರನ್ನು ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ ಮತ್ತು ನೀತಿ. ಆದರೆ ಸ್ಥಳದಲ್ಲಿರತಕ್ಕ ಭೂ-ಹೀನರು, ಬಡವರು, ಮತ್ತು ಈ ಪ್ರದೇಶದಲ್ಲಿರತಕ್ಕ ಜಮೀನನ್ನೇ ನೆಚ್ಚಿಕೊಂಡಿರತಕ್ಕವರೂ ಅಲ್ಲಿದ್ದಾರೆ. ಆದ್ದರಿಂದ ಇಲ್ಲಿನ ಜಮೀನುಗಳನ್ನು ವಿಲೇ ಮಾಡುವಾಗ ಸ್ಥಳದ ಜನರಿಗೆ ಮೊದಲು ಕೊಟ್ಟು, ಆನಂತರ ಶರಾವತಿ ಪ್ರಾಜೆಕ್ಟಿನಲ್ಲಿ ನೊಂದವರಿಗೆ ಕೊಡುವುದು ಸೂಕ್ತ. ಸರ್ಕಾರದವರು ಇಂಥದನ್ನು ಮರೆಯಬಾರದು. ಏಕೆಂದರೆ, ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕಾರೇಹಳ್ಳಿ ಗ್ರಾಮದಲ್ಲಿ ಬಡವರಾಗಿ ಜಮೀನಿಲ್ಲದವರಾಗಿ ಮೇಲಾಗಿ ಷೆಡ್ಯೂಲ್ಡ್ ಕಾಸ್ಟಿನವರು ಅನೇಕರು ರಿಕಾರ್ಡ್ ಸಹ ಮಾಡಿಸಿಕೊಂಡು ಜಮೀನು ಪಡೆದುಕೊಳ್ಳಬೇಕೆಂದು ಬಹಳ ದಿವಸಗಳಿಂದ ಕಾದು ಕೂತಿದ್ದರೂ, ಇತ್ತೀಚೆಗೆ ಅವರಿಗೆ ಜಮೀನು ಕೊಡದೆ ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಕೊಟ್ಟುಬಿಟ್ಟರು. ಸರ್ಕಾರ ಇಂಥ ಅನ್ಯಾಯಕ್ಕೆ ಅವಕಾಶ ಕೊಡಕೂಡದು. ಇದನ್ನು ಗಮನಿಸಿ ಪುನಃ ಪರಿಶೀಲನೆ ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಶ್ರೀಮಾನ್ ಹುಚ್ಚೇಗೌಡರು ಮಾತನಾಡುತ್ತಾ ಸ್ಕೂಲುಗಳ ವಿಷಯವನ್ನು ಹೇಳಿದರು. ಹಿಂದೆ ಹಳ್ಳಿಗಾಡು ಗಳಲ್ಲಿ ಎಲ್ಲಿಯೂ ಒಂದು ಸ್ಕೂಲೂ ಸಹ ಕಾಣುತ್ತಿರಲಿಲ್ಲ. ಈಗ ಪ್ರತಿಯೊಂದು ಹಳ್ಳಿಯಲ್ಲೂ ಒಂದು ಸಣ್ಣ ಸ್ಕೂಲನ್ನಾದರೂ ಕಾಣಬಹುದಾಗಿದೆ. ಇದಕ್ಕಾಗಿ ಸರ್ಕಾರದವರಿಗೆ ಎಲ್ಲರೂ ಆಭಾರಿಯಾಗಿರಬೇಕು. ಆದರೆ ಸರ್ಕಾರದವರು ಬರೀ ಸ್ಕೂಲುಗಳನ್ನು ಕೊಡುತ್ತಾ ಹೋದದ್ದರಿಂದಲೇ ಪ್ರಯೋಜನವಾಗುವುದಿಲ್ಲ. ಸ್ಕೂಲು ಮೇಷ್ಟರಿಗೆ ವಾಸಕ್ಕೆ ಮನೆಯಿಲ್ಲದಿರುವುದೇ ಮುಂತಾದ ನಾನಾ ಕಾರಣಗಳಿಂದ ಸ್ಕೂಲುಗಳು ಸರಿಯಾಗಿ ನಡೆಯುತ್ತಿಲ್ಲ. ಅನೇಕ ವೇಳೆ ಉಪಾಧ್ಯಾಯರಿಗೆ ಮದುವೆಯಾಗಿರುತ್ತದೆ. ಅವರು ತಮ್ಮ ಕುಟುಂಬ ಆ ಹಳ್ಳಿಗೆ ತರುವುದಕ್ಕೆ ವಾಸದ ಅನುಕೂಲವಿರುವುದಿಲ್ಲ, ಬೇರೆ ಕಡೆ ಕುಟುಂಬ ಬಿಟ್ಟಿರುತ್ತಾರೆ. ಇಂಥ ಕಷ್ಟಗಳನ್ನು ಮನಗಂಡು ಮನೆಗಳನ್ನು ಉಪಾಧ್ಯಾಯರುಗಳಿಗೆ ಕಟ್ಟಿಸಿಕೊಡುವುದು ಅವಶ್ಯಕವೆಂದು ನಾನು ಹೇಳುತ್ತೇನೆ.

ಆ ಮೇಲೆ ನಮ್ಮ ಭದ್ರಾವತಿಯಲ್ಲಿ ಭದ್ರಾ ರಿಸರ್ವಾಯರಿನಿಂದಾಗಿ ಭದ್ರಾವತಿಯ ತಾಲ್ಲೂಕಿನ ಅನೇಕ ಹಳ್ಳಿಗಳು ಭದ್ರಾನಾಲೆಯ ಕೆಳಭಾಗದಲ್ಲಿದ್ದು ಅಲ್ಲಿನ ಗ್ರಾಮಸ್ಥರುಗಳು ಇಂದು ಬಹಳ ತೊಂದರೆ ಪಡುತ್ತಿದ್ದಾರೆ.

ಈಗ್ಗೆ ಸುಮಾರು ಆರೇಳು ವರ್ಷಗಳಾದರೂ ಇನ್ನೂ ಅನೇಕ ಗ್ರಾಮಗಳ ವರ್ಗಾವಣೆಯನ್ನು ಸರ್ಕಾರದವರು ಮಾಡಲಿಲ್ಲ. ಅದೇನು ತೊಂದರೆಯಿದೆಯೋ ಗೊತ್ತಿಲ್ಲ. ಅವರಿಗೆ ಕಂಪೆನ್‌ಸೇಷನ್ನನ್ನೂ ಸಹ ಇದುವರೆಗೂ ಕೊಟ್ಟಿಲ್ಲ. ಅದರಿಂದಾಗಿ ದುಡ್ಡೆಲ್ಲಾ ಲ್ಯಾಪ್ಸಾಗಿ ವಾಪಸ್ಸು ಬರುತ್ತಿದೆ ಎಂಬ ಕೂಗು ಎದ್ದು ಕಾಣುತ್ತಿದೆ. ಅದರಲ್ಲೂ ಕಂಪೆನ್‌ಸೇಷನ್ ಕೊಡುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ದಯವಿಟ್ಟು ಸರ್ಕಾರದವರು ಅದನ್ನು ಕೂಡಲೇ ಸರಿಪಡಿಸಬೇಕು. ಅನ್‌ಆತರೈಜ್ಡ್ ಮನೆಗಳಿಗೆ ಶೇ 75 ರಷ್ಟು ಹಣ ಕೊಡಬೇಕು. ಆತರೈಜ್ಡ್ ಮನೆಗಳಿಗೆ ಶೇ 50 ರಷ್ಟು ಹಣ ಕೊಡಬೇಕು ಎಂಬುದಾಗಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದರು. ಪುನಃ ಆ ಆರ್ಡರಿನಲ್ಲಿ ಏನೋ ವ್ಯತ್ಯಾಸವಾಗಿರುವ ಕಾರಣ ಆ ಆರ್ಡರನ್ನು ರಿವೈಜ್‌ಮಾಡಿ ಅನ್‌ಆತರೈಜ್ಡ್‌ಗೆ ಶೇ 50 ರಷ್ಟನ್ನೂ ಮತ್ತು ಆತರೈಜ್ಡ್‌ಗೆ ಶೇ 75 ರಷ್ಟನ್ನು ಕೊಡಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಅದನ್ನು ಜಾಗ್ರತೆಯಾಗಿ ಸರಿಪಡಿಸಬೇಕೆಂದು ಹೇಳುತ್ತಾ ಈಗ ವರ್ಗಾಂತರವಾಗಿರತಕ್ಕ ಗ್ರಾಮಗಳವರ ಸ್ಥಿತಿಗಳನ್ನು ನೋಡಿ. ಇವೊತ್ತು ಜನ ಅಲ್ಲಿ ಎಷ್ಟು ಕಷ್ಟದಲ್ಲಿದ್ದಾರೆ, ಯಾವ ರೀತಿ ಮಲೇರಿಯ ಕಾಯಿಲೆಯಿಂದ ನರಳುತ್ತಿದ್ದಾರೆಂಬುದನ್ನು ನೋಡಬಹುದು. ಆದ್ದರಿಂದ ಜಾಗ್ರತೆಯಾಗಿ ಅವರಿಗೆಲ್ಲರಿಗೂ ವಿಶೇಷವಾಗಿ ಹಣವನ್ನೊದಗಿಸಿ ಆಯಾ ಗ್ರಾಮವಾಸಿಗಳು ಬೇರೆ

ಕಡೆಗೆ ಹೋಗುವಂತೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂಬುದಾಗಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನೊಂದು ವಿಷಯ. ಈ ರೀತಿ ವರ್ಗಾವಣೆ ಆಗಿರತಕ್ಕ ಗ್ರಾಮಸ್ಥರಿಗೆ ಹಿಂದಿನ ಸರ್ಕಾರದವರು ಒಂದು ಆಶ್ವಾಸನವನ್ನು ಕೊಟ್ಟಿದ್ದರಂತೆ. ಅದೇನೆಂದರೆ ಗ್ರಾಮದಲ್ಲಿ ಎಲ್ಲಾದರೂ ಒಂದು ಕಡೆ ಒಂದು ಸೊಸೈಟಿ ಮಾಡಿಕೊಳ್ಳಿ. ಅಲ್ಲಿ ಒಂದು ರೂರಲ್ ಹೌಸಿಂಗ್ ಸೊಸೈಟಿ ಎಂಬುದಾಗಿ ಸ್ಥಾಪನೆ ಮಾಡಿ; ಆಗ ನಮ್ಮ ಪ್ರಾಜೆಕ್ಟ್ ಫಂಡಿನಿಂದ ಹಣದ ಮೊತ್ತವನ್ನು ಕೊಡುತ್ತೇವೆಂದು ಒಟ್ಟಿನಲ್ಲಿ ಇತ್ತೀಚೆಗೆ ಕೆಲವು ಕಡೆಗಳಲ್ಲಿ ವರ್ಗಾವಣೆ ಆಗಿರತಕ್ಕ ಗ್ರಾಮವಾಸಿಗಳಿಗೆ ಹಣವನ್ನು ಸಾಲದ ರೂಪವಾಗಿ ಕೊಟ್ಟು ಮನೆಗಳನ್ನು ಕಟ್ಟಿ ಕೊಡುತ್ತಿದ್ದಾರೆ. ಆದರೆ ನಮ್ಮ ಭದ್ರಾವತಿಯಲ್ಲಿ ರೂರಲ್ ಹೌಸಿಂಗ್ ಸೊಸೈಟಿಯನ್ನು ರಿಜಿಸ್ಟರ್ ಮಾಡಿ 90 ಸಾವಿರ ರೂಪಾಯಿಗಳನ್ನು ಗ್ರಾಮಸ್ಥರು ಕೊಟ್ಟಿದ್ದಾರೆ. ಆದರೂ ಸಾಕಷ್ಟು ಹಣವಿಲ್ಲವೆಂದು ಸರಕಾರದವರು ಹೇಳಿರುವುದರಿಂದ ಸುಮಾರು ನೂರಾರು ಅರ್ಜಿಗಳು ಯಾವ ರೀತಿಯಲ್ಲೂ ತೀರ್ಮಾನವಾಗದೆ ಇನ್ನೂ ಪೆಂಡಿಂಗ್ ಇವೆ. ಆದ್ದರಿಂದ ಈಗಲಾದರೂ ಕಾನೂನುಗಳ ಪ್ರಕಾರ ವರ್ಗಾವಣೆಯಾಗಿ ಹೋಗತಕ್ಕ ಗ್ರಾಮಸ್ಥರಿಗೆ ಪ್ರಾಜೆಕ್ಟ್ ಫಂಡಿನಿಂದ ಹಣವನ್ನು ಜಾಗ್ರತೆಯಾಗಿ ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಬಿನ್ನೈಸಿಕೊಳ್ಳುತ್ತೇನೆ. ಸಭಾಪತಿಯವರು ಬೆಲ್ ಬಾರಿಸುತ್ತಿರುವ ಕಾರಣ ಈ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳದೆ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಜಿ. ಮರುಳಪ್ಪ (ಕಡೂರು).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸದಿಂದ ಚರ್ಚೆ ನಡೆಯುತ್ತಾ ಇದೆ. ಈ ಚರ್ಚೆಯಲ್ಲಿ ಮೊದಲು ಪ್ರತಿ ಪಕ್ಷದ ಮಹನೀಯರು ಷುರು ಮಾಡಿದರು. ಅವರು ಮಂತ್ರಿ ಮಂಡಲ ರಚನೆಯ ಬಗ್ಗೆ ಮಾತನಾಡುತ್ತಿದ್ದರು. ಅದನ್ನೇ ನಾನು ಪುನಃ ಮಾತನಾಡಬೇಕಾಗಿದೆ. ಇದನ್ನು ಕೇಳಿ ಕೇಳಿ ಎಲ್ಲರಿಗೂ ಬೇಜಾರಾಗಿರಬೇಕು. ಇನ್ನು ಬರೆದುಕೊಳ್ಳುವ ವರದಿಗಾರರಿಗೂ, ಪತ್ರಿಕಾ ಕರ್ತರಿಗೂ ಕೊನೆಯ ಪಕ್ಷ ವಿಜಿಟರ್ಸ್‌ಗೂ ಅದೇ ರೀತಿ ಬೇಜಾರಾಗಿರಬೇಕೆಂದು ನನಗನ್ನಿಸುತ್ತದೆ. ಇದೇನಾಗಿದೆಯೆಂದರೆ ದೇಶದಲ್ಲಿ ಎಲ್ಲಿಗೆ ಹೋಗಲಿ, ಯಾವ ಬೀದಿಯಲ್ಲಿ ಹೋಗಲಿ, ಯಾವ ಜಟಕಾ ಸ್ಟ್ಯಾಂಡಿಗೆ ಹೋಗಲೀ, ಹೋಟಲಿಗೇ ಹೋಗಲಿ, ಮಂತ್ರಿಮಂಡಲ ರಚನೆಯ ಮಾತೇ ಮಾತನಾಡುತ್ತಿದ್ದಾರೆ. ಇದನ್ನು ನಮಗೆ ಕೇಳಿ ಕೇಳಿ ಬಹಳ ಬೇಜಾರು ಆಗಿದೆ. ಕೆಲವು ವೇಳೆ ನಮ್ಮನ್ನು ಎಂ. ಎಲ್. ಎ. ಎಂದು ಗೇಲಿ ಮಾಡುತ್ತಿದ್ದಾರೆ.

ಸ್ವಾಮಿ, ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ನಾವು ಬಹಳ ಬ್ರಾಡ್ ಬೇಸ್ಡ್ ಮಂತ್ರಿಮಂಡಲವನ್ನು ಮಾಡಬೇಕಾಗಿದೆ. ಒಳಗುಂಪುಗಳನ್ನು ಸ್ಯಾಟಿಸ್‌ಫೈ ಮಾಡಬೇಕಾಗಿದೆ. ಅದಕ್ಕೋಸ್ಕರವಾಗಿ ಇದು ಸ್ವಲ್ಪ ತಡವಾಗುತ್ತಿದೆ ಎಂದು. ಇಡೀ ಹಿಂದೂಸ್ಥಾನದ ಎಲ್ಲಾ ರಾಜ್ಯಗಳಲ್ಲಿಯೂ ಕಾಂಗ್ರೆಸ್ ಸರ್ಕಾರ ಬ್ರಾಡ್‌ಬೇಸ್ಡ್ ಮಿನಿಸ್ಟ್ರಿ ರಚನೆ ಮಾಡಿದ್ದಾರೋ ಅಥವಾ ಸ್ಮಾಲ್ ಬೇಸ್ಡ್ ಮಿನಿಸ್ಟ್ರಿ ರಚನೆ ಮಾಡಿದ್ದಾರೋ ಅಂತೂ ಮಂತ್ರಿ ಮಂಡಲವೇನೋ ರಚನೆಯಾಗಿ ಆಯಾ ಸರ್ಕಾರಗಳ ಆಡಳಿತ ಚೆನ್ನಾಗಿ ನಡೆಯುತ್ತಲೇ ಇದೆ. ಅಂದಮೇಲೆ ಈ ಗ್ರಹಚಾರ ನಮ್ಮ ದೇಶಕ್ಕೇ ಏಕೆ ಬಂತೋ ಗೊತ್ತಿಲ್ಲ. ಇಂತಹ ಸಮಸ್ಯೆಯನ್ನು ಬಗೆಹರಿಸುವ ಸ್ವಂತ ಶಕ್ತಿ ಮುಖ್ಯಮಂತ್ರಿಗಳಲ್ಲಿ ಒಂದೂ ಕಾಣಲಿಲ್ಲ. ಅಂತಹ ಬ್ರಾಡ್‌ಬೇಸ್ಡ್ ಮಂತ್ರಿಮಂಡಲದ ರಚನೆಯ ಬಗ್ಗೆ ಎಲ್ಲರನ್ನು ಸ್ಯಾಟಿಸ್‌ಫೈ ಮಾಡುವುದಕ್ಕಾಗಿ ಇವರು ಇನ್ನೊಂದು ಕೆಲಸವನ್ನು ಮಾಡಬೇಕಾಗಿತ್ತು. ಆದರೆ ಮುಖ್ಯಮಂತ್ರಿಗಳು ಅವರ ಒಂದು ಅದೃಷ್ಟದಿಂದ ಈ ದೇಶದ ಮುಖ್ಯಮಂತ್ರಿಗಳಾದರು. ಈಗ ಬೇರೆಯವರನ್ನು ಮಂತ್ರಿಗಳಾಗಿ ತೆಗೆದುಕೊಳ್ಳಬೇಕಾದರೆ ಅವರು 24 ಎಂಬುದಾಗಿ ಒಂದು ಸಂಖ್ಯೆಯನ್ನು ನಿಗದಿ ಮಾಡಿದ್ದಾರೆ. ಅಂದರೆ ಈಗಿನ ಆಡಳಿತ ಪಕ್ಷದ ಸದಸ್ಯರು 138 ಜನರಿಗೆ ಕೇವಲ $5\frac{3}{4}$ ರಷ್ಟು ಮತ್ತೆ ಮಂತ್ರಿಗಳಾಗುತ್ತಾರೆಂದು ಅರ್ಥವಾಗುತ್ತದೆ. ಆ ರೀತಿ ಒಂದು ಕೆಲಸವನ್ನು ಮೊದಲೇ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಆಗ 24 ಜನರೂ ಬ್ರಾಡ್‌ಬೇಸ್ಡ್ ಮಂತ್ರಿಮಂಡಲದವರಾಗಿರುತ್ತಿದ್ದರು.

ಶ್ರೀ ಎಸ್. ಆರ್. ಕಂಠಿ.—ಅದು ಕಾನ್ಸ್‌ಟಿಟ್ಯೂಷನ್ನಿನೊಳಗೆ ಬರುವುದಿಲ್ಲ.

ಶ್ರೀ ಜಿ. ಮರುಳಪ್ಪ.—ಅದು ಹೊಸ ಪದ್ಧತಿ. ಆ ರೀತಿ ಮಾಡಿಕೊಳ್ಳದೇ ಹೋದರೆ ಈಗ 9 ಜನ ಇದ್ದಾರೆ, ಇಷ್ಟರಲ್ಲೇ ನಾವು ಆಡಳಿತವನ್ನು ನಡೆಸಿಕೊಂಡು ಹೋಗುತ್ತೇವೆಂದು ಹೇಳಿದರೆ ಜನಗಳಿಗೆ ಬಹಳ ಸಂತೋಷವಾಗುತ್ತದೆ. ಈ ದಿವಸ ನೀವು ಇಲ್ಲಿ ಒಂದು ಹೇಳುತ್ತೀರಿ, ಪತ್ರಿಕೆಗಳನ್ನು ಜನತೆ ನಾಳೆ ಓದಿದ ತಕ್ಷಣವೇ ಮುಖ್ಯಮಂತ್ರಿಗಳು ಈ ಮಂತ್ರಿಮಂಡಲ ರಚನೆಯ ವಿಚಾರವನ್ನು ಸಾಯಂಕಾಲ ಹೇಳುತ್ತೇನೆ, ನಾಳೆ ಹೇಳುತ್ತೇನೆ, ಮುಂದಿನ ವಾರಕ್ಕೆ ಹೇಳುತ್ತೇನೆಂಬ ವರ್ತಮಾನವನ್ನು ಪತ್ರಿಕೆಗಳ ಮೂಲಕ ಕೇಳಿ ಕೇಳಿ ಜನತೆ ಬೇಜಾರು ಪಡುತ್ತಿದ್ದಾರೆ. ಹಿಂದೆ ಮೈಸೂರು ದೇಶವನ್ನು ಒಂದು ಮಾದರೀ ದೇಶವೆಂದು ಹೇಳುತ್ತಿದ್ದರು. ಆದರೆ ಈಗ ಇಂಥಾದ್ದನ್ನೆಲ್ಲಾ ಯಾವ ರೀತಿ ವರದಿ ಮಾಡಬೇಕೋ ಆ ರೀತಿ ಪತ್ರಿಕಾ ಕರ್ತರು ತಮ್ಮ ಕರ್ತವ್ಯವನ್ನು ಮಾಡುತ್ತಾರೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಹುಚ್ಚೇಗೌಡರು ನಮ್ಮ ದೇಶ ಮಾದರೀ ದೇಶವಾಗಿತ್ತು, ಎಂಬುದಾಗಿ ಹೇಳಿದರು. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಇಂತಹ ಮಾದರಿ ಯಾವ ರಾಜ್ಯದಲ್ಲಿ ನಡೆದಿದೆ? ಎಲ್ಲಿಯೂ ನಡೆದಿಲ್ಲ. ಬೇರೆ ರಾಜ್ಯದಲ್ಲಿ ಮಂತ್ರಿಮಂಡಲದ ರಚನೆಯನ್ನು ಅವರು ಬಹು ಜಾಗ್ರತೆಯಾಗಿ ಮಾಡಿದ್ದಾರೆ. ಆದರೆ ನಮ್ಮ ದೇಶದ ಈಗಿನ ಇಂತಹ ಮಾದರಿಯನ್ನು ಬೇರೆ ದೇಶದವರು ಅನುಸರಿಸುವುದು ಬೇಡವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇರಲಿ. ಅತಿ ಜಾಗ್ರತೆಯಾಗಿ ನಮ್ಮ ಮಂತ್ರಿಮಂಡಲ ರಚನೆಯಾಗುವುದರಿಂದ ಇನ್ನೂ ಹೆಚ್ಚಿಗೆ ಗೌರವ ಬರುತ್ತದೆ. ಏಕೆಂದರೆ ಈಗ ಅವರಿಗೆ ಅಧಿಕಾರ ಸಿಕ್ಕಿದೆ; ಅದನ್ನು ಬಿಡುವ ಹಾಗೆ ಇಲ್ಲ.

ಎರಡನೆಯದಾಗಿ ಜುಡಿಷಿಯರಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಿನ್ನೆ ದಿವಸ ಶ್ರೀಮಾನ್ ಗೋಪಾಲಗೌಡರು ಹೇಳಿದರು. ನಮ್ಮ ದೇಶದಲ್ಲಿ ಕೆಲವು ವರ್ಷಗಳ ಹಿಂದೆ ಜುಡಿಷಿಯರಿಯೇ ಇಲ್ಲವೆಂದು ಹೇಳುವ ಹಾಗಿತ್ತು. ಜನಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡತಕ್ಕ ನ್ಯಾಯಸ್ಥಾನಕ್ಕೆ ಧಕ್ಕೆ ಬಂತಲ್ಲಾ ಎಂದು ಹೇಳುತ್ತಿದ್ದರು. ಆದರೆ ಕೆಲವು ದಿವಸಗಳಾದನಂತರ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದ ಕಾಲದಲ್ಲಿ ಬಹಳ ಬುದ್ಧಿವಂತರಾದ ನ್ಯಾಯಾಧೀಶರುಗಳು ಬಂದರು. ಇವರಲ್ಲಿ ಈಗ

(ಶ್ರೀ ಜಿ. ಮರುಳಪ್ಪ)

ಹೆಚ್ಚಿನ ಗೌರವವಿದೆ. ಆಗ ತಾವೂ ಸಹ ಇದ್ದಿರಿ. ಇರಲಿ. ಆ ಪುಣ್ಯ ತಮಗೂ ಸೇರಲಿ ಎಂದು ನಾನು ಹೇಳುತ್ತೇನೆ.

ಮೂರನೆಯದಾಗಿ ಹೇಳುವುದಾದರೆ ಈಗ ಒಂದು ಆಂಟಿಕರಪ್ಷನ್ ಕಮಿಟಿ ಎಂದು ಇದೆ. ಅದು ಈ ಆಂಟಿಕರಪ್ಷನ್ ಕಮಿಟಿ ಕೆಲಸಗಳನ್ನು ಮಾಡುವುದನ್ನು ಬಿಟ್ಟು ಕರಪ್ಷನ್ ಕಮಿಟಿ ರೆಗ್ಯುಲರೈಜ್ ಮಾಡುವುದಾಗಿದೆ. ಅದು ಹೇಗೆ ನಡೆಯುತ್ತಿದೆಯೋ ಅದರ ಪೋರ್ಟ್‌ಫೋಲಿಯೊ ಯಾವ ಮಂತ್ರಿಗಳಿಗಿದೆಯೋ ಗೊತ್ತಿಲ್ಲ. ಕರಪ್ಷನ್ ಕೇಸಿನಲ್ಲಿ ಸಿಕ್ಕಿರುವವರು ಯಾವ ಜಾತಿ? ಅವರಿಗೂ ಮಂತ್ರಿಗಳಿಗೂ ಏನು ಸಂಬಂಧ? ಇವರ ಮೇಲೆ ಚಾರ್ಜು ಮಾಡಿದರೆ ನಮಗೇನು ತೊಂದರೆಯಾಗುವುದೋ ಎಂಬ ಭಾವನೆ ಈ ಸರಕಾರಕ್ಕೆ ಬರಬಾರದು. ಈ ಒಳಗುಂಪುಗಳಲ್ಲಿ ಯಾವ ಗುಂಪಿಗೇ ಸೇರಿದವನಾಗಿರಲಿ ಕರಪ್ಷನ್ ಕೇಸುಗಳನ್ನು ಜಾತಿಯ ಮೇಲೆ ಅಥವಾ ಸಂಬಂಧದ ಮೇಲೆ ವಿಚಾರ ಮಾಡುವಂತಹ ಅನ್ಯಾಯಗಳು ತಪ್ಪಬೇಕು ಎಂದು ನಾನು ಹೇಳುತ್ತೇನೆ. ಆ ಕಾರ್ಯ ಇವರ ಕಾಲದಲ್ಲಿಯೇ ನಡೆದು ಈಗ ಆಗುತ್ತಿರತಕ್ಕ ಅನ್ಯಾಯಗಳು ಕೂಡಲೇ ತಪ್ಪಲಿ ಎಂದು ನಾನು ಹಾರೈಸುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಬಹಳ ಗೊತ್ತಾಗಿವೆ, ನಿಮಗೆ!

ಶ್ರೀ ಜಿ. ಮರುಳಪ್ಪ.—ಇದೆಲ್ಲಾ ನಿಮಗಿಂತ ಮೊದಲೇ ನನಗೆ ಗೊತ್ತಿದೆ.

ಇನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಕೆಲವು ವಿಷಯಗಳನ್ನು ಹೇಳಿದರು. ಅವನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಅಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆಯೆಂದು ದೇಶದಲ್ಲಿ ಎಲ್ಲೆಲ್ಲೂ ಮಾತನಾಡುತ್ತಿದ್ದಾರೆ. ಈಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಅದು ಇನ್ನೂ ಜಾಸ್ತಿಯಾಗಿದೆ. ಅದರಿಂದಲೇ ನಮ್ಮ ದೇಶ ಜಾತ್ಯತೀತ ರಾಷ್ಟ್ರವಾಗುವುದಕ್ಕೆ ಬದಲು ಜಾತೀಯ ರಾಷ್ಟ್ರವಾಗಿದೆ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನೆಲ್ಲಾ ನನ್ನ ಸ್ನೇಹಿತರಾದ ಶ್ರೀಮಾನ್ ಗೋಪಾಲಗೌಡ ಅವರು ಹೇಳಿದ್ದಾರೆ. ಅವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಸರಿಪಡಿಸುತ್ತಾರೆಂಬುದನ್ನು ನಾವು ಕಾದು ನೋಡೋಣ. ಏಕೆಂದರೆ ಹೊಸದಾಗಿ ಬಂದಿದ್ದಾರೆ.

2-30 P.M.

ಸ್ವಾಮಿ, ಪಾನನಿರೋಧದ ಬಗ್ಗೆ. ಎಲ್ಲಾ ಸ್ನೇಹಿತರೂ ಮಾತನಾಡಿದರು. ಎಲ್ಲಿ ಪಾನನಿರೋಧ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಎಲ್ಲೆಲ್ಲೂ ಪಾನನಿರೋಧ ಇಲ್ಲವೇ ಇಲ್ಲವಲ್ಲಾ! ಇದು ಸುಳ್ಳು. ಬೇಕಾದರೆ ನಾನು ಚಾಲೆಂಜ್ ಮಾಡುತ್ತೇನೆ, ಇದು ಸುಳ್ಳು ಎಂದು. ಪಾನನಿರೋಧ ಇರುವುದು ಬೆಂಗಳೂರಿನಲ್ಲೇ, ಏಕೆಂದರೆ ನಿರ್ದಿಷ್ಟವಾದ ಜಾಗ ಇದೆ. ನಿರ್ದಿಷ್ಟವಾದ ಜನ ಕುಡಿಯುತ್ತಾರೆ. ಬಾಕಿ ಕಡೆ ಎಲ್ಲೂ ಇಲ್ಲ. ಮಹಾತ್ಮಾ ಗಾಂಧಿಯವರು ಪಾನನಿರೋಧ ಮಾಡಬೇಕೆಂದು ಹೇಳುತ್ತಾ ಇದ್ದರು. ಅದರ ಬಗ್ಗೆ ಚಳವಳಿಯನ್ನು ಮಾಡಿದ್ದರು. ಅದನ್ನು ಅವರ ಆತ್ಮ ಶಾಂತಿಗಾಗಿಯಾದರೂ ಆಚರಣೆಗೆ ತರಬೇಕೆಂಬುದನ್ನು ಒಪ್ಪುತ್ತೇನೆ, ಮಹಾತ್ಮಾ ಗಾಂಧಿಯವರಿಗೆ 'ಮಹಾತ್ಮ' ಎಂಬ ಟೈಟಲ್ ಏಕೆ ಬಂತು ಎಂದರೆ ಅವರು ನುಡಿದಂತೆ ನಡೆಯುತ್ತಿದ್ದರು. ತಪ್ಪು ಮಾಡಿದರೆ ಅದು ತಪ್ಪು ಎಂದು ಹೇಳುತ್ತಾ ಇದ್ದರು. ಅದನ್ನು ಒಪ್ಪಿಕೊಳ್ಳುತ್ತಾ ಇದ್ದರು. ಆದ್ದರಿಂದಲೇ ಆ ಟೈಟಲ್ ಬಂತು. ಯಾವ ಕಾಲದಲ್ಲಿ ಪಾನನಿರೋಧ ಮಾಡಬೇಕೆಂದು ಮಹಾತ್ಮಾ ಗಾಂಧಿಯವರು ಸತ್ಯಾಗ್ರಹವನ್ನು ಹೂಡಿದ್ದರೋ ಅವರು ಈಗೇನಾದರೂ ಇದ್ದಿದ್ದರೆ ಪಾನನಿರೋಧ ಹೋಗಬೇಕೆಂದು ಅವರೇ ತಿರುಗಿ ಸತ್ಯಾಗ್ರಹ ಹೂಡಬೇಕಾಗಿತ್ತು. ಪಾನನಿರೋಧ ಯಶಸ್ವಿಯಾಗಿಲ್ಲ ಎಂದು ಪ್ರತಿಯೊಬ್ಬ ಮಂತ್ರಿಗೂ ಪ್ರತಿಯೊಬ್ಬ ಕಾಂಗ್ರೆಸ್ ಸ್ನೇಹಿತರಿಗೂ, ಎಲ್ಲರಿಗೂ ಗೊತ್ತಿದೆ. ಅವರವರ ಗ್ರಾಮದಲ್ಲಿ, ಜಿಲ್ಲೆಯಲ್ಲಿ, ತಾಲ್ಲೂಕಿನಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತು. ಬರಿ ನೊಂದುಕೊಳ್ಳುತ್ತೇವೆ, ಅನ್ಯಾಯ ಎಂದು ಹೇಳುತ್ತೇವೆ. "On the floor of the House" ಮಾತನಾಡುವಾಗ ಮಾತ್ರ "False Prestige" ಬರುತ್ತದೆ. ಇದು ಯಶಸ್ವಿಯಾಗಿಲ್ಲ, ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಒಳ್ಳೆಯದಾಗುವುದಿಲ್ಲ. ಎಷ್ಟು ಜಾಗ್ರತೆ, ದಿಟ್ಟತನದಿಂದ ಇದನ್ನು ಯಾರು ರದ್ದು ಮಾಡುತ್ತಾರೋ ಅದೇ ದಿಟ್ಟತನದ ಮಂತ್ರಿ ಮಂಡಲ ಎಂದು ಹೇಳಬಲ್ಲೆ. ಆ ರೀತಿ ಮಾಡದಿದ್ದರೆ ದೇಶದಲ್ಲಿ ಅನೀತಿ ಜಾಸ್ತಿಯಾಗುತ್ತದೆ. ಅನ್ಯಾಯ ಜಾಸ್ತಿಯಾಗುತ್ತದೆ ಎಂಬುದನ್ನು ಮನಗಾಣಬೇಕು.

ಚುನಾವಣೆಯ ಬಗ್ಗೆ ಸರ್ಕಾರದವರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು, ಯಾರೂ ಅಧಿಕಾರಿಗಳು ಪ್ರವೇಶಮಾಡಬಾರದು ಎಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಅಧಿಕಾರಿಗಳು ಅನ್ಯಾಯ ಮಾಡಿದ್ದರೆ ಹುಕುಂ ಇತ್ತು ಎಂದು ಹೇಳಿದರು. ಇನ್ನೊಂದು ಹುಕುಂ ಏನು ಎಂಬುದನ್ನು ಅವರು ಓದಲಿಲ್ಲ. ಕಾಂಗ್ರೆಸ್‌ನವರು ಹೈಗ್ರೌಂಡ್‌ನಿಂದ ಒಂದು ಸರ್ಕ್ಯುಲರ್ ಹೊರಡಿಸಿದ್ದರು. ಕಾಂಗ್ರೆಸ್‌ನವರು ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನವರಿಗೇ 'ಕಾಂಗ್ರೆಸ್' ಮಾಡಬೇಕೆಂದು ಅದರಲ್ಲಿ ಇತ್ತು. ಆ ರೀತಿ ಸರ್ಕ್ಯುಲರ್ ಇದ್ದುದರಿಂದ ಅವರೂ ಕೂಡ ಮಂತ್ರಿಗಳನ್ನು ಸೋಲಿಸಲು ಸಾಧ್ಯವಾಯಿತು. ಹತ್ತು ಜನ ಮಂತ್ರಿಗಳು ಸೋತಿದ್ದಾರೆ. ಇದನ್ನು ಬಹಳ ಎಚ್ಚರಿಕೆಯಿಂದ ಗಮನಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಂಗ್ರೆಸ್‌ನೊಳಗೇ 'ಕಾಂಗ್ರೆಸ್' ಮಾಡುವ ಸರ್ಕ್ಯುಲರ್ ನಮಗೆ ತಿಳಿಯದಲ್ಲಾ!

ಶ್ರೀ ಜಿ. ಮರುಳಪ್ಪ.—ಇದು ಅವರವರಿಗೆ ಸಂಬಂಧಪಟ್ಟದ್ದು. ನಿಮಗೆ ಯಾವಾಗ ಹೆದರಿಕೆ ಇತ್ತು ಎಂದರೆ ಸತ್ಯದ ತಳಹದಿಯ ಮೇಲೆ, ಮಹಾತ್ಮಾ ಗಾಂಧಿಯವರು ಹೇಳಿದ ಶಿಸ್ತು, ನ್ಯಾಯ, ಧರ್ಮದ ಮೇಲೆ ರಾಜ್ಯ ಕಟ್ಟುವುದಕ್ಕೆ ಹೊರಟಿದ್ದರೆ, ಅದರ ಆಧಾರದ ಮೇಲೆ ಎಲೆಕ್ಷನ್‌ನಲ್ಲಿ ಜಯಿಸಿ ಬರುತ್ತಾರೆ ಎಂಬ ಭಯ ಇದ್ದಿದ್ದರೆ ಮಾತ್ರ ಅವರನ್ನು 100 ವರ್ಷ ಆದರೂ ಅಲುಗಾಡಿಸುವುದಕ್ಕೆ ಆಗುತ್ತಾ ಇರಲಿಲ್ಲ. ಸತ್ಯವಂತರು, ಧರ್ಮಿಷ್ಠರು ಎಂಬ ಹೆದರಿಕೆ ಎಲ್ಲಾ ಹೊರಟು ಹೋಗಿದೆ, ಎಲೆಕ್ಷನ್‌ನಲ್ಲಿ ಎಲ್ಲ ಕ್ರಮಗಳನ್ನು ಉಪಯೋಗಿಸಿದ್ದಾರೆ. ಮೊನ್ನೆ ಎಲೆಕ್ಷನ್ ಲೆಕ್ಕ ಕೊಟ್ಟರು, ೬,೦೦೦ ರೂಪಾಯಿಗಳಷ್ಟು ಖರ್ಚು ಮಾಡಬೇಕು. ೬,೦೦೦ ರೂಪಾಯಿಗಳೊಳಗೆ ಖರ್ಚು ಮಾಡಿದ್ದೇವೆ ಎಂದು ಯಾರು ಯಾರು ಎದೆ ಮುಟ್ಟಿ

ಕೊಂಡು ಹೇಳುತ್ತಾರೆ ನೋಡೋಣ. ಕಾನಸ್ಟಿಟ್ಯೂಷನ್ ಓದುತ್ತೇವೆ. ಸತ್ಯ ನುಡಿಯುತ್ತೇವೆ ಎಂದು ಹೇಳುತ್ತೇವೆ.

ಶ್ರೀ ಎಸ್. ಆರ್. ಕಂಠಿ.—ನಿಮ್ಮ ವಿಷಯವನ್ನು ಹೇಳಿ.

ಶ್ರೀ ಜಿ. ಮರುಳಪ್ಪ.—ನನ್ನ ಲೆಕ್ಕವನ್ನು ಕೊಟ್ಟಿದ್ದೇನೆ, ನಾಲ್ಕು ಸಾವಿರ ರೂಪಾಂ ಚಿಲ್ಲರೇ ಎಂದು ನೀವು ಲೆಕ್ಕ ಕೊಟ್ಟ ಹಾಗೆ! (ನಗು!)

ಇದರ ಮೇಲೆ ಪಾನನಿರೋಧ ಇರುವ ಕಡೆಯಲ್ಲಿ ಎಲೆಕ್ಷನ್ ಶುರು ಆದ ಮೇಲೆ ಬೆಲ್ಲದ ಧಾರಣೆ ಏರಿ ಹೋಯಿತು. ಎಲ್ಲೆಲ್ಲೂ ಈ ಕಾಟೇಜ್ ಇಂಡಸ್ಟ್ರೀ ಶುರುವಾಯಿತು. ದೊಡ್ಡವರು, ಮಂತ್ರಿಗಳಾಗಿರುವವರೇ ಹೋಗುತ್ತಿದ್ದರು, ಸ್ವಾಮಿ. ಇಷ್ಟು ಸತ್ಯವಾಗಿ ನಮ್ಮ ಎಲೆಕ್ಷನ್ ನಡೆಯಿತು. ಮಹಾತ್ಮಾ ಗಾಂಧಿಯವರ ಹೆಸರನ್ನು ಹೇಳಿಕೊಂಡು ಇನ್ನು ಎಷ್ಟು ವರ್ಷ ರಾಜ್ಯವಾಳುತ್ತಾರೋ ನೋಡೋಣ. ಆ ವಿಷಯ ಒಂದು ಕಡೆ ಇರಲಿ.

ಸ್ವಾಮಿ, ಪಂಚವಾರ್ಷಿಕ ಯೋಜನೆಯ ಬಗ್ಗೆ ಸ್ನೇಹಿತರು ಬಹಳ ಜನ ಮಾತನಾಡಿದರು. ಮೂರನೇ ಪಂಚವಾರ್ಷಿಕ ಯೋಜನೆಗೆ ಬೇಕಾದಷ್ಟು ಹಣ ಖರ್ಚು ಮಾಡುತ್ತೇವೆ, ನಿಜ, ಒಪ್ಪಿಕೊಳ್ಳೋಣ. ಆದರೂ ಕೂಡ ಬೀದಿಯಲ್ಲಿ ಭಿಕ್ಷೆ ಎತ್ತುವವರು, ಎಂಜಲು ಎಲೆ ಎತ್ತುವವರು ಕಡಮೆ ಆಗಲಿಲ್ಲ. ಅದನ್ನು ತಪ್ಪಿಸುವುದಕ್ಕೆ ಆಗಲಿಲ್ಲ. ಒಂದು ಯೋಜನೆ ಆಯಿತು. ಎರಡು ಯೋಜನೆ ಆಯಿತು. 3ನೇ ಯೋಜನೆ ಇದು. ಎಂಜಲು ಎಲೆ ಅನ್ನ ತಿನ್ನುವವರ, ಭಿಕ್ಷುಕರ, ಕೈಕಾಲು ಇಲ್ಲದವರ ದ ಸ್ಥಿತಿಯನ್ನು ಹೋಗಲಾಡಿಸುವ ಶಕ್ತಿ ಸರ್ಕಾರಕ್ಕೆ ಬರಲೇ ಇಲ್ಲ. ಹಿಂದೆ ರಾಜರ ಕಾಲದಲ್ಲಿ ಏನು ಹೇಳುತ್ತಾ ಇದ್ದರು ಎಂದರೆ ವೈಸ್‌ರಾಯ್ ಆಗಲೀ, ಗವರ್ನರ್ ಆಗಲಿ ಬರುತ್ತಾರೆ ಎಂದಾಗ, ಚಕ್ರವರ್ತಿ ಬಂದಾಗ ಮೈಸೂರು ದೇಶ ಮಾದರಿ ದೇಶ ಎಂದು ಹೆಸರು ತೆಗೆದುಕೊಂಡರು. ಎಷ್ಟೋ ಜನ ಅನ್ನ ಇಲ್ಲದೆ, ಬಟ್ಟೆ ಇಲ್ಲದೆ ಸಾಯುತ್ತಾ ಇದ್ದರೂ ಆ ಜನರನ್ನು ಅವರಿಗೆ ತೋರಿಸುತ್ತಾರೇನು? ಅವರನ್ನು ತೋರಿಸಿ ಮಾದರಿ ದೇಶ ಎಂದು ಹೇಳಿಸಿಕೊಂಡಿದ್ದರೆ ನ್ಯಾಯ ಎಂದು ಹೇಳಬಹುದಾಗಿತ್ತು. ಮೊನ್ನೆ ಶ್ರೀಮತಿ ಕೆನಡಿ ಅವರು ಬಂದಿದ್ದಾಗಲೂ ಬಹಳವಾಗಿ ಇಂಪ್ರೂವ್ ಆಗಿದೆ ಎಂದು ಹೇಳಿಕೊಳ್ಳುವವರು ಇದನ್ನು ಏಕೆ ತೋರಿಸಬಾರದಾಗಿತ್ತು? ಎಂಜಲು ಎಲೆ ಅನ್ನ ತಿನ್ನುವವರು, ಭಿಕ್ಷೆ ಮಾಡುವವರನ್ನು ತೋರಿಸಿ ಮಾದರೀ ರಾಜ್ಯ ಎಂದು ಬರೆಸಿಕೊಳ್ಳುವುದಕ್ಕೆ ಆಗುತ್ತಿತ್ತೇ? ಹಿಂದೆ ಅವರು ಮಾಡುತ್ತಾ ಇದ್ದುದೂ ಇದೇ ಬದುಕು, ಅವರು ಇವೊತ್ತು ಮಾಡುತ್ತಾ ಇರುವುದೂ ಇದೇ ಬದುಕು ಆಗಿದೆ.

ಕಡೆಯದಾಗಿ ಒಂದು ವಿಷಯವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮುಂದೆ ಈ ಸರ್ಕಾರ ಸ್ವಲ್ಪ ಎಚ್ಚರಿಕೆಯಿಂದ ಇರಬೇಕಾದರೆ ಹತ್ತು ಜನ ಮಂತ್ರಿಗಳನ್ನು ಸೋಲಿಸಿದವರನ್ನು ಈ ಸಭೆಯಲ್ಲಿ ಮೊದಲನೇ ಸಾಲಿನಲ್ಲಿ ಕುಳ್ಳಿರಿಸಬೇಕು. ಅಷ್ಟು ಮಾಡಿದರೆ ಸಭೆಗೆ ಗೌರವ ಚೆನ್ನಾಗಿ ತೋರಿಸಿದಂತಾಗುತ್ತದೆ ಎಂದು ಹೇಳಿ ಮುಗಿಸುತ್ತೇನೆ.

ಶ್ರೀಮತಿ ಅನ್ನಪೂರ್ಣಬಾಯಿ ರಾಗಟೆ (ಕಲ್ಯಾಣಿ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದೆ ಇರುವ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ಬಯಸುತ್ತೇನೆ. ವಿರೋಧ ಪಕ್ಷದವರು ಕಟುವಾದ ಟೀಕೆಗಳನ್ನು ಮಾಡಿದ್ದಾರೆ, ನಿಜವಾಗಿಯೂ ನಮ್ಮ ಸರ್ಕಾರ ಅಂಥ ಅನ್ಯಾಯವನ್ನೇನೂ ಮಾಡುತ್ತಿಲ್ಲ ಎಂದು ನನಗೆ ಅನಿಸುತ್ತದೆ. ಏಕೆಂದರೆ ದೇಶದ ಅಭಿವೃದ್ಧಿಯ ಸಲುವಾಗಿ ಮತ್ತು ಬಡವರಿಗಾಗಿ, ಹರಿಜನರಿಗಾಗಿ ಅನೇಕ ಕಾರ್ಯಗಳನ್ನು ನಡೆಸುತ್ತಲೇ ಇದೆ. ಅದರಲ್ಲಿ ಕೆಲಸಕಾರ್ಯಗಳು ಸ್ವಲ್ಪ ನಿಧಾನವಾಗುತ್ತಾ ಇರಬಹುದು ಎಂದು ನನಗೆನ್ನಿಸುತ್ತದೆ. ಈಗ ಹೈದರಾಬಾದ್ ಕರ್ನಾಟಕದ ವಿಷಯವಾಗಿ ಭಗಿನಿ ಬಸವರಾಜೇಶ್ವರಿಯವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಒಳ್ಳೆಯ ಸಲಹೆಗಳನ್ನು ಅವರು ಕೊಟ್ಟಿದ್ದಾರೆ. ಮೆಡಿಕಲ್ ವಿಚಾರವಾಗಿ ಹೇಳಿದ್ದಾರೆ. ಗುಲ್ಬರ್ಗ ಪ್ರಾಪರ್‌ನಿಂದ ಬಂದವರೂ ಕೂಡ ಆಸ್ಪತ್ರೆಯ ವಿಚಾರವಾಗಿ ಹೇಳಿದ್ದಾರೆ. ಏಕೆಂದರೆ ನಮಲ್ಲಿ ಆಸ್ಪತ್ರೆಗಳು ಮೊದಲೇ ಕಡಮೆ. ಅದ ಆಸ್ಪತ್ರೆ ಇದ್ದಲ್ಲಿ ಒಂದು ಸಾರಿ ಒಬ್ಬ ಡಾಕ್ಟರ್ ಟ್ರಾನ್ಸ್‌ಫರ್ ಆಗಿ ಹೋದಮೇಲೆ ಅಲ್ಲಿಗೆ ಆರಾರು ತಿಂಗಳ ತನಕ ಡಾಕ್ಟರು ಬರುವುದಿಲ್ಲ. ಡಾಕ್ಟರು ಇಲ್ಲದೇ ಇದ್ದರೂ ಸರಿಯಾದ ಕಾಂಪೌಂಡರು ಇರುವುದಿಲ್ಲ. ನರ್ಸ್ ಕೂಡ ಒಳ್ಳೆಯವರು ಟ್ರೈನ್ಡ್ ಆದವರು ಇರುವುದಿಲ್ಲ. ರೋಗಿಗಳ ಮತ್ತು ಹೆಣ್ಣು ಮಕ್ಕಳ ವಿಷಯವಾಗಿ ಎಷ್ಟೋ ಹೇಳಿದ್ದಾರೆ. ಅದ್ದರಿಂದ ಹೆಚ್ಚು ಹೇಳಬಯಸುವುದಿಲ್ಲ. ಬಿದರ್ ಜಿಲ್ಲೆಯಲ್ಲಿ ನಾಲ್ಕು ಹೆಲ್ತ್ ಯೂನಿಟ್‌ಗಳು ಇವೆ. ಅದು ಆಗಿ ಎರಡು ಮೂರು ವರ್ಷ ಆಯಿತು. ಅಲ್ಲಿ ಡಾಕ್ಟರುಗಳು ಇಲ್ಲ. ಡಾಕ್ಟರುಗಳ ಅಭಾವವಿದೆ ಎಂದು ಅನೇಕ ಬಂಧುಗಳು ಹೇಳಿದ್ದಾರೆ. ಈ ಡಾಕ್ಟರುಗಳ ಅಭಾವ ಪೂರೈಸುವುದಕ್ಕೆ ಏನು ಮಾಡಬೇಕು? ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಬೇಕಾದರೆ ನಮ್ಮಲ್ಲಿ ಯಾವ ರೀತಿಯಿಂದಲೂ ಸರಿಯಾದಷ್ಟು ಸೀಟುಗಳು ಸಿಕ್ಕುವುದಿಲ್ಲ. ಹೈದಾರಾಬಾದು ಕರ್ನಾಟಕದವರಿಗೆ ರಿಸರ್ವ್‌ಮಾಡಿ ಸೀಟುಗಳನ್ನು ಕೊಡಬೇಕೆಂದು ನನಗನಿಸುತ್ತದೆ. ಏಕೆಂದರೆ, ನಾವು ಎಲ್ಲ ರೀತಿಯಿಂದಲೂ, ಎಲ್ಲ ದೃಷ್ಟಿಯಿಂದಲೂ ಹಿಂದುಳಿದಿರುವವರು. ಇದರಿಂದ ಕಷ್ಟವನ್ನನುಭವಿಸುತ್ತಿದ್ದೇವೆ. ಬೇರೆ ಮುಂದುವರಿದ ಪ್ರದೇಶಗಳವರ ಮಟ್ಟಕ್ಕೆ ನಾವು ಬರಬೇಕಾದರೆ, ನಮ್ಮ ಸಲುವಾಗಿ ಸಹಾನುಭೂತಿ ತೋರಿಸಿ ಇಂಥಿಂಥ ಕೆಲಸಗಳಿಗೆ, ಇಂಥಿಂಥ ಇಲಾಖೆಗಳಿಗೆ ಇಷ್ಟಿಷ್ಟು ಸೀಟುಗಳನ್ನು ನಮಗೆ ರಿಸರ್ವ್ ಮಾಡಿದರೆ ನಾವೂ ಇತರರ ಮಟ್ಟಕ್ಕೆ ಬರಬಹುದೆಂದು ಅನಿಸುತ್ತದೆ.

ಬಸವಕಲ್ಯಾಣದಲ್ಲಿ ಇಪ್ಪತ್ತು ಸಾವಿರ ಜನಸಂಖ್ಯೆಯಿದೆ. ಆದರೆ ಅಲ್ಲಿ ಒಂದು ಮೆಟರ್ನಿಟಿ ಆಸ್ಪತ್ರೆಯಿಲ್ಲ. ಈಗಲಾದರೂ ಜಾಗ್ರತೆ ಅದನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪಬ್ಲಿಕ್‌ವರ್ಕ್ಸ್ ಇಲಾಖೆಯಿಂದ ಅನೇಕ ಕೆಲಸ ಕಾರ್ಯಗಳು ನಡೆದಿವೆ. ಕೆಲವು ಕಡೆ ಅರ್ಧಮರ್ಧ ರಸ್ತೆಯಾಗಿ ಹಾಗೆಯೇ ಉಳಿದಿದೆ. ಇದರಿಂದ ಸಂಚಾರಕ್ಕೆ ಅಡಚಣೆಯಾಗಿದೆ. ಕಲ್ಯಾಣದಿಂದ ಹುಲಸೂರಿಗೆ, ಕಲ್ಯಾಣದಿಂದ ಸಸ್ತಾಪುರಕ್ಕೆ, ಕಲ್ಯಾಣದಿಂದ ಕಂಬಾರ ಮತ್ತು ಚಿಂಚೋಲಿಗೆ ರಸ್ತೆ, ಇಂಥ ಅನೇಕ ರಸ್ತೆಗಳು ಅರ್ಧಾಂತಕವಾಗಿವೆ, ಅವುಗಳನ್ನು ಪೂರ್ಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಬಸವಕಲ್ಯಾಣದಲ್ಲಿ ನೀರಿನ ಅಭಾವ ಬಹಳವಾಗಿದೆ. ಹೆಣ್ಣು ಮಕ್ಕಳು, ನೀರಿನ ಸೌಕರ್ಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಊರಿನಲ್ಲಿ ಕುಡಿಯಲು ಸಿಹಿ ನೀರಿಲ್ಲ. ಉಪ್ಪು ನೀರೂ ಕೂಡ ಇಲ್ಲ. ಐದು ವರ್ಷಗಳಿಂದ ಕುಡಿಯುವ ನೀರಿನ ಸೌಕರ್ಯ ಮಾಡಿ ಕೊಡಬೇಕೆಂದು ಬೇಡುತ್ತಿದ್ದರೂ

(ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ)

ಈವರೆಗೆ ಏನೂ ಆಗಿಲ್ಲ. ಇನ್ನು ಮೇಲಾದರೂ ನೀರಿನ ಸೌಕರ್ಯವನ್ನು ಸರ್ಕಾರ ತೀವ್ರತೆಯಿಂದ ಮಾಡಿ ಕೊಡುತ್ತದೆಂದು ನಂಬಿದ್ದೇನೆ. ಹನ್ನೆರಡು ಲಕ್ಷ ರೂಪಾಯಿಗಳ ಯೋಜನೆ ತಯಾರಾಗಿ ಸಂಬಂಧಪಟ್ಟ ಕಾಗದ ಪತ್ರಗಳು ಸರ್ಕಾರಕ್ಕೆ ಬಂದಿವೆ. ಕೆಲಸ ನಿಧಾನವಾಗಿದೆ. ಬೇಗ ಮಾಡಿ 20 ಸಾವಿರ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹುಮ್ನಾಬಾದು 12 ಸಾವಿರ ಜನ ಸಂಖ್ಯೆಯುಳ್ಳದ್ದಾಗಿದೆ ; ಅದು ತಾಲ್ಲೂಕ್ ಹೆಡ್‌ಕ್ವಾರ್ಟರ್ ಇದ್ದು ಬಸವ ಕಲ್ಯಾಣದಲ್ಲಿ ಇಪ್ಪತ್ತು ಸಾವಿರ ಜನ ಸಂಖ್ಯೆಯಿದ್ದರೂ ಅದು ತಾಲ್ಲೂಕಾ ಹೆಡ್‌ಕ್ವಾರ್ಟರಾಗಿಲ್ಲ. ಯಾವ ಕೆಲಸವಾಗಬೇಕಾದರೂ ಬಸವ ಕಲ್ಯಾಣದವರು ತಾಲ್ಲೂಕಾ ಹೆಡ್‌ಕ್ವಾರ್ಟರಿಗೆ ಹೋಗಬೇಕಾಗಿದೆ. ಬಸವಕಲ್ಯಾಣ ತಾಲ್ಲೂಕಾ ಹೆಡ್‌ಕ್ವಾರ್ಟರಾಗಬೇಕೆಂಬ ಪ್ರಪೋಸಲ್ ಸರ್ಕಾರದಲ್ಲಿದೆ, ಇದು ಯಾವಾಗ ಆಗುತ್ತದೆಯೋ ಯಾವ ಘಟ್ಟದಲ್ಲಿದೆಯೋ ಗೊತ್ತಿಲ್ಲ. ಬೇಗ ಅದು ತಾಲ್ಲೂಕಾ ಹೆಡ್‌ಕ್ವಾರ್ಟರ್ ಆಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿ ಕೆಲಸಗಳ ವಿಷಯದಲ್ಲಿ ಆಗಲೇ ಹೇಳಿದ್ದೇನೆ. ನಮ್ಮಲ್ಲಿ ನೀರಾವರಿ ಬಾವಿಗಳಾಗುವುದಿಲ್ಲ. ಬೋರ್‌ವೆಲ್ ಕೆಲಸಗಳೂ ನಮ್ಮಲ್ಲಿ ನಿಧಾನವಾಗಿ ನಡೆಯುತ್ತಿವೆ. ಹುಮ್ನಾಬಾದ್ ತಾಲ್ಲೂಕಿನಲ್ಲಿ ಹದಿನಾಲ್ಕು ಹದಿನೈದು ನೀರಾವರಿ ಕೆಲಸಗಳು, ಮೇಜರ್ ಮತ್ತು ಮೈನರ್ ಕೆಲಸಗಳಿವೆ. ಕೆಲವು ಮುಗಿದಿವೆ, ಕೆಲವು ಸರ್ವೆ ಆಗುತ್ತಿವೆ. ಈ ವರ್ಷ ಜಾಗ್ರತೆ ಅವುಗಳನ್ನು ತೆಗೆದುಕೊಂಡು ತೀವ್ರವಾಗಿ ರೈತರ ಸಲುವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯಾಭ್ಯಾಸದ ಸಂಬಂಧವಾಗಿ ನಮ್ಮಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಆದರೂ ಒಂದು ಕೆಲಸವನ್ನು ಮಾತ್ರ ಮಾಡಿಲ್ಲ. ಬಸವಕಲ್ಯಾಣದಲ್ಲಿ ಒಂದು ಹೈಸ್ಕೂಲು ಕಟ್ಟಡ ಆಗಬೇಕೆಂದು ಕೇಳಿದ್ದೇವೆ. ಏನು ಕಾರಣದಿಂದಲೋ ಅದು ಆಗಿಲ್ಲ. ಈ ವರ್ಷದ ಬಜೆಟ್‌ನಲ್ಲಿಯೂ ಅದಕ್ಕೆ ಹಣವೊದಗಿಸಿದಂತೆ ಕಾಣುವುದಿಲ್ಲ. ಮುಂದಿನ ಸಾರಿಯಾದರೂ ಅಲ್ಲಿಗೊಂದು ಹೈಸ್ಕೂಲ್ ಬಿಲ್ಡಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೋಷಿಯಲ್ ವೆಲ್‌ಫೇರ್ ವಿಚಾರ. ಸರ್ಕಾರದ ಈ ಇಲಾಖೆಯಿಂದ ಅನೇಕ ಕೆಲಸ ಕಾರ್ಯಗಳಾಗಬೇಕು. ಈ ಬೋರ್ಡ್ ಆದಾಗಿನಿಂದ ಹಳ್ಳಿಯ ಮಕ್ಕಳಿಗೆ ಸರಿಯಾದ ಅನುಕೂಲಗಳು ದೊರಕುತ್ತಿಲ್ಲವೆಂದೆನಿಸುತ್ತದೆ. ಹೆಣ್ಣು ಮಕ್ಕಳಲ್ಲಿ ಕಾನೂನು ತಿಳಿದವರ ಸಂಖ್ಯೆ ಕಡಮೆ. ನಮ್ಮ ತಾಲ್ಲೂಕಿನಲ್ಲಂತೂ ತೀರಾ ಕಡಮೆ. ಪಟ್ಟಣಗಳಲ್ಲಿ ಹೆಚ್ಚು ಉಪಯೋಗವಾಗುತ್ತಿದೆ, ಪಟ್ಟಣದವರಿಗೆ ಹೆಚ್ಚು ಸೌಲಭ್ಯ ದೊರಕುತ್ತಿರಬಹುದು. ಯಾವುದೇ ಯೋಜನೆಯನ್ನು ತೆಗೆದುಕೊಂಡರೂ ಹಳ್ಳಿಗಳಿಗೆ ಅದರ ಫಲ ಬಂದು ಮುಟ್ಟುವುದಿಲ್ಲ. ನಾನು ಎಷ್ಟೋ ಯೋಜನೆಗಳನ್ನು ನೋಡುತ್ತಿದ್ದೇನೆ. ಅಧಿಕಾರಿಗಳನ್ನು ಚೇರ್ಮನ್ನರಾಗಿ ಮಾಡಿದರೆ, ಹಳ್ಳಿಗಳಿಗೆ ಪೂರ್ಣ ಫಲ ಮುಟ್ಟುವುದಿಲ್ಲ. ಹೆಣ್ಣು ಮಕ್ಕಳಿಗಾಗಿ ಸೋಷಿಯಲ್ ವೆಲ್‌ಫೇರ್ ಬೋರ್ಡನ್ನು ಮಾಡಿರುವುದು. ಆದರೆ ಈ ಬೋರ್ಡ್ ಇರುವುದರಿಂದ ನಮಗೆ ಹೆಚ್ಚು ಅನುಕೂಲವಾಗುತ್ತಿಲ್ಲವಾದುದರಿಂದ ಇದನ್ನು ಸರ್ಕಾರದಿಂದಲೇ ನಡೆಸುವುದು ಉತ್ತಮವೆಂದು ನನ್ನ ಅಭಿಪ್ರಾಯ.

ಫಾರೆಸ್ಟ್ ಇಲಾಖೆಯ ವಿಚಾರವನ್ನು ಶ್ರೀಮತಿ ಬಸವರಾಜೇಶ್ವರಿಯವರು ಹೇಳಿದರು. ನಮ್ಮ ಕಡೆ ಫಾರೆಸ್ಟಿಗಾಗಿ ಹತ್ತು ಹದಿನೈದು ವರ್ಷಗಳಿಂದ ಜಮೀನುಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಬಿದರೆ ಜಿಲ್ಲೆಯಲ್ಲಿ ಎಷ್ಟೋ ಜಮೀನನ್ನು ಫಾರೆಸ್ಟಿಗೆ ಸೇರಿಸಿದ್ದಾರೆ. ನಮಗೆ ಇದು ಸಮಂಜಸವಾಗಿ ಕಾಣುವುದಿಲ್ಲ. ಬಡವರಿಗೆ ಜಮೀನು ಕೊಟ್ಟು ಅನುಕೂಲ ಮಾಡಿಕೊಡಬೇಕೆಂದಿರುವಾಗ, ಹದಿನೈದು ಇಪ್ಪತ್ತು ವರ್ಷಗಳಿಂದ ಬೇಸಾಯ ಮಾಡಿಕೊಂಡು ಬಂದಿರುವ ಜಮೀನನ್ನು ಫಾರೆಸ್ಟಿಗೆ ಸೇರಿಸಿಕೊಳ್ಳಬೇಕೆಂದು ಮಾಡಿರುವುದರಿಂದ ಕೆಲವು ರೈತರಿಗೆ ಅನನುಕೂಲವಾಗಿದೆ. ಸದ್ಯಕ್ಕೆ ಇದನ್ನು ನಮ್ಮಲ್ಲಿ ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಚಾರ. ಇದನ್ನು ನಾನು ಹೆಚ್ಚು ಹೇಳಬೇಕಾಗಿಲ್ಲ. ನಮ್ಮ ಭಾಗದಲ್ಲಿ ಪೋಲೀಸ್ ಆಡಳಿತ ಸರಿಯಾಗಿ ನಡೆಯುತ್ತಿಲ್ಲ. ಇಷ್ಟು ದಿವಸ ಆದುದು ಆಗಿ ಹೋಯಿತು. ಈಗ ಶ್ರೀಮಾನ್ ಆರ್. ಎಂ. ಪಾಟೀಲರು ಆ ಖಾತೆಗೆ ಮಂತ್ರಿಯಾಗಿದ್ದಾರೆ. ಇನ್ನು ಮುಂದಾದರೂ ಕೆಲಸ ಒಳ್ಳೆಯ ರೀತಿಯಿಂದ ನಡೆಯುವಂತೆ ಮಾಡುತ್ತಾರೆಂದು ನಂಬಿದ್ದೇನೆ.

ನಾನು ಇನ್ನು ಹೆಚ್ಚು ಮಾತನಾಡುವುದಿಲ್ಲ. ಹೈದರಾಬಾದು ಕರ್ಣಾಟಕ ಪ್ರದೇಶಕ್ಕೆ ಹೈದರಾಬಾದು ಕರ್ಣಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದು ಪ್ರತ್ಯೇಕವಾಗಿ ಮಾಡಿದರೆ ಒಳ್ಳೆಯದು. ಏಕೆಂದರೆ, ಆ ಪ್ರದೇಶದಲ್ಲಿ ನಾವು ಎಲ್ಲದರಲ್ಲಿಯೂ ಹಿಂದುಳಿದಿರುವುದರಿಂದ ಇಂಥ ಒಂದು ಬೋರ್ಡನ್ನು ರಚನೆ ಮಾಡಿದರೆ ಒಳ್ಳೆಯದು. ಹಿಂದೆ ಮಂತ್ರಿಯಾಗಿದ್ದವರು ಕೂಡ ಈ ಸಲಹೆ ಮಾಡಿದ್ದಾರೆ. ಹೀಗೆ ಮಾಡಿದರೆ ನಾವು ಇತರರ ಮಟ್ಟಕ್ಕೆ ಬರುತ್ತೇವೆ. ಇಲ್ಲದಿದ್ದರೆ ಎಷ್ಟು ಹೇಳಿದರೂ ಸಾಧ್ಯವಾಗುವುದಿಲ್ಲ, ಈ ರೀತಿ ಮಾಡಿ ಹೈದರಾಬಾದು ಕರ್ಣಾಟಕ ಮುಂದೆ ಬರುವಂತೆ ಮಾಡುತ್ತಾರೆಂದು ನಂಬಿ ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟುದಕ್ಕಾಗಿ ನಾನು ಅಧ್ಯಕ್ಷರನ್ನು ವಂದಿಸುತ್ತೇನೆ.

Sri G. VENKATAI GOWDA (Palyam).—Mr. Speaker, Sri, it is with a sense of frustration and regret that I have to oppose the motion for Vote on Account before us for the reasons that I am going to assign. A budget indicating a deep crisis, in my opinion, has been presented to us the other day by the Chief Minister. In my opinion it is neither imaginative nor inspiring. This budget, in my opinion, is not that, expected of a developing economy. Last year, during 1961–62, we had a deficit budget of Rs. 4 crores and odd, but for the coming year the deficit is going to be Rs. 3 crores more. Taking into consideration the additional expenditure that we have incurred to the extent of Rs. 28 crores, the deficit is likely to be more. As pointed out by Sri Krishna

Shetty this developing economy has no comparison with deficit financing. We are aware of the consequences of deficit financing, as it leads to inflation. In addition to that, as my friend pointed out, we have not been provided with any relieving features as in the neighbouring State of Madras where they have promised old age pension scheme. In the improvement of electricity and other things they are far ahead of us. Here, instead of giving us some of those relieving features, they have proposed additional taxes. The Hon'ble Chief Minister might say that no additional taxation has been proposed, but on page 14 of the Finance Minister's speech it is stated:

> "On this basis, the year is expected to close with a minus cash balance of Rs. 688·52 lakhs which will have to be covered by Ways and Means Advances, temporarily, to be adjusted later from additional taxation measures."

To my mind this means that they are going to take advance from the Reserve Bank temporarily and they will adjust this by imposing additional taxation. In the history of Mysore, this is the first time the Government of Mysore proposes to take an advance from the Reserve Bank temporarily, and if it could not be repaid by the 31 st of that year, naturally they would impose some sort of interest. That would amount to another borrowing. Even the West Bengal Government did that during the Second Plan and they stood condemmed by the Second Finance Commission. To my knowledge, so far as the Southern States are concerned, no other State has resorted to this ways and means advance. From a rise in taxation, it will be apparent whether it is consistent with a socialistic or developing economy.

I would show from the figures mentioned in the Budget Speech of the Hon' ble Finance Minister how during the last 5 years the taxes have increased from 10·39 crores to 13·71 crores, *i.e.*, an additional increase of three and odd crores, while the indirect taxes have increased by Rs 13 crores, *i.e.*, by almost double the amount. So, the burden on the common man has evidently increased. I would have appreciated if at the same time we had an increase in the assets of the State, but that is not so. The non-tax revenue indicates definitely a fall. If the Hon'ble Minister for Finance sees page 21 of his speech, he will see that, so far as the accounts for 1960-61 are concerned, the net revenues from the Forest Department were Rs. 466·33 lakhs and in the year 1962-63 it is getting less. Likewise, the net receipt from Road Transport Schemes, so far as the revised estimates for 1961-62 are concerned, were minus 42·92 lakhs and for the year 1962-63, you have not shown anything. It shows it is on the decline. So, the assets have not been correspondingly increasing consistent with the rise in the taxes. The figures do not give the net profit; they only show the net assets. If we take into account all these things and find out the net profit, it will be still worse in my view. Therefore, the investment by the Government of Mysore is not sound or healthy. Proper investment based on commonsense is totally absent in all these cases. This deficit or the financial position of the State is due to the policies pursued by this Government for all these years and though we have been warning the Government at that time to avoid wasteful extenditure and to effect eeconomy in expenditure, it has gone unheeded. I shall give one instance. The Madras Secretariat has got about 1,500 persons, but so far as the Mysore Secretariat is concerned, I am told there are about 2,000 persons. While Madras with one and a half times the population can manage with 1,500 personnel, is it not possible for us to manage with a lesser number of persons? I do not know whether Sri Ramachandra Rao has taken this matter into consideration. It is said that he has made so many recommendations. I request the Chief Minister to see that the report is placed before this House in order to enable us to make some observations which may help the Government to take a decision.

Sri S. R. KANTHI.—It is under print and as soon as we receive the copies, they will be given to the members.

Sri C. J. MUCKANNAPPA.—Have the Government taken any decision on that report?

Sri S. R. KANTHI.—Not yet.

Sri G. VENKATAI GOWDA.—We have been telling time and again that the non-development expenditure is mounting up and that it has got to be cut down.

Let me now come to the debt position. We have been seeing enormous increase in the debt. At the end of the Third Plan, according to my calculations, I fear that the Government of Mysore will have to pay at least rupees fifteen crores every year towards debt service. If that is so, we have to give 25 per cent of the total revenue towards interest charges. At this rate, by the end of 1962–63 we will have incurred a debt of Rs. 190 crores. In this connection, I would like to submit that all the suggestions and representations made on the floor of the House have not been implemented. We have been telling this Government to make out a proper case in respect of consolidating the debts or rationalising the debts or getting a longer period for repayment. To my knowledge, nothing has been done in this respect though the Chief Minister is optimistic in this matter. On page 15 of his speech the Finance Minister has also said:

> "This excludes our liability on account of the share of debt due to other States as a result of the States Reorganisation."

I venture to submit that for the last 5½ years the Government has not been able to finalise this inter-State liability. I do not know whether they have finally settled this matter. The Government of Mysore are obliged to pay their share of the debt due to other States as a result of the States Reorganisation. The former Finance Minister, Sri Mariappa, used to tell us that it has been allocated on the population basis. Now Rs. 20 lakhs have been put down as the burden on account of the Madras Karnatak Area. I want to know whether this sum of Rs. 20 lakhs which has been taken as a liability so far as that part of Mysore State is concerned has been spent in Madres Karnatak area. If that amount has not been spent, what justification is there for us to accept that liability? Is there any principle behind it or does it stand to reason?

Mr. SPEAKER.—The Hon'ble Member will continue after the recess. The House will now adjourn and meet again at 3-30 P.M.

The House adjourned for recess at Three of the Clock and reassembled at Thirty Minutes past Three of the Clock.

[MR. SPEAKER in the Chair]

Sri G. VENKATAI GOWDA.—I was submitting that the Government of Mysore had committed a mistake if not a blunder, in accepting the liability to pay the share of debt due to other States as a result of integration. While conceding the liability to pay the share of burden of debt, did not the Government try to lay claim on the assets created by these people who have come and joined Mysore? My submission is, the Hon'ble Speaker also knows, that Hyderabad Karnatak people have contributed to the assets in Hyderabad. Bombay Karnatak people have contributed for the creation of assets in Bombay; likewise, Madras people have also centributed their mite to create assets in Madras. Did it not occur to the Government of Mysore that they should lay claim at least to some portions of these assets that have been created as a result of combined contribution of these people? At least they could have claimed some compensation and by that way, they could have reduced the burden. My submission is that the Government of Mysore have not, in spite of the suggestionmade in this House, chosen to lay any claim so far assets that have been created as a result of contribution made in the areas that have now come and joined Mysore, Sir, it has been suggested that a major portion of this investment is however unproductive. That is another objection that we are taking. My suggestion in this respect is that the debts have got to be

rationalised; borrowing shall have to be used on productive schemes ; period of repayment has to be increased and the inter-State liabilities as well as assets have to be finalised. Sir, failure to maximise collections or implement betterment levy is, I should say, another folly that has been committed by the Government of Mysore. Betterment levy officers have been appointed.

I have read from the Report of the Subordinate Legislation Committee that the rules framed in that behalf have been struck off as without jurisdiction. So, I am submitting that these Officers have been paid by the Government without assigning any work for them. Does this connote economy ? Sir, let me draw your attention to this aspect; does the Government seriously or honestly believe that the appointment of the Deputy Ministers is absolutely necessary ? It has been suggested that even without Deputy Ministers the administration could be carried on. It is said that the Minister would draw Rs. 800 or Rs. 900 by way of salary. Sir, during the last five years, I have made calculations, each Minister has taken nearly Rs. 3,000 a month. Why should there be all this confusion ? They say that they are taking Rs. 900. Let them fix their salary at Rs. 2,000, I have no objection. Let there be some basis on which these things may be worked out. Each Minister on an average has taken Rs. 3,000 or more per month during the last year. I have calculated that from the figures furnished in this House.

Sri KADIDAL MANJAPPA (Sringeri).—Does it include T.A. also ?

Sri G. VENKATAI GOWDA.—Yes.

Sri KADIDAL MANJAPPA.—That does not go to the pockets of the Ministers.

Mr. SPEAKER.—Perhaps travelling allowance of the Staff also might have been included in it.

Sri G. VENKATAI GOWDA.—Let them take Rs. 3,000. Let them spend out of their pockets for T.A. There must be some basis. Without maximising collections, I ask, on what basis the Government wants to levy additional taxation ? Maximum collection has not been made ; recovery of loans has not been made. In spite of all these things, it has been said that additional taxation measures have got to be undertaken. In order to avoid wasteful expenditure being incurred, this is the suggestion I am just now submitting. Another folly that has been committed is their not getting sufficient aid from the Central Government either for the plan outlay or otherwise. I am submitting that the Government of Mysore have not clearly put the case before the Third Finance Commission. You could see the award that has been made. They have increased it by only Rs. 75 lakhs. They have increased it from Rs. 6 crores to Rs. 6.75 crores. In Kerala during the Second Plan, they were given Rs. 1.5 crores. Now, it has been enhanced to Rs. 6 crores. We have been now given only Rs. 6.75 crores, that is, only Rs. 75 lakhs more. So far as the share of income tax is concerned, we are given 20 per cent on the basis of income tax collections and 80 on population basis. That is not advantageous so far as Mysore is concerned. It is advantageous only to industrially-developed States like West Bengal and Bombay. So, I am submitting even with regard to Third Finance Commission, the Mysore Government have not put any claim properly. They ought to have told the Commission that as a result of integration we have to bear such and such additional burdens and have so many commitments. They should have convinced the Planning Commission and seen that something more is given to our State. It is said that the Third Finance Commission could not deal with the problem of debt as it was outside the scope of the Terms of Reference. This could have convinced the Government of India. They have got to put the case properly before the Government of India and see that the burden is reduced as far as possible. Even in respect of the plan outlay, you know we have been given Rs. 140 crores Central assistance when we are asked to raise Rs. 110 crores. Our case is similar to that of West Bengal whose plan outlay is almost the same.

(SRI G. VENKATAI GOWDA)

They are given 60 per cent Central assistance while we have been given only 49 per cent. Advanced States like Madras and Andhra have been given 66 or 67 per cent Central assistance. What prevented our State from getting our just claim? We do not want any advantage to be given to us. My submission is that we have got a proper case ; we have spent most of the money under the second plan, that is about Rs. 142 crores out of Rs. 145 crores. Our past performance is good and our resources are more. We have got to exploit all the resources. In spite of all these things, to get of Central assistance I should say, is something which cannot be reconciled with.

Sir, so far as the industrial policy of the Government of Mysore is concerned, I should say it has failed totally in spite of the developmental policy of our industries. So far as the Government—managed concerns are concerned, time and again, we have suggested to the Government to avoid high cost of production and earn profits. But if you could see the progress that has been made during the last five years I should say, it is not up to the mark. The Hon'ble Speaker knows, the other day I have sent in an adjournment motion with respect to the statement made by the Hon'ble Union Minister for Finance in the Lok Sabha to the effect that the Government of Mysore has agreed in principle to transfer the administrative control of the K.G.F. to the control of the Government of India. But during the last session on a special motion, this subject was considered in this House and the then Chief Minister Sri B. D. Jatti gave an assurance that this was not so. So, what the Hon'ble Finance Minister said in the Lok Sabha is contrary to the assurance given by our own Chief Minister last time. Sir, more profit-earning concerns are sought to be taken over by the Government of India. I should say, so far as the taking over of K.G.F. is concerned, it offends the principle of autonomy. We could see in recent years, it is running on profit or more efficiently than in previous years. The cost per ton is reduced and now we have come to a position when the Government of India is thinking of taking control of it. Why should not they think of taking other concerns ? It is perhaps because in their view they are not earning profit. I submit in this connection that the Government of Mysore has got to take a decision and say that we are not inclined to transfer this control of the management to the Government of India.

So far as per capita income is concerned, I should say that it is far below the all-India average. During all these years, the per capita income has not come up to the mark expected. The taxation is more, the debt position is rising and no reliefs are given to the people and the per capita income has also not come up to the mark. During 1959-60 the per capita income of all-India average was 9.4 and in Mysore also it was the same. In 1961-62, the all-India average of per capita income is 17.2 whereas in Mysore it is only twelve. So, something has got to be done. My objection to impose taxation is, the Government have not made efforts to collect the arrears of loans. Without maximising the collection of arrears of loans what moral sanction the Government have to impose additional taxes ? That is my objection. There are very many ways to avoid wastages and give better administration to the people of the State.

With these words I thank the Chair for giving me an opportunity to speak.

[Sri L. B. BIRJE (Khanapur) spoke in Marathi.]

4-00 P.M.

Mr. SPEAKER.—The Hon'ble Minister for Health will reply.

Sri K. NAGAPPA ALVA (Minister for Health).—Sir,...

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಇನ್ನೂ ಅನೇಕ ಜನ ಮಾತನಾಡುವವರಿದ್ದಾರೆ. ಆದ್ದರಿಂದ ಇನ್ನೊಂದು ಸ್ವಲ್ಪ ಅವಕಾಶಕೊಡಬೇಕು, ಮಂತ್ರಿಗಳು ಬೇಕಾದರೆ ನಾಳೆ ಉತ್ತರ ಕೊಡಬಹುದು.

Mr. SPEAKER.—I am sorry, I will not be able to comply with the request that the Ministers may reply tomorrow.

After this motion is passed, it has to be published and the Appropriation Bill has to come. At the time of the Appropriation Bill I shall give ample opportunity to those members who could not participate in the present debate.

Sri K. NAGAPPA ALVA.—Sir, many speakers have expressed their opinions. They have criticised and at the same time they have given suggestions in the nature of constructive criticism. Taking all these things into consideration I wish to make a few remarks.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ಕನ್ನಡದಲ್ಲಿ ಹೇಳಿದರೆ ಒಳ್ಳೆಯದು.

ಶ್ರೀ ಕೆ. ನಾಗಪ್ಪ ಆಳ್ವ.—ಇದು ಟೆಕ್ನಿಕಲ್ ಸಬ್ಜೆಕ್ಟ್. ಆದ್ದರಿಂದ ನಾನು ಕನ್ನಡದಲ್ಲಿ ಭಾಷಣ ಮಾಡಬೇಕೆಂಬ ಅಪೇಕ್ಷೆ ತಮಗೆ ಇದ್ದರೆ ನನ್ನದೇನು ಅಡ್ಡಿ ಇಲ್ಲ. ಆದರೆ ಕನ್ನಡದಲ್ಲಿ ಭಾಷಣ ಮಾಡುವ ಕಾಲದಲ್ಲಿ ಹಲವು ಟೆಕ್ನಿಕಲ್ ಶಬ್ದಗಳು ಬರುವುದಕ್ಕೆ ಸಾಧ್ಯವಿದೆ. ಅದಕ್ಕೆ ತಾವು ಕ್ಷಮಿಸಬೇಕು. ಹಲವು ಮಂದಿ ಸದಸ್ಯರು ಭಾಷಣ ಮಾಡುತ್ತಾ......

Sri C. J. MUCKANNAPPA.—I rise to a point of order. The Minister cannot switch on from one language to another in the same speech. He began his speech in English, but just because some member requested him to speak in Kannada he has switched over to Kannada. He cannot switch over to another language like that. Today let him speak in English and from tomorrow onwards he may speak in Kannada.

Mr. SPEAKER.—Let the Hon'ble Minister continue. We will see how he continues.

ಶ್ರೀ ಕೆ. ನಾಗಪ್ಪ ಆಳ್ವ.—ಅವರ ಭಾಷಣಗಳನ್ನು ಕೇಳಿ ನನಗೆ ತುಂಬ ಸಂತೋಷವಾಗಿದೆ. ಟೀಕೆಗಳು......

Sri C. J. MUCKANNAPPA.—What happened to the point of order? There is a rulinfg from the Chair that in the course of the same speech no member an switch on to another language. He begain his speech in English. Can he now switch on to Kannada?

Mr. SPEAKER.—The Hon'ble Minister for Health began his speech in English. A request was made to him by some member that he might speak in Kannada. He was attempting to do it. He had not made up his mind to speak in Kannada then. In view of the fact that he has begun his speech in English he will continue his speech in English and not switch on to Kannada.

Sri K. NAGAPPA ALVA.—I am very glad that the criticism was not of a very serious type considering the criticism that was made about the other Departments. I understand that they have been very sympathetic in this regard because they know the difficulties of Government. In many cases they have also made constructive criticism. The main points that were raised were the about supply of medicines to hospitals and want of doctors in good many hospitals. I assure them that in the light of the criticism and the sugges-ions they have made, Government will look into all these things and try to set right these things at the earliest possible time. I have been trying to gather opinions from the public, from representatives of the public and also from the officers concerned.

Regarding rural medical service I want to say that every attempt will, be made hereafter to see that rural medical service reaches the people at the proper time.

Another point that was raised was about medical education. I would like to say that Government will have to proceed somewhat slowly and carefully in this regard. I do not want to speak at length on this subject of medical schools, but at the same time I must say that it is very necessary that we must try to fit in ourselves with the all-India set-up. I confess that today we have not come up to the level of the all-India pattern in this regard. We will make an earnest effort to ese that medical education of a high order, medical education of uniform standard is given. I may also mention in this connection that the Government of India, the Indian Medical Council, the State Governments and the Universities all have to consider these things and devise the correct step to be taken.

Then the next point that was touched was about the GCAM students who are on strike during the last 2½ months. Their demand is that they should be included in the integrated system. As it is, it is not possible. You are aware

(SRI K. NAGAPPA ALVA)

that the Ayurvedic Medical Practitioners Bill was passed and the students' representatives had represented their case to the Select Committee. The Select Committee were also of the opinion that it was not an integrated system and after that a Bill was passed. Now, the Ayurvedic Board has to be formed and we will refer their request for sympathetic consideration to this Board as soon as it is formed. The Government at this stage cannot take a decision and assure that; regarding their reasonable requests the Government will consider them sympathetically and I appeal to them to withdraw the strike and create a good atmosphere.

A reference was made by my friend Sri Muckannappa about an incident in the Tumkur Hospital just a few days back. The facts of the case are that a lady was admitted in the Tumkur Hospital at 3 A. M. on the 22nd. She was attended to by the lady doctor. The D. M. O. was also consulted and he left the place on other duty. Later on, the lady doctor found it difficult to take up the operation and at that stage I am glad to say that a representative of the press informed the D. M. S. of these things and the D. M. S. took immediate action and expert aid was given. An expert lady doctor was sent to the spot with other assistance and the operation was done. The patient was saved. On the 24th that patient was brought to the Vanivilas Hospital and I have been getting progress reports since then. I thank the press representative for having given the correct information at the correct time and I thank the Government servants and officers for taking prompt action at the proper time. We must also thank the D. M. S. and other doctors for taking prompt action. The life of the lady has been saved.

Sri S. GOPAL GOWDA (Thirtahalli).—Sir, on a point of clarification. ಮಾನ್ಯ ಮಂತ್ರಿಗಳು, ಇಂಥ ಒಂದು ಸುದ್ದಿಯನ್ನು ಪತ್ರಿಕಾ ವರದಿಗಾರರು ವೈದ್ಯ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಕಳುಹಿಸಿ ಬಹಳ ಉಪಕಾರ ಮಾಡಿದರು; ಅವರಿಗೆ ಧನ್ಯವಾದಗಳು; ಸಲ್ಲಬೇಕಾಗಿವೆ ಎಂದು ಹೇಳಿದರು. ಹಾಗಾದರೆ ಮೊದಲೇ ಆ ಕೆಲಸದಲ್ಲಿ ನಿರತರಾಗಿದ್ದ ಲೇಡಿ ಡಾಕ್ಟರು ಮತ್ತು ಇತರರಿಗೆ ಹೀಗೆ ಮಾಡಬೇಕೆಂದು ಹೊಳೆಯಲಿಲ್ಲವೆ? ಯಾವಾಗ ಆ ಕೆಲಸ ತಮ್ಮಿಂದ ಸಾಧ್ಯವಿಲ್ಲವೆಂಬುದು ತಿಳಿಯಿತೋ ಆಗ ಅವರೇ ಏಕೆ ಮೇಲ್ಪಟ್ಟವರಿಗೇ ತಿಳಿಸಲಿಲ್ಲ ?

Sri K. NAGAPPA ALVA.—I wanted to say that a report was also got through the D.M. S. and certain things have been made very clear in that report. I have called for some more information in this regard and if there is any negligence proper action will be taken in this matter.

With these words, I appeal to the members of this august House through the Speaker to give their fullest co-operation to discharge my duties to see that the administration is geared up in every respect and it becomes good and efficient so that we can serve the people in every respect, especially regarding their health. Thank you.

ಶ್ರೀ ಎಸ್. ಗೋಪಾಲಗೌಡ.—ಮೆಡಿಕಲ್ಗೆ ಸಂಬಂಧಪಟ್ಟಹಾಗೆ ನನ್ನ ಭಾಷಣದಲ್ಲಿ ಎಂ. ಎಸ್. ಮತ್ತು ಎಂ. ಡಿ. ರಿಸರ್ಚ್ ಕ್ಲಾಸ್ ತೆಗೆದಿದ್ದ ಬಗ್ಗೆ ನನ್ನ ಆಕ್ಷೇಪಣೆಗಳು ಇದ್ದುವು. ಅದರ ಬಗ್ಗೆ ಮಾನ್ಯ ಸಚಿವರು ಏನೂ ಉತ್ತರ ಕೊಟ್ಟಂತೆ ಕಾಣುವುದಿಲ್ಲ.

Sri K. NAGAPPA ALVA.—That will be considered.

ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಮೆಡಿಕಲ್ ಆಯುರ್ವೇದ ಕಾಲೇಜ್ ಸಂಪಿನ ಬಗ್ಗೆ ಸಲುವಾಗಿ ಎಷ್ಟು ದಿವಸಗಳಲ್ಲಿ ನಿರ್ಣಯ ಮಾಡುತ್ತೀರಿ ? ತಾವು ಡಾಕ್ಟರಿದ್ದೀರಿ ಆ ಬಗ್ಗೆ ತಮ್ಮ ಅಭಿಪ್ರಾಯ ಹೇಳಬೇಕು.

ಶ್ರೀ ಕೆ. ನಾಗಪ್ಪ ಆಳ್ವ.—ನನ್ನ ಅಭಿಪ್ರಾಯವನ್ನು ಇಷ್ಟರಲ್ಲೇ ಸ್ಪಷ್ಟಮಾಡುತ್ತೇನೆ. ಈಗ ಸರ್ಕಾರ ಯಾವ ಒಂದು ತೀರ್ಮಾನಕ್ಕೂ ಬರಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಸಂಬಂಧಪಟ್ಟ ಬಿಲ್ ಚರ್ಚೆಯಾಗುವ ಸಂದರ್ಭದಲ್ಲಿ ಕೂಡ ಅವರ ಬೇಡಿಕೆಗಳನ್ನು ಕಮಿಟಿಯ ಮುಂದೆ ಇಟ್ಟರೂ ಕೂಡ ಆ ಸಮಯಲ್ಲಿ ಆಯುರ್ವೇದವನ್ನು ಮಾತ್ರ ಪ್ರಾಕ್ಟೀಸ್ ಮಾಡಬೇಕು ಎಂಬ ಅಭಿಪ್ರಾಯವನ್ನಾಗಿ ಕೊಟ್ಟ ಪ್ರಕಾರ ಆ ಬಿಲ್ ಪಾಸಾಗಿದೆ. ಬೋರ್ಡು ಸದ್ಯದಲ್ಲೇ ಆಗುತ್ತದೆ. ಬೋರ್ಡಿಗೆ ಈ ವಿಚಾರವನ್ನು ರೆಫರ್ ಮಾಡಿದನಂತರ ಇಂಟಿಗ್ರೇಟೆಡ್ ಸಿಸ್ಟಮ್ ಕೂಡಿಸಬೇಕೇ ಇಲ್ಲವೇ ಎನ್ನುವ ವಿಚಾರದಲ್ಲಿ ಬೋರ್ಡು ಅಭಿಪ್ರಾಯ ಕೊಡಬೇಕು. ಈ ಮಧ್ಯೇ ಅವರ ಕೇಳಿಕೆಗಳ ವಿಷಯದಲ್ಲಿ ಸರ್ಕಾರ ಸೂಕ್ತ ಆಲೋಚನೆ ಮಾಡುತ್ತದೆ ಎಂಬುದಾಗಿ ಮಾತ್ರ ಈ ಸಂದರ್ಭದಲ್ಲಿ ಹೇಳಬಹುದು ಆದ್ದರಿಂದ ಅವರು ಸ್ಟ್ರೈಕ್ ವಿತ್‌ಡ್ರಾಮಾಡುವುದು ಒಳ್ಳೆಯದು ಮತ್ತು ನ್ಯಾಯ ಎಂದು ಹೇಳುತ್ತೇನೆ.

ಶ್ರೀ ಗಂಗಾಧರ ನಾಮೋಷಿ.—ಎಷ್ಟು ದಿವಸಗಳಲ್ಲಿ ಬೋರ್ಡ್ ಕಾನ್ಸ್ಟಿಟ್ಯೂಟ್ ಆಗಬಹುದು ? ಎಷ್ಟು ದಿವಸಗಳಲ್ಲಿ ಆ ವಿಷಯವನ್ನು ಈ ಸಭೆಯ ಮುಂದೆ ತರುತ್ತೀರಿ ?

Mr. SPEAKER.—He has given the answer. It may not be satisfactory to you. But he has dealt with the point.

*ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಅನೇಕ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸುತ್ತಾ ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ನನ್ನ ಖಾತೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಈ ಸಭೆಯಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಕೆಲವು ವಿವರಣೆಗಳನ್ನು ಕೊಡುವುದು ನನಗೆ ಅವಶ್ಯ ಎನಿಸುತ್ತದೆ. ಆದಕ್ಕೋಸ್ಕರವಾಗಿ ಆ ಬಗ್ಗೆ ಕೆಲವು ವಿವರಣೆಗಳನ್ನು ಕೊಡುವುದಕ್ಕಾಗಿ ನಾನು ನಿಂತಿದ್ದೇನೆ. ವಿರೋಧ ಪಕ್ಷದ ನಾಯಕರು ಒಂದು ಆಪಾದನೆಯನ್ನು ಸರ್ಕಾರದ ಮೇಲೆ ಮಾಡಿದರು. ಅದು ಏನೆಂದರೆ ಕಾಂಗ್ರೆಸ್ ಸರ್ಕಾರ ಒಬ್ಬರ ಮಂತ್ರಿಮಂಡಲ ಹೋಗಿ ಇನ್ನೊಬ್ಬರ ಮಂತ್ರಿಮಂಡಲ ಬಂದ ತಕ್ಷಣ ಮೊದಲನೆಯವರು ಮಾಡಿದಂಥ ಎಲ್ಲಾ ನಿರ್ಣಯಗಳನ್ನೂ ಕಡೆಗಾಣಿಸಿ, ಪ್ರತ್ಯೇಕವಾಗಿ ಅದಕ್ಕೆ ತದ್ವಿರುದ್ಧವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಆಪಾದನೆಯನ್ನು ಮಾಡಿದರು. ಮತ್ತು ಪ್ರತಿಯೊಂದು ಮಂತ್ರಿಮಂಡಲವೂ ಕೂಡ ತಮ್ಮ ತಮ್ಮದೇ ಆದಂಥ ಧ್ಯೇಯ ಧೋರಣೆಗಳನ್ನು ಹಾಕಿಕೊಂಡು ಹೋಗುತ್ತಾರೆ. ಅವರಲ್ಲಿ ನಿಶ್ಚಿತವಾದ ಧ್ಯೇಯ ಧೋರಣೆಗಳಿಲ್ಲ, ಎಂದು ಆಪಾದನೆ ಮಾಡಿದರು. ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಪ್ರಾಜೆಕ್ಟುಗಳಿಗೆ ಸಂಬಂಧಪಟ್ಟಂತೆ ಕೆಲವು ದಿನಪತ್ರಿಕೆಗಳಲ್ಲಿ ಬಂದ ವರದಿಯ ಆಧಾರದ ಮೇಲೆ ಒಂದು ಆಪಾದನೆಯನ್ನು ಮಾಡಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಮುಖ್ಯ ಮಂತ್ರಿಗಳು ಪ್ರೆಸ್ ಕಾನ್ಫರೆನ್ಸಿನಲ್ಲಿ ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವ ಹಾಗಿಲ್ಲ ಎಂದು ಸರ್ಕಾರ ನಿರ್ಧಾರ ಮಾಡಿದೆ ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಎಂದು ಅವರು ಹೇಳಿದರು.

ಶ್ರೀ ಬಿ. ಹುಚ್ಚೇಗೌಡ.—ಮಾನ್ಯ ಸದಸ್ಯರುಗಳು ಹೇಳಿದ್ದು ಏನೆಂದರೆ ಆ ಸ್ಕೀಮುಗಳನ್ನು ರಿಕನ್ಸಿಡರ್ ಮಾಡುತ್ತೇವೆ ಎಂದು ಮುಖ್ಯ ಮಂತ್ರಿಗಳು ಹೇಳಿದರು ಎಂದು ಅವರು ಹೇಳಿದ್ದಾರೆಯೇ ಹೊರತು, ತೀರ್ಮಾನ ಮಾಡಿದ್ದಾರೆ; ಬಿಟ್ಟುಬಿಡುತ್ತಾರೆಂದು ಹೇಳಿದರು ಎಂದು ಅವರು ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅವರು ಹೇಳಿದ್ದನ್ನು ನಾನು ತಿಳಿದುಕೊಂಡ ಮಟ್ಟಿಗೆ ಹೇಳುತ್ತಾ ಇದ್ದೇನೆ. ಆ ಬಗ್ಗೆ ಪತ್ರಿಕೆಗಳಲ್ಲಿ ಸರಿಯಾದ ರೀತಿಯಲ್ಲಿ ಪೋರ್ಟ್ ಆಗಿಲ್ಲಲ್ಲ ಎಂದು ನನಗನ್ನಿಸುತ್ತದೆ. ಅದಕ್ಕೆ ಒಂದು ವಿವರಣೆಯನ್ನು ಕೊಡುವುದು ಬಹಳ ಅವಶ್ಯ ಇದೆ. ಹಿಂದಿನ ಸರ್ಕಾರ, ಹಿಂದಿನ ಮಂತ್ರಿಮಂಡಲ ಎರಡು ಮೂರು ಅಣೆಕಟ್ಟುಗಳು ಎಂದರೆ ಹೇಮಾವತಿ ಹಾರಂಗಿ, ಕಂಬದಕಡ ಅಣೆಕಟ್ಟುಗಳನ್ನು ಮಂಜೂರುಮಾಡಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದನಂತರ, ಸರ್ಕಾರ ಬಂದು ಅದನ್ನು ಪುನಃ ಪರಿಶೀಲನೆ ಮಾಡುತ್ತೇವೆ ಎಂದು ನಿರ್ಧಾರ ತೆಗೆದುಕೊಂಡಿದ್ದು ತಪ್ಪು ಎನ್ನುವ ಮಾತನ್ನು ಕೂಡ ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ನಾನು ಈ ಮಾನ್ಯ ಸಭೆಯ ಮುಂದೆ ಕೆಲವು ವಿವರಣೆಗಳನ್ನು ಇಡುವುದು ಬಹಳ ಅವಶ್ಯ ಇದೆ. ಒಂದು ವಿಷಯವನ್ನು ಮಾತ್ರ ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಹೋದ ಮಂತ್ರಿಮಂಡಲ ತೆಗೆದುಕೊಂಡಂಥ ನಿರ್ಣಯಕ್ಕೆ ವಿರುದ್ಧವಾಗಿ ಯಾವ ನಿರ್ಧಾರವನ್ನೂ ಈ ಸರ್ಕಾರ ತೆಗೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸುವುದು ಅಗತ್ಯ ಎಂದು ನಾನು ಹೇಳುತ್ತೇನೆ.

ಒಬ್ಬ ಸದಸ್ಯರು.—ಈ ವಿಚಾರದಲ್ಲಿ ಮಾತ್ರ ತಾವು ಹೇಳುತ್ತಿದ್ದೀರೋ ಅಥವಾ ಎಲ್ಲಾ ವಿಚಾರದಲ್ಲಿಯೂ ಹೇಳುತ್ತಿದ್ದೀರೋ ?

ಶ್ರೀ ವೀರೇಂದ್ರ ಪಾಟೀಲ್.—ಈ ಮೂರು ಪ್ರಾಜೆಕ್ಟುಗಳ ಬಗ್ಗೆ ಹಿಂದೆ ಇದ್ದ ಮಂತ್ರಿಮಂಡಲ ತೆಗೆದುಕೊಂಡಂಥ, ಸರ್ಕಾರ ತೆಗೆದುಕೊಂಡಂಥ ನಿರ್ಣಯಕ್ಕೆ ವ್ಯತಿರಿಕ್ತವಾಗಿ ಹೊಸದಾಗಿ ಬಂದಂಥ ಮಂತ್ರಿಮಂಡಲ ಯಾವ ರೀತಿಯಿಂದಲೂ ಮಾಡಿಲ್ಲ. ಯಾವ ಅಮೆಂಡ್‌ಮೆಂಟನ್ನೂ ಕೂಡ ಮಾಡಿಲ್ಲ, ಎಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳುತ್ತೇನೆ. ಅದರ ಬಗ್ಗೆ ಸಂಶಯ ಯಾರಿಗೂ ಕೂಡ ಇರುವುದು ಅಗತ್ಯವಿಲ್ಲ. ಕಂಬದಕಡ, ಹಾರಂಗಿ ಮತ್ತು ಹೇಮಾವತಿ ಪ್ರಾಜೆಕ್ಟುಗಳ ವಿಷಯದಲ್ಲಿ ಬೆಂಗಳೂರಿನಲ್ಲಿರುವಂಥಾ ಒಂದು ಕನ್ನಡ ಪತ್ರಿಕೆಯಲ್ಲಿ ೨೧ನೇ ಮಾರ್ಚಿ ೧೯೬೨ರಲ್ಲಿ ಒಂದು ಸುದ್ದಿ ಪಬ್ಲಿಷ್ ಆಗಿದೆ. ಅದು ಏನೆಂದರೆ ಮೈಸೂರಿನ ಮಾನ್ಯ ಮುಖ್ಯ ಮಂತ್ರಿಗಳು ವೋಟರ್ಸ್ ಅಸೋಸಿಯೇಷನ್ನಿನ ಕೂರ್ಗ್ ಸೆಕ್ರೆಟರಿಗಳಿಗೆ ಬರೆದ ಪತ್ರದ ವಿಷಯ. ಅವರು ಆ ಪತ್ರದ ಸಾರಾಂಶವನ್ನು ಕೂಡ ಬರೆದಿದ್ದಾರೆ. ಕಂಬದಕಡ, ಹಾರಂಗಿ ಮತ್ತು ಹಾಸನ ಜಿಲ್ಲೆಯಲ್ಲಿರುವಂಥಾ ಅಣೆಕಟ್ಟುಗಳ ಯೋಜನೆಗಳ ಮಟ್ಟಿಗೆ ಸರ್ಕಾರ ಈಗಾಗಲೇ ಪರಿಶೀಲಿಸಿ ಹಿಂದಿನ ಸರ್ಕಾರದ ನಿರ್ಧಾರಕ್ಕೆ ಪ್ರತಿಯಾಗಿ ಪ್ರಮುಖ ನಿರ್ಧಾರವನ್ನು ಕೈಗೊಂಡಿದ್ದಾರೆ ಎಂದು ವರದಿ ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ಪೇಪರ್‌ನಲ್ಲಿ ವರದಿಯಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ತಿಳಿಗನ್ನಡ ಪತ್ರಿಕೆಯಲ್ಲಿ ವರದಿಯಾಗಿದೆ. ಅದಕ್ಕಿಂತಲೂ ಹೆಚ್ಚಿನ ವಿವರಣೆ ಅವಶ್ಯವಿಲ್ಲ ಎನಿಸುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಪೇಪರ್ ಯಾವುದು ಸ್ವಾಮಿ ?

Sri VEERENDRA PATIL.—There are three vernacular papers. ಅವುಗಳಲ್ಲಿ ಯಾವುದಾದರೂ ಒಂದು ಆಗಬಹುದು. ಹೆಸರು ಏತಕ್ಕೆ ಹೇಳುತ್ತಿಲ್ಲ ಎಂದರೆ ಸುಲಭ ರೀತಿಯಿಂದ ಜನಗಳಿಗೆ ತಪ್ಪುಭಾವನೆಯನ್ನು ಹುಟ್ಟಿಸುವಂಥಾ ಪ್ರಯತ್ನವನು ಮಾಡಬಾರದು. ಆದ್ದರಿಂದ ಹೆಸರುಗಳನ್ನು ಹೇಳುತ್ತಿಲ್ಲ. ಏಕೆ ಇದನ್ನು ಹೇಳುತ್ತಿದ್ದೇನೆ ಅಂದರೆ ಮುಖ್ಯಮಂತ್ರಿಗಳು ಬರೆದ ಪತ್ರದಲ್ಲಿ ಹೇಮಾವತಿ ಪ್ರಾಜೆಕ್ಟಿನಿಂದ ಕೊಡಗಿನ ಯಾವ ಭೂಮಿಯೂ ಕೂಡ ಮುಳುಗಡೆಯಾಗುವುದಿಲ್ಲ ಅಥವಾ ಕೊಡಗಿನ ಜನರಿಗೆ ಯಾವ ರೀತಿಯಿಂದಲೂ ಹಾನಿಯಾಗುವುದಿಲ್ಲ ಎಂದು ಸ್ಪಷ್ಟ ಪಡಿಸಿದ್ದಾರೆ. ಹೇಮಾವತಿ ಪ್ರಾಜೆಕ್ಟ್ ಬದಲಾಯಿಸಬೇಕು, ಅದನ್ನು ಬಿಟ್ಟು ಬೇರೆ ತೆಗೆದುಕೊಳಬೇಕು ಎಂದು ಆ ಪತ್ರದಲ್ಲಿ ಬರದಿಲ್ಲ.

4-30 P.M.

Sri C. J. MUCKANNAPPA.—Sir, I am unable to understand. I seek the protection of the Chair. Is there any ruling that the name of a paper should not be given ? There are three or four

(SRI C. J. MUCKANNAPPA)

papers and he can tell us the name of the particular paper that has published that information.

ಶ್ರೀ ವೀರೇಂದ್ರ ಪಾಟೀಲ್.—ಮೂರು ಪ್ರಾಜೆಕ್ಟುಗಳು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಟ್ಟಿವೆ.

Sri S. GOPALA GOWDA–On a point of order, Sir. ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹಾಜರಿರುವಾಗ ಅವರು ಬರೆದ ಪತ್ರದ ಬಗ್ಗೆ ಮತ್ತು ಅವರು ಹೇಳಿದ ವಿಷಯದ ಬಗ್ಗೆ ಅವರ ಸಹೋದ್ಯೋಗಿಗಳು ವಿವರಣೆ ಕೊಡುವುದು ಔಚಿತ್ಯದ ಪ್ರಶ್ನೆಯಾಗಿರುವುದರಿಂದ ಇದೊಂದು ರೀತಿಯ ಕ್ರಿಯಾಲೋಪವೆಂದು ನಾನು ಅಭಿಪ್ರಾಯ ಪಡುತ್ತೇನೆ.

Mr. SPEAKER.—The Hon'ble Minister who is on his legs is in charge of the portfolio and he is perfectly entiled to reply. If the Hon'ble Chief Minister thinks it necessary to add anything, he will be at liberty to do so when he replies. So, there is no point of order.

ಶ್ರೀ ವೀರೇಂದ್ರ ಪಾಟೀಲ್.—ಈ ಮೂರು ಪ್ರಾಜೆಕ್ಟುಗಳನ್ನು ನಮ್ಮ ಸ್ಟೇಟ್‌ಪ್ಲಾನ್‌ನಲ್ಲಿ ಸೇರಿಸಿದ್ದರೂ ಇಲ್ಲಿಯವರೆಗೂ ಅವಕ್ಕೆ ಕೇಂದ್ರ ಸರ್ಕಾರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ. ಪ್ರಾಜೆಕ್ಟನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ ತಕ್ಷಣ ಕೇಂದ್ರ ಸರ್ಕಾರದ ಕಡೆಯಿಂದ ಟೆಕ್ನಿಕಲ್ ಕ್ಲಿಯರೆನ್ಸ್ ತಾನಾಗಿಯೇ ಬಂದಿದೆಯೆಂದು ತಿಳಿದು ಮುಂದುವರಿಯುವುದಕ್ಕಾಗುವುದಿಲ್ಲ. ಅದಕ್ಕೆ ಪ್ಲಾನ್, ಎಸ್ಟಿಮೇಟ್ ಮುಂತಾದ್ದನ್ನು ಕಳುಹಿಸಿದಾಗ ಕೇಂದ್ರ ಸರ್ಕಾರದಲ್ಲಿರುವ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಸ್ಕ್ರೂಟಿನಿಮಾಡಿ ಬದಲಾಯಿಸಬೇಕಾದರೆ, ಸೈಟು ಬದಲಾಯಿಸಬೇಕಾದರೆ ಅಥವಾ ಡಿಸೈನ್ ಬದಲಾಯಿಸಬೇಕಾದರೆ ಟೆಕ್ನಿಕಲ್ ಅಡ್ವೈಜ್ ಕೂಡ ಕ್ಲಿಯರೆನ್ಸ್ ಬಂದ ಮೇಲೆ ಪ್ರಾಜೆಕ್ಟ್ ಕೆಲಸ ಪ್ರಾರಂಭಿಸಬೇಕು. ಈ ಮೂರು ಪ್ರಾಜೆಕ್ಟುಗಳ ಬಗ್ಗೆ ಸರ್ಕಾರ ಇಲ್ಲಿಯವರೆಗೆ ಏನು ಮಾಡಿದೆಯೆಂಬುದನ್ನು ಹೇಳುತ್ತೇನೆ. ಕಂಬದಕಡ ಪ್ರಾಜೆಕ್ಟ್ ವಿಚಾರ ತಮ್ಮೆಲ್ಲರಿಗೂ ಗೊತ್ತೇ ಇದೆ. ೧೯೬೦ರಲ್ಲಿ ರಾಷ್ಟ್ರಪತಿ ಇಲ್ಲಿಗೆ ಬಂದಾಗ ಕೊಡಗಿನ ಅನೇಕರು ಎಜಿಟೇಷನ್ ಮಾಡಿದರು. ಹಾರಂಗಿ ಮತ್ತು ಕಂಬದಕಡ ಪ್ರಾಜೆಕ್ಟುಗಳನ್ನು ಸರ್ಕಾರ ತೆಗೆದುಕೊಂಡು ಕೊಡಗಿನಲ್ಲಿರುವ ಕಾಫಿ ಪ್ರದೇಶ, ಗಾರ್ಡನ್ ಪ್ರದೇಶ, ಬತ್ತ ಬೆಳೆಯುವ ಪ್ರದೇಶಗಳನ್ನು ಮುಳುಗಡೆಗೆ ಗುರಿಮಾಡಿ, ಕೊಡಗಿನ ಹೊರಗಿರುವ ಭೂಮಿಗೆ ನೀರು ಕೊಡಬೇಕು ಎಂದು ಯೋಚಿಸಿರುವುದು ಯೋಗ್ಯವಲ್ಲ ಎಂದು ಅಲ್ಲಿನ ಅಸೋಸಿಯೇಷನವರು ಮತ್ತು ಇತರರು ಎಜಿಟೇಟ್ ಮಾಡಿದರು. ಅದರ ಮೇಲೆ ವಿಚಾರ ವಿನಿಮಯಮಾಡಿ ಸರ್ಕಾರ ಮಾಡಿರುವ ನಿರ್ಣಯದಲ್ಲಿ ಯಾವುದನ್ನೂ ಬದಲಾಯಿಸಲಿಲ್ಲ. ಕಂಬದಕಡ ಪ್ರಾಜೆಕ್ಟ್ ಮಟ್ಟಿಗೆ ಒಂದು ನಿರ್ಣಯ ಮಾಡಿದ ಮೇಲೆ ಸರ್ಕಾರದವರು ಅದನ್ನು ಕೊಡಗಿನವರಿಗೆ, ಅಲ್ಲಿನ ಅಸೋಸಿಯೇಷನ್ ಸೆಕ್ರೆಟರಿಗೆ ತಿಳಿಸಿದ್ದಾರೆ. ಆ ಒಂದು ನಿರ್ಣಯವೇನೆಂದರೆ, ಈಗೇನು ಕಂಬದಕಡದ ಹತ್ತಿರ ಒಂದು ಪ್ರಾಜೆಕ್ಟ್ ಮಾಡಬೇಕೆಂದಿತ್ತು, ಅದಕ್ಕೆ ಸ್ವಲ್ಪ ಭಾಗದಲ್ಲಿ ಒಂದು ಸಣ್ಣ ಪಿಕಪ್ ಹಾಕಿ ಅದರಿಂದ ಸುಮಾರು 2,500 ಎಕರೆ ಭೂಮಿಗೆ ಕೊಡಗಿನಲ್ಲಿ ನೀರು ಕೊಟ್ಟು, ಅದಕ್ಕೆ ಕೆಳಗೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಒಂದು ಕಟ್ಟೆ ಹಾಕಿ ದೊಡ್ಡ ಕೆರೆ ಕಟ್ಟಬೇಕು ಎಂಬುದು. ಈ ಒಂದು ನಿರ್ಣಯ ಮಾಡಿ ನಮ್ಮ ಅಧಿಕಾರಿಗಳಿಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕೆಂದು ಆರ್ಡರು ಮಾಡಲಾಗಿದೆ. ಆ ರೀತಿಯಿಂದ ಮಾಡುತ್ತಿದ್ದಾರೆ. ಮಾಡಿದ ನಂತರ ವರದಿ ಬಂದಮೇಲೆ ಯಾವ ರೀತಿ ನಿರ್ಣಯ ತೆಗೆದುಕೊಳ್ಳಬೇಕೆಂದು ಸರ್ಕಾರ ವಿಚಾರವಾಡಿ ಒಂದು ಅಂತಿಮ ನಿರ್ಧಾರಕ್ಕೆ ಬರುತ್ತದೆ. ಅದೇ ರೀತಿಯಲ್ಲಿ ಹಾರಂಗಿ ಪ್ರಾಜೆಕ್ಟ್ ಬಗ್ಗೆ ಕೂಡ 1960ರಲ್ಲಿ ಸರ್ಕಾರ ನಿರ್ಧರಿಸಿರುವಂತೆ ಕಾರ್ಯಕ್ರಮ ಕೈಕೊಂಡರೆ ಬಹಳ ಭೂಮಿ ಮುಳುಗಡೆಯಾಗಬಹುದೆಂದು ಎಜಿಟೇಷನ್ ಇದೆ. ಇದುವರೆಗೆ ಈ ವಿಚಾರದಲ್ಲಿ ಸರಿಯಾದ ನಿರ್ಣಯವನ್ನು ತೆಗೆದುಕೊಂಡಿಲ್ಲ. ಕೊಡಗಿನಲ್ಲಿರುವ ರಿಚ್ ಫಾರೆಸ್ಟ್, ಕಾಫಿ, ಏಲಕ್ಕಿ ಬೆಳೆಯುವ ಪ್ರದೇಶ, ಫಾರಿನ್ ಎಕ್ಸ್‌ಚೇಂಜ್‌ಗೆ ಅನುಕೂಲವಾಗುವ ಪ್ರದೇಶ ಮುಳುಗಡೆಯಾಗುವುದನ್ನು ಕಡಮೆ ಮಾಡಲು ಸಾಧ್ಯವಿದೆಯೆ ಎಂದು ಪರಿಶೀಲಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈಗ ಈ ಸಂಬಂಧದಲ್ಲಿ ಬಂದಿರುವ ತಕರಾರು ಏನೆಂದರೆ, ಹಾರಂಗಿ ಪ್ರಾಜೆಕ್ಟಿನ ಬಗ್ಗೆ ಎರಡುಮೂರು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಈ ಬಗ್ಗೆ ಮೊದಲು ಕೊಡಗು ಸರ್ಕಾರದವರು ಅನಂತರ ಕಾಂಗ್ರೆಸ್ ಸರ್ಕಾರದವರು ವಿಚಾರ ಮಾಡಿಕೊಂಡಿದ್ದಾರೆ. ಈ ಪ್ರಾಜೆಕ್ಟಿಗಾಗಿ ಹರದೂರಿನ ಹತ್ತಿರ ಒಂದು ಸೈಟು, ಹುದುಗೂರಿನ ಹತ್ತಿರ ಒಂದು ಸೈಟು ಹೀಗೆ ಎರಡು ಸೈಟುಗಳು ಗಮನದಲ್ಲವೆ. ಹರದೂರು ಸೈಟನ್ನು ಚುನಾಯಿಸಿದರೆ ಹೆಚ್ಚು ಪ್ರದೇಶ ಮುಳುಗಡೆಯಾಗುವುದು ಮತ್ತು ಹೆಚ್ಚು ಜಮೀನಿಗೆ ನೀರು ಕೊಡಲು ಸಾಧ್ಯವಾಗುವುದು. ಹುದುಗೂರು ಸೈಟಿನಿಂದ ಹೆಚ್ಚು ಭೂಮಿ ಮುಳುಗಡೆಯಾಗುವುದಿಲ್ಲವೆಂಬ ಅಭಿಪ್ರಾಯವಿದೆ. ಇದಕ್ಕೆ ಒಂದು ಆಲ್ಟರ್‌ನೇಟಿವ್ ಸೈಟ್ ಇದೆಯೆ, ಹೆಚ್ಚು ಪ್ರದೇಶ ಮುಳುಗಡೆಯಾಗದೆ ಇರುವಂತೆ ಪ್ರಾಜೆಕ್ಟ್ ಕಟ್ಟಿ ರೈತರಿಗೆ ನೀರನ್ನು ಕೊಡಲು ಸಾಧ್ಯವಿದೆಯೆ ಎಂದು ಪರಿಶೀಲಿಸುತ್ತಿದ್ದಾರೆ. ನಾವೊಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆದರೆ ಅದೇ ಕೊನೇ ನಿರ್ಣಯವಾಗುವುದಿಲ್ಲ. ಹಾರಂಗಿ ಪ್ರಾಜೆಕ್ಟ್ ಕಟ್ಟುವ್ದೆಂದು ಅರ್ಥಮಾಡುವಂತಿಲ್ಲ. ಅದೇ ರೀತಿ ಕಂಬದಕಡ ಪ್ರಾಜೆಕ್ಟನ್ನು ಡ್ರಾಪ್ ಮಾಡಿದ್ದೇವೆಂದು ತಿಳಿಯಬಾರದು. ಈಗ ಪರಿಶೀಲನೆಮಾಡುತ್ತಿದ್ದಾರೆ. 1960ರಲ್ಲಿ ಮೊದಲು ಪರಿಶೀಲಿಸಿದ್ದರು. ಎರಡನೆಯ ರೀತಿಯಿಂದ ಪರಿಶೀಲನೆ ಮಾಡಿ ವರದಿ ಕೊಡಿ ಎಂದು ಹೇಳಿದ್ದೇವೆ. ಈ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿಯಿಂದ ಹಾರಂಗಿ ಪ್ರಾಜೆಕ್ಟ್‌ಗೆ ಆಲ್ಟರ್‌ನೇಟಿವ್ ಸೈಟ್ಸ್ ದೊರೆಯುತ್ತವೆಯೆ ಎಂಬುದನ್ನು ಪರಿಶೀಲಿಸಲು ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ಗೆ ಹೇಳಿದ್ದೇವೆ. ಇದರ ಅರ್ಥ ಮೂರು ಪ್ರಾಜೆಕ್ಟುಗಳನ್ನೂ ಬಿಡಬೇಕೆಂಬುದಲ್ಲ. ಇದು ಯಾರೂ ಚಿಂತೆ ಮಾಡತಕ್ಕ ವಿಷಯವಲ್ಲ. ಆದಷ್ಟು ಹೆಚ್ಚು ನೀರು ಕೊಡಬೇಕೆಂಬುದೇ ಸರ್ಕಾರದ ಅಭಿಪ್ರಾಯ. ಒಂದು ರೀತಿಯಿಂದ ಕಂಬದಕಡ ಪ್ರಾಜೆಕ್ಟ್ ಮಾಡಿದರೆ ೨,೫೦೦ ಎಕರೆಗೆ ನೀರು ಬರುತ್ತದೆ, ಎರಡನೇ ರೀತಿಯಿಂದ ಮಾಡಿದರೆ 20 ಸಾವಿರ ಎಕರೆಗೆ ನೀರೊದಗುತ್ತದೆ. ಸಣ್ಣ ಅಣೆ ಕಟ್ಟಿದರೆ ಕಡಮೆ ನೀರು ಬರುತ್ತದೆ. ಆಗ ಮುಂದಿನ ಜನರಿಗೆ, ಅರಕಲಗೂಡು ಮತ್ತು ಕೃಷ್ಣರಾಜನಗರ ತಾಲ್ಲೂಕಿನವರಿಗೇನು ಮಾಡಬೇಕೆಂದು ಕೇಳಬಹುದು. ಈಗ ಎರಡನೆಯ investigation ಮಾಡಬೇಕೆಂದು ಹೇಳಿದ್ದೇವೆ. ಇದರಿಂದ ಇನ್ನೂ

ಹೆಚ್ಚಿಗೆ ನೀರು ಕೊಡಿಸುವುದಕ್ಕೆ ಸಾಧ್ಯವಾಗುತ್ತದೆಂದು ನನಗನ್ನಿಸುತ್ತದೆ. ಕಟ್ಟೆಪುರದ ಹತ್ತಿರ ಒಂದು ಅಣೆಕಟ್ಟು ಹಾಕುವುದರಿಂದ, ಬೇರೆ ಕಡೆಯಲ್ಲಿ ಹಾಕುವುದರಿಂದ ಎಷ್ಟು ನೀರು ಕೊಡುತ್ತಿತ್ತೋ ಅದಕ್ಕೆ ಎರಡು ಮೂರರಷ್ಟು ಹೆಚ್ಚಿಗೆ ನೀರು ಒದಗುತ್ತದೆಂಬ ಭರವಸೆಇದೆ. ಆದ್ದರಿಂದ ಇವುಗಳೆಲ್ಲದರ ಬಗ್ಗೆ ಒಂದು ರಿಪೋರ್ಟ್ ಬಂದ ಮೇಲೆ ಒಂದು ಆಖೈರು ತೀರ್ಮಾನ ತೆಗೆದುಕೊಳ್ಳುವವರಿದ್ದೇವೆ.

ಶ್ರೀ ಕೆ. ಎಂ. ದೇವಯ್ಯ (ಹೆರಿಯಾಪಟ್ಟಣ).—ಮಾನ್ಯ ಮಂತ್ರಿಗಳು ಈಗ ಹೇಳಿದರು, ಮೊದಲಿನ ಸ್ಕೀಮನ್ನು ಕೈಬಿಟ್ಟಿಲ್ಲ; ಪುನಃ ಪರಿಶೀಲನೆ ಮಾಡುತ್ತೇವೆ ಎಂದು. ಹಿಂದೆ ಮೊದಲು ಪರಿಶೀಲನೆ ನಡೆಸಿ ಸ್ಕೀಮ್ ಮಾಡಿದಾಗ, ಕೇವಲ ಈ ಒಂದೇ ಸೈಟನ್ನು ಪರಿಶೀಲನೆ ಮಾಡಿದರೇ ಅಥವಾ ಹರದೂರು, ಬಟಕನಹಳ್ಳಿ, ಹುದ್ಗೂರು-ಈ ಮೂರು ಸೈಟುಗಳನ್ನೂ ಪರಿಶೀಲನೆ ಮಾಡಿ ಕೊನೆಗೆಹುದ್ಗೂರು ಸೈಟೇ ಉತ್ತಮವೆಂದು ಶಿಫಾರಸುಮಾಡಿದರೇ ?

ಶ್ರೀ ಎಸ್. ಗೋಪಾಲಗೌಡ.—ತಾವು ಮೊದಲು ಹೇಳುವಾಗ, 'ಪುನಃ ಪರಿಶೀಲನೆ ಮಾಡುತ್ತಿದ್ದಾರೆ ಎಂದು ಪತ್ರಿಕೆಯವರು ಹಾಕಿದ್ದು ತಪ್ಪು, ಹಾಗೆ ಮಾಡಿಲ್ಲ' ಎಂದು ಹೇಳಿದಿರಿ. ಆದರೆ, ಈಚೆಗೆ ತಾವು ಮಾತನಾಡುತ್ತಾ, ಪಂಚವಾರ್ಷಿಕ ಯೋಜನೆಯಲ್ಲಿ ಹಾರಂಗಿ, ಕಂಬದಗಡ ಯೋಜನೆಗಳನ್ನು ಕೈಕೊಳ್ಳಬೇಕೆಂದು ಸೇರಿಸಿತ್ತು; ಈಗ ಅದನ್ನು ಪುನಃ ಪರಿಶೀಲನೆ ಮಾಡುತ್ತಿದ್ದೇವೆಂದು ತಾವೇ ಹೇಳಿದ್ದೀರಿ. ಸೇರಿಸಿದ ಯೋಜನೆಗಳನ್ನು ಕೈಕೊಳ್ಳುವುದು ಬೇಕೇ ಬೇಡವೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಅಂದಮೇಲೆ ತಾವು ಮೊದಲು ಹೇಳಿದ ಹಾಗೆ ಪತ್ರಿಕೆಯವರು ಬರೆದದ್ದು ತಪ್ಪೆಂದು ಹೇಳುವುದಕ್ಕಾಗುವುದಿಲ್ಲ, ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಗೌಡರು ನಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂದು ಕಾಣುತ್ತದೆ. ಈಗ ಬಂದ ಅಪಾದನೆ ಏನೆಂದರೆ ಹೋದ ವರ್ಷ ಮಾಡಿದ ನಿರ್ಣಯವನ್ನು ಹೊಸ ಮಂತ್ರಿಮಂಡಳಿ ಬಂದ ತಕ್ಷಣ ಪುನಃ ಪರಿಶೀಲನೆ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆ ಎಂದು. ಇದು ಸರಿಯಾದ್ದಲ್ಲ ಎಂದ ನಾನು ಹೇಳಿದ್ದು. ನಾವು ಬರುವುದಕ್ಕೆ ಮೊದಲು ಇದ್ದ ಸರ್ಕಾರವೇ ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿತ್ತು. ಅಂದ ಮಾತ್ರಕ್ಕೇ ಹಿಂದಿನ ಸರ್ಕಾರ ಮಾಡಿದ್ದರ ಜವಾಬ್ದಾರಿ ನಮಗಿಲ್ಲವೆಂಬ ಅರ್ಥದಲ್ಲಿ ನಾನು ಹೇಳುತ್ತಿಲ್ಲ. ಪುನರ್ವಿಮರ್ಶೆ ಮಾಡುವುದಕ್ಕೆ ಕಾರಣವೇನಿತ್ತು ಮತ್ತು ಪುನರ್ವಿಮರ್ಶೆ ಹೇಗೆ ಮಾಡುತ್ತಿದ್ದೇವೆ ಎಂಬ ವಿಚಾರವನ್ನು ಮಾತ್ರ ಹೇಳುತ್ತಿದ್ದೇನೆ. ಪುನರ್ವಿಮರ್ಶೆ ಮಾಡಬೇಕೆಂಬುದು ನಾವು ಬಂದ ಮೇಲೆ ತೆಗೆದುಕೊಂಡ ನಿರ್ಣಯವಲ್ಲವೆಂಬುದನ್ನು ನಾನು ಮತ್ತೆ ಮತ್ತೆ ಹೇಳಬಯಸುತ್ತೇನೆ. ಅವೇಲೆ ನಮ್ಮ ಮಿತ್ರರಾದ ಶ್ರೀ ದೇವಯ್ಯನವರು ಕೇಳಿದರು, ಹಿಂದೆ ಅಲ್ಲಿರುವ alternative ಸೈಟ್‌ಗಳೆಲ್ಲವನ್ನೂ ವಿಚಾರಮಾಡಿ ಹರದೂರನ್ನೇ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿರಲಿಲ್ಲವೇ ಎಂದು. ೧೯೬೦ರಲ್ಲಿ ಹರದೂರನ್ನೇ ತೆಗೆದುಕೊಳ್ಳಬೇಕೆಂದು ಅವರೇನೋ ಶಿಫಾರಸು ಮಾಡಿದರು. ಆದರೆ ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಷನ್ನಿನವರಿಗೆ ಅದು ಹೋದಾಗ, ಆ ಕಮಿಷನ್ನಿನವರು ನಮಗೆ Supreme Authority, ಅವರು ಹೇಳಿದಂತೆ ನಾವು ವ್ಯತ್ಯಾಸ ಮಾಡಬೇಕಾಗುತ್ತದೆ; ಆ ಕಮಿಷನ್ನಿನವರು ಬರೆದರು, ಹಾರಂಗಿ ಸ್ಕೀಮ್ ಏನು ಮಾಡಿದ್ದಿರೋ, ಅದರ ಬಗ್ಗೆ "Alternative Scheme" ಗಳನ್ನು "investigate" ಮಾಡಿ ಕಳುಹಿಸಿ ಕೊಡಿ ಎಂದು. ಅವರು ಹೇಳಿರುವುದೇನೆಂದರೆ, ಹಾರಂಗಿ ಹತ್ತಿರ, ಹತ್ತಿ ಹೊಳೆಯ ಬಳಿ ಒಂದು ಡ್ಯಾಂ ಹಾಕಿದರೆ, ಮಾದಾಪುರದ ಹತ್ತಿರ ಒಂದು ಡ್ಯಾಂ ಹಾಕಿದರೆ, ಏನು ಅನುಕೂಲ-ಅನನುಕೂಲವಾಗುತ್ತದೆಂಬುದನ್ನು ಪರಿಶೀಲನೆಮಾಡಿ ಎಂದು ಸಲಹೆ ಮಾಡಿದ್ದಾರೆ, ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಷನ್ನವರು ಟೋಪೋಗ್ರಾಫಿ ನೋಡಿ ಈ "alternative" ಸ್ಕೀಮ್‌ಗಳನ್ನು ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—(ಹೊಳೆನರಸೀಪುರ) ಹಾರಂಗಿ ಬಗ್ಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದರೂ ಅದು ಅಂತಿಮ ತೀರ್ಮಾನವಲ್ಲ. ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಷನ್ನಿನವರು ಟೆಕ್ನಿಕಲ್ expert body ಆಗಿ ಅವರು ಪರಿಶೀಲನೆಮಾಡಿ ತಮ್ಮ ಒಪ್ಪಿಗೆ ಕೊಡದೆ ಹೋದರೆ ನಾವು ಮಾಡಿದ್ದು ಅಂತಿಮ ತೀರ್ಮಾನವಾಗುವುದಿಲ್ಲ ಎಂದು ಹೇಳಿದಿರಿ. ಈಗ ತಾವು ಟೆಕ್ನಿಕಲ್ Expertಗಳನ್ನು ಬಿಟ್ಟು "investigation" ಮಾಡಿಸುತ್ತಿದ್ದೇವೆಂದು ಹೇಳಿದರಲ್ಲಾ ಇದು ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಷನ್ನಿನವರು ಕೊಟ್ಟ ಆದೇಶದ ಮೇಲೆಯೋ ಮಾಡುತ್ತಿರುವುದು ?

ಶ್ರೀ ವೀರೇಂದ್ರ ಪಾಟೀಲ್.— "Alternative Sites" ನ್ನು ಪರಿಶೀಲನೆ ಮಾಡಿ ಎಂದು ಅವರಿಂದ ಸಲಹೆ ಬಂತು.

ಒಬ್ಬ ಸದಸ್ಯರು.—ಯಾವಾಗ ಬಂತು ?

ಶ್ರೀ ವೀರೇಂದ್ರ ಪಾಟೀಲ್.—ಎಂಟನೆಯ ತಾರೀಖಿನಿಂದೀಚೆಗಲ್ಲ. ಹಿಂದೆ ಯಾವಾಗ, ಯಾವ ತಾರೀಖಿನಲ್ಲಿ ಬಂತು, ಅದರ "outward number, inward number" ಏನು ಎಂಬುದು ನನಗೀಗ ಗೊತ್ತಿಲ್ಲ.

ಒಬ್ಬ ಸದಸ್ಯರು.—ಹಾರಂಗಿ ಪ್ರಾಜೆಕ್ಟಿಗೆ ಮೈಸೂರು ಕ್ಯಾಬಿನೆಟ್ಟಿನ approval ಆಗಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅದೆಲ್ಲಾ ಹೇಳಿದೆ. ಆದರೆ "Technical clearance" ಬಂದಿಲ್ಲವೆಂದು ನಾನು ಹೇಳಿದೆ. ಅಲ್ಲದೆ ಈ ವಿಷಯದಲ್ಲಿ ಸರ್ಕಾರದ ನೀತಿಯೇನೆಂಬುದನ್ನು ಸ್ಪಷ್ಟಪಡಿಸಿದ್ದೇನೆ. ಸರ್ಕಾರದವರು ಯಾವ ಪ್ರಾಜೆಕ್ಟನ್ನೂ ಬಿಟ್ಟು ಬಿಡಬೇಕೆಂಬ ಉದ್ದೇಶವುಳ್ಳವರಾಗಿಲ್ಲ, ಮತ್ತು ಈ ರೀತಿ ಬದಲಾವಣೆ ಮಾಡಬೇಕೆಂಬುದೇನೂ ನಮ್ಮ ನೀತಿಯಲ್ಲ. ಸರ್ಕಾರ ಈಗ ವಿಚಾರ ಮಾಡುತ್ತಿರುವುದು ಎಷ್ಟು ಭಾಗ "Submerge" ಆಗುತ್ತದೆ.........

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹಿಂದಿನ ಸರ್ಕಾರ ಮಾಡಿದ್ದನ್ನು ಬದಲಾವಣೆ ಮಾಡಹೊರಟರೆ ತೊಂದರೆಗೆ ಒಳಗಾಗುತ್ತೇವೆಂದು ತಿಳಿದು ಅಲ್ಲಿಂದ ಆದೇಶ ಬರುವ ಹಾಗೆ ತಾವು ಮಾಡಿದಿರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಿದ್ದನ್ನು ತಿಳಿದುಕೊಂಡೂ ಮತ್ತೆ ಕೇಳುತ್ತಿದ್ದೀರಿ. ಇವೆಲ್ಲಾ ಎಂಟನೆಯ ತಾರೀಖಿಗೆ ಈಚೆಗೆ ಆದುವುಗಳಲ್ಲ. ಮೊದಲಿದ್ದ ಸರ್ಕಾರದ ಕಾಲದಿಂದ ಏನೇನು ನಡೆದಿದೆಯೆಂಬುದನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಈಗ ನಾವು ಮಾಡಿದ್ದು ಏನಾದರೂ ಇದ್ದರೂ ಕೂಡ ತಮ್ಮ ಮುಂದೆ ಹೇಳಲು ಸಿದ್ಧನಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಒಂದು ವೇಳೆ ಹಿಂದಿನ ಸರ್ಕಾರದವರು ಮಾಡಿದ್ದನ್ನು ಈಗ ರಿವ್ಯೆಜ್ ಮಾಡುವುದಕ್ಕೆ ಏನು ಅಡ್ಡಿ ಆತಂಕಗಳಿವೆ? ಈಗ ಏತಕ್ಕೋಸ್ಕರ ವೃಥಾ ಚರ್ಚೆನಡೆಯುತ್ತಿದೆಯೋ ಗೊತ್ತಿಲ್ಲ. ಹಿಂದಿನ ಸರ್ಕಾರದಲ್ಲಿಯೂ ಶ್ರೀಮಾನ್ ಮಲ್ಲಪ್ಪನವರು ಇದ್ದರು. ಅವರು ಪುನಃ ಈ ಮಂತ್ರಿ ಮಂಡಲದಲ್ಲಿಯೂ ಇದ್ದಾರೆ. ಅದರಿಂದಾಗಿ ಏನಾದರೂ ತಮ್ಮ ಈಗಿನ ನಿಲುವಿಗೆ ವಿರೋಧವಾಗುತ್ತದೆಯೋ ಏನೋ ಎಂಬ ಒಂದು ಅನುಮಾನ ನಮಗಿದೆ. ದೇಶದ ಹಿತದೃಷ್ಟಿಯಿಂದ ಇದು ನಡೆಯುತ್ತಿದೆ ಎಂಬತಕ್ಕಂಥ ಭರವಸೆಯನ್ನು ಕೊಟ್ಟರೆ ಈ ಈ ರೀತಿ ಇಂಟರಪ್‌ಷನ್‌ಗಳು ಆಗುವುದು ಅನಾವಶ್ಯಕವಾಗುತ್ತದೆ.

ಅಧ್ಯಕ್ಷರು.—ಅ ವಿಚಾರವನ್ನು ಹೇಳಿದ್ದಾರೆ. ಈ ವಿಷಯದಲ್ಲಿ ಸಾಧಾರಣವಾಗಿ ಹದಿನೈದು ನಿಮಿಷಗಳಿಂದಲೂ ಮಾತಾಡುತ್ತಿದ್ದೀರಿ. ಹೀಗಾದರೆ ಭಾಷಣ ಮುಗಿಯಲಿಕ್ಕಿಲ್ಲ. ಹೆಚ್ಚು ಕಾಲ ಕಳಿತುಕೊಳ್ಳ ಬೇಕಾಗಿ ಬರುತ್ತದೆ.

ಶ್ರೀಮತಿ ಬಸವರಾಜೇಶ್ವರಿ.—ಮಂತ್ರಿಗಳು ನಮ್ಮ ಸಲಹೆಗಳಿಗೆಲ್ಲಾ ಉತ್ತರ ಕೊಟ್ಟ ಮೇಲೆ ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಲಿ. ಆ ರೀತಿ ಮಾಡದೆ ಮಧ್ಯೇ ಮಧ್ಯೇ ಪ್ರಶ್ನೆ ಕೇಳುವುದು ಸರಿಯಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಹುಚ್ಚೇಗೌಡರು ಹೇಳಿದ್ದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಸರ್ಕಾರದ ನೀತಿ ಯಾರೋ ಈ ಬಗ್ಗೆ ಎಜಿಟೇಷನ್ ಮಾಡುತ್ತಿದ್ದಾರೆ, ಅದಕ್ಕೋಸ್ಕರ ಇದನ್ನು ಬಿಟ್ಟು ಬಿಟ್ಟು ಮತ್ತೆ ಯಾರಾದರೂ ಬೇರೆ ರೀತಿಯಲ್ಲಿ ಎಜಿಟೇಷನ್ ಮಾಡಿದರೆ ಅದನ್ನು ಪುನಃ ಬಿಡಬೇಕೇ ಬೇಡವೇ ಎಂಬುದಾಗಿ ಸರ್ಕಾರದ ನೀತಿ ಎಂದಿಗೂ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಇದು ಬಹು ದೊಡ್ಡ ವಿಚಾರ ದೇಶಕ್ಕೆ ಸಂಬಂಧಪಟ್ಟದ್ದು. ಕೋಟ್ಯಂತರ ರೂಪಾಯಿಗಳು ಖರ್ಚುಮಾಡತಕ್ಕಂಥಾದ್ದು ಮತ್ತು ಲಕ್ಷಾಂತರ ಜನಗಳಿಗೆ ಉಪಯೋಗವಾಗುವಂತಹ ಇಂತಹ ದೊಡ್ಡಯೋಜನೆಯನ್ನು ಬಹಳ ತೀವ್ರವಾಗಿ ಮತ್ತು ಜರೂರಾಗಿ ಕೈಗೊಳ್ಳಬೇಕು. ಈ ಬಗ್ಗೆ ಯಾವೊಂದು ತಕರಾರು ಬಂದಾಗಲೆಲ್ಲಾ ನಾವು ಪುನರ್ವಿಮರ್ಶೆ ಮಾಡುವ ನೀತಿ ಸರಿಯೋ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕಾಗಿದೆ.

ಒಬ್ಬ ಸದಸ್ಯರು.—ಈ ಪುನರ್ವಿಮರ್ಶೆಯ ವಿಚಾರ ಈಗಿನ ಮಂತ್ರಿ ಮಂಡಲದ್ದೋ ಅಥವಾ ಹಿಂದಿನ ಮಂತ್ರಿಮಂಡಲದ್ದೋ?

ಅಧ್ಯಕ್ಷರು.—ಅದಕ್ಕೆ ಉತ್ತರ ಆಗಲೇ ಹೇಳಿದ್ದಾರೆ. ಅದು ಈಗಿನ ಮಂತ್ರಿ ಮಂಡಲದ್ದಲ್ಲವೆಂದೂ ಅದನ್ನು ಮುಂಚಿನ ಮಂತ್ರಿ ಮಂಡಲವೇ ಮಾಡಿದ್ದು ಎಂದೂ ಹೇಳಿದ್ದಾರೆ.

ಶ್ರೀ ಜಿ. ವೆಂಕಟೇಗೌಡ.—ಈ ಪ್ರಾಜೆಕ್ಟುಗಳ ಪ್ಲಾನು, ಎಸ್ಟಿಮೇಟುಗಳನ್ನು ಕಳುಹಿಸಿದಮೇಲೆ ಸರ್ಕಾರದ ಕರ್ತವ್ಯ ಅದು ಫೀಜಿಬಲ್ಲಾಗಿದೆಯೋ ಅಥವಾ ಇಲ್ಲವೋ ಎಂದು ತಿಳಿದು ಏನಾದರೂ ಮೈನರ್ ಅಡ್ಜಸ್ಟ್‌ಮೆಂಟ್ ಬೇಕಾದರೆ ಮಾಡಬಹುದು. ಅಂದಮೇಲೆ ಪುನಃ ಈ ಕಡೆಯಿಂದ ಆ ಬಗ್ಗೆ ಸಲಹೆ ಬರುವ ಹಾಗೆ ಏಕೆ ಮಾಡಿಕೊಂಡಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲಾ ಪ್ಲಾನುಗಳನ್ನೂ ಸಹ ಸ್ಕ್ರೂಟಿನಿ ಮಾಡುತ್ತಾರೆ ಮತ್ತು ಸಲಹೆಗಳನ್ನು ಕೊಡುತ್ತಾರೆ. ಎಲ್ಲಾದಕ್ಕೂ ದೊಡ್ಡದಾದಂಥ ಒಂದು ಎಕ್ಸ್‌ಪರ್ಟ್ ಕಮಿಷನ್ ಎಂದು ಒಂದಿದೆ. ನೀವು ಅವರಿಗೆ ಈ ರೀತಿ ಹೇಳಿದರೆ ಅವರು ಮಾಡಿಕೊಡುತ್ತಾರೆಂದು, ನೀವು ನಮಗೆ ಹೇಳುವ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಆ ರೀತಿ ಅವರು ಮಾಡುತ್ತಾರೆಂದು ನನಗೆ ಅನ್ನಿಸುವುದಿಲ್ಲ; ಅದು ಖಂಡಿತವಾದ ಮಾತು.

Sri G. VENKATAI GOWDA.—It is not within their jurisdiction.

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಪ್ಲಾನ್, ಮತ್ತು ಎಸ್ಟಿಮೇಟುಗಳು ಹೋಗುತ್ತವೆ. ಅವರು ಟೋಪೋಗ್ರಫಿಯನ್ನು ಚೆಕ್ ಮಾಡುತ್ತಾರೆ. ಹತ್ತು ಸಾವಿರ ಅಥವಾ 20 ಸಾವಿರ ಎಕರೆ ನೀರನ್ನು ಕೊಡಲು ಸಾಧ್ಯವಿದ್ದರೆ ಅದಕ್ಕೂ ಕಡಮೆ ವೆಚ್ಚದಲ್ಲಿ ಕೊಡುವ ಅಧಿಕಾರ ಅವರಿಗೆ ಇರುತ್ತದೆ. ಇದು ಬೇಡ, ಈ ರೀತಿ ಪರಿಶೀಲನೆ ಮಾಡಿ ಎಂದು ಹೇಳತಕ್ಕ ಅಧಿಕಾರವೂ ಇರುತ್ತದೆ. ನೀವು ಕೊಟ್ಟದ್ದನ್ನು ಅವರು ಸ್ಕ್ರೂಟಿನಿ ಮಾಡಬೇಕಾಗಿದೆಯೇ ಹೊರತು ಮತ್ತೇನೂ ಇಲ್ಲ. ಏಕೆಂದರೆ ಕಮಿಷನ್ ನಮ್ಮ ಮುಂದೆ ಇಲ್ಲ, ಅವರಿಗೆ ಏಕೆ ಈ ಅಧಿಕಾರವಿತ್ತು ಎಂಬ ಚರ್ಚೆಗೆ ಇಲ್ಲಿ ಅವಕಾಶವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಿಂದಿನ ಮಂತ್ರಿ ಮಂಡಲ ಮಾಡಿದ ತೀರ್ಮಾನಕ್ಕೆ ಏಕೆ ತಾವು ಸ್ಪಷ್ಟ ಅಭಿಪ್ರಾಯ ತೆಗೆದುಕೊಂಡು ಮಾಡಬಾರದು? ತಮಗೇ ಅಧಿಕಾರವಿದೆಯಲ್ಲಾ?

ಶ್ರೀ ವೀರೇಂದ್ರ ಪಾಟೀಲ್.—ಹಿಂದಿನ ತೀರ್ಮಾನವನ್ನು ಯಾವುದೂ ಬದಲಾಯಿಸಿಲ್ಲ. ಅದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮತ್ತೆ ಮತ್ತೆ ಅದನ್ನೇ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್‌ಗೆ ಕೊಟ್ಟಿದ್ದೀರಿ. ಅಲ್ಲಿ ಸ್ವಲ್ಪ ಬದಲಾವಣೆ ಆಗಿರತಕ್ಕ ರೂಪರೇಖೆಗಳನ್ನು ಮಾಡಿಕೊಳ್ಳಬೇಕೆಂದು ಇದ್ದೀರಿ. ಇಲ್ಲಿ ನಮ್ಮ ಸ್ಟೇಟ್ ಗೌರ್ನಮೆಂಟಿಗೆ ಒಬ್ಬ ಅಡ್ವೈಜರ್ ಇದ್ದಾರೆ. ಅವರ ಅಭಿಪ್ರಾಯವನ್ನು ತೆಗೆದುಕೊಂಡು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ ಹತ್ತಿರ ಚರ್ಚೆಮಾಡಿ ಆ ಚರ್ಚೆಗೆ ಅಗೌರವರೂಪವನ್ನುಂಟು ಮಾಡತಕ್ಕದ್ದು ಸರಿಯಲ್ಲ. ಸುಪ-ಮೋಟೊ ಟೋಪೋಗ್ರಫಿಯನ್ನು ಎಗ್ಸಾಮಿನ್ ಮಾಡಿ ಅದನ್ನು ಹಾಗೆಯೇ ಕಳುಹಿಸಿದ್ದಾರೆ. ಅದೇ ನಮ್ಮ ಸಂಶಯ. ಅದನ್ನು ಜಾಗ್ರತೆ ಕ್ಲಿಯರ್ ಮಾಡಿ. ಹಿಂದೆ ಇದಕ್ಕೆ ವಿರೋಧ ಮಾಡುತ್ತಿದ್ದಂಥ ಶ್ರೀಮಾನ್ ಮಲ್ಲಪ್ಪನವರು ಈಗಿನ ಮಂತ್ರಿ ಮಂಡಲದಲ್ಲಿದ್ದಾರೆ. ಈಗ ಅದರ ರೂಪರೇಖೆಗಳು ಬದಲಾವಣೆ ಆಗುತ್ತಿರುವುದರಿಂದ ಆ ಒಂದು ಸಂಶಯವನ್ನು ಜಾಗ್ರತೆಯಾಗಿ ಕ್ಲಿಯರ್ ಮಾಡಿದರೆ ಗಂಭೀರವಾಗಿ ಕುಳಿತ ಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾ ೀಲ್.—ಶ್ರೀ ಮಲ್ಲಪ್ಪನವರು ಬಂದುದು ಎಂಟನೇ ತಾರೀಖಿನ ನಂತರ. ಆದ್ದರಿಂದ ಇದನ್ನು ಎಂಟನೇ ತಾರೀಖಿನ ಮುಂಚೆ ಮಾಡಿದ್ದು ಅಲ್ಲ. ಈ ವಿಷಯದಲ್ಲಿ ಸುಮ್ಮನೆ ಉದ್ದವಾದ ಭಾಷಣ ಮಾಡುವ ಪ್ರಮೇಯವಿಲ್ಲ. ಅದರಿಂದೇನೂ ಪ್ರಯೋಜನವಿಲ್ಲ.

Sri B. HUTCHE GOWDA.—The Press report came only after 8th.

ಶ್ರೀ ಎಸ್. ಆರ್. ಕಂಠಿ.—ಈಗ ನಾವು ಯಾವ ಪ್ರಕಾರವಾಗಿಯೂ ಈ ಮಂತ್ರಿ ಮಂಡಲ ಬಂದಮೇಲೆ ಜನತೆಗೆ ಈ ಬಗ್ಗೆ ಏನನ್ನೂ ಹೇಳಲಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಅದು ಮೊದಲನೆಯ ಮೂಲಾಭಿ

ಪ್ರಿಯವಾಗಿದೆಯೇ ಹೊರತು ಮತ್ತೇನೂ ಇಲ್ಲ. ಅದು ದತ್ತವಾಗಿ ಬಂದಿದೆ.

ಶ್ರೀ ಜಿ. ವೆಂಕಟೇಗೌಡ.—ಈ ಸಭೆಯ ವಿಶ್ವಾಸ ಕಳೆದುಕೊಂಡು ಇಂತಹ ಅಭಿಪ್ರಾಯವನ್ನು ಪರಿಶೀಲನೆ ಮಾಡುತ್ತಿದ್ದೀರಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ನನ್ನ ಮುಂದೆ ಉದ್ಭವವಾಗುವುದಿಲ್ಲ. ಇದನ್ನು ಹಿಂದಿನ ಮಂತ್ರಿ ಮಂಡಲ ಮಾಡಿದ್ದಾರೆ. ಅದನ್ನೇ ನಿಮ್ಮ ಮುಂದೆ ಹೇಳುತ್ತಿದ್ದೇವೆಯೇ ಹೊರತು ಇನ್ನೇನೂ ಇಲ್ಲ.

ಶ್ರೀ ಜಿ. ವೆಂಕಟೇಗೌಡ.—ಹಿಂದಿನ ಸರ್ಕಾರದಲ್ಲಿ ಇದನ್ನು ಯಾವತ್ತು ಪುನಃ ಪರಿಶೀಲನೆ ಮಾಡಿದುದು ?

ಶ್ರೀ ವೀರೇಂದ್ರ ಪಾಟೀಲ್.—ಯಾವತ್ತು ಬಂದಿದೆ, ಯಾವ ಡೇಟಿನಲ್ಲಿ ಪುನಃ ಪರಿಶೀಲನೆಯಾಯಿತು ಎಂಬ ವಿವರಗಳು ನನ್ನಲ್ಲಿ ಈಗ ಇಲ್ಲ. ಪುನಃ ಪರಿಶೀಲನೆ ಮಾಡಿದ್ದು ನಿಜವೆಂದು ಹೇಳುತ್ತೇನೆ. ಈಗ ಈ ಎರಡು-ಮೂರು ಪ್ರಾಜೆಕ್ಟುಗಳು ಏಕೆ ಬಂದುವು ಎಂಬುದು ಬೇರೆ ವಿಷಯ. ಪ್ರಾಜೆಕ್ಟುಗಳನ್ನು ಕನ್‌ಸ್ಟ್ರಕ್ಷನ್ ಮಾಡುವಾಗ ಡಿಸೈನ್ ಅವಶ್ಯಕ ಕಂಡಾಗ ಬದಲಾವಣೆ ಮಾಡಿ ಎಂದು ಅವರು ಕೆಲವು ಸಲಹೆಗಳನ್ನು ಕೊಡುತ್ತಾರೆ. ಹಾಗೆ ಅವರ ಸಲಹೆಗಳ ಪ್ರಕಾರ ಬದಲಾವಣೆ ಮಾಡುತ್ತಾರೆ. ಆ ರೀತಿ ಅವರು ಪರಿಶೀಲನೆ ಮಾಡಿ ಎಂದು ಹೇಳುವುದೇನೂ ಹೊಸದಲ್ಲ, ನಾನು ಈ ಬಗ್ಗೆ ಈ ಸಭೆಯಲ್ಲಿ ಹೆಚ್ಚು ಹೇಳುವುದೂ ಕೂಡ ಸರಿಯಲ್ಲ. ಶ್ರೀಮಾನ್ ಹುಚ್ಚೇಗೌಡರು ಇದಕ್ಕೆ ಇನ್ನೂ ಎಜಿಟೇಷನ್ ಮಾಡುತ್ತಿದ್ದೇವೆಂಬುದಾಗಿ ಹೇಳಿದರು. ಆದರೆ ನಾವು ಅದನ್ನು ಬಿಟ್ಟು ಮತ್ತೊಂದು ಕಡೆಗೆ ಹೋಗಬೇಕು ಎಂಬ ಅಭಿಪ್ರಾಯ ನಮ್ಮ ಮುಂದೆ ಇಲ್ಲ. ಇದರಲ್ಲಿ ಏನಾದರೂ ಬದಲಾವಣೆ ಮಾಡಬೇಕೆಂದು ಹೇಳಿದರೆ ಮಾಡುವುದು ನಮ್ಮ ಮುಂದೆ ಇರತಕ್ಕದ್ದು. ಈಗಿನ ಎರಡು ಪ್ರಾಜೆಕ್ಟುಗಳಿಂದ ಜನರಿಗೆ ಏನು ಲಾಭವಾಗುತ್ತದೋ ಅದಕ್ಕೂ ಹೆಚ್ಚು ಲಾಭವಾಗುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆಂಬುದಾಗಿ ನಾನು ಸದಸ್ಯರೆಲ್ಲರಿಗೂ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಇನ್ನು ಹೇಮಾವತಿಯ ಪ್ರಸ್ತಾಪ ವಿನಾಕಾರಣ ಇದರಲ್ಲಿ ಬಂದಿದೆ. ಆದರೆ ಹೇಮಾವತಿ ಬದಲಾವಣೆ ಆಗಬೇಕು ಮತ್ತು ಪರಿಶೀಲನೆ ಮಾಡಬೇಕು ಎನ್ನುವ ವಿಚಾರ ಇದುವರೆಗೂ ಸರ್ಕಾರದ ಮುಂದೆ ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಬದಲಾವಣೆಯೇನೋ ಆಗಲೇಬೇಕು.

ಶ್ರೀ ವೀರೇಂದ್ರ ಪಾಟೀಲ್.—ಈಗ ಆ ಬಗ್ಗೆ ಪೊಸಿಷನ್ ಏನಿದೆಯೋ ಅಷ್ಟನ್ನು ಮಾತ್ರ ಹೇಳುತ್ತಿದ್ದೇನೆ.

ಇನ್ನು ಶ್ರೀಮಾನ್ ಗೋಪಾಲಗೌಡರು ಒಂದು ವಿಷಯವನ್ನು ಹೇಳಿದರು. ಅದು ಶರಾವತಿ ಪ್ರಾಜೆಕ್ಟ್ ಬಗ್ಗೆ ಅವರು ಹೇಳಿದ್ದು. ಇದಕ್ಕೆ ಮೊದಲೇ ಸಂಬಂಧಪಟ್ಟ ಮಂತ್ರಿಗಳು ಜೂನ್ ೧೯೬೨ರಲ್ಲಿ ಶರಾವತಿ ಕೆಲಸ ಮುಗಿಯುತ್ತದೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಜೂನ್ ೬೨ರೊಳಗೆ ಅದು ಮುಗಿಯುವ ಹಾಗೆ ಇಲ್ಲ. ಇನ್ನೂ ಕೆಲವು ದಿವಸಗಳು ಮುಂದೆ ಹೋಗಬಹುದು ಎಂದು ನಾನು ಹೇಳುತ್ತೇನೆ. ಇದರಿಂದ ನಮ್ಮ ದೇಶದ ಅಭಿವೃದ್ಧಿ ಬಹಳ ಇದೆ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ.

5-00 P.M.

ಶರಾವತಿ ಬರುವವರೆಗೂ ನಮಗೆ ಪವರ್ short-age ಇದ್ದೇ ಇದೆ. ಅದು 1962 ರೊಳಗೆ ಪೂರ ಆಗುವಂಥದಕ್ಕೆ ಸಾಧ್ಯವಿಲ್ಲ ಎನ್ನುವುದಾದರೂ ಮಾತುಗಳಿಗೆ ಹೆಚ್ಚು ಗಮನ ಕೊಟ್ಟು ಆದಷ್ಟು ತೀವ್ರ ಮುಗಿಸಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಾ ಇದೆ. ಸಾಕಾದಷ್ಟು ಮುಂದೆ ಹೋಗುತ್ತಾ ಇದ್ದೇವೆ. ಫಸ್ಟ್ ಸ್ಟೇಜ್ ಕೆಲಸ 40 ಕೋಟಿ ರೂಪಾಯಿಗಳದು ಬಹಳ ರಭಸದಿಂದ ಸಾಗುತ್ತಾ ಇದೆ. ನಮ್ಮ ಟಾರ್ಜೆಟ್ ಪ್ರಕಾರ 1960ರ ಅಂತ್ಯದಲ್ಲಿ ಫಸ್ಟ್ ಸ್ಟೇಜ್ ಮುಗಿಸಬೇಕೆಂಬ ವಿಚಾರ ಇತ್ತು. ಆದಷ್ಟು ಹೆಚ್ಚು ಸರ್ಕಾರ ತನ್ನ ಗಮನ, ಶಕ್ತಿ ಈ ವಿಷಯದಲ್ಲಿ ಹಾಕಿದೆ ಎಂಬುದು ನಿಜ. ಆದರೆ ಅನೇಕ ಕಾರಣಗಳಿಂದ ಕೆಲಸ ತಡವಾಗಿದೆ. ಆದರೂ ಬಹಳ ತಡವಾಗಿಲ್ಲ ಎಂದು ಅನಿಸುತ್ತದೆ. 40 ಕೋಟಿ ರೂಪಾಯಿಗಳ ಪ್ರಾಜೆಕ್ಟು 62ರಲ್ಲಿ ಆಗಬೇಕಾದುದು ಒಂದು ವರ್ಷ ತಡವಾದಲ್ಲಿ ಬಹಳ ತಡವಾಗಿದೆ ಎಂದೇನೂ ಅನಿಸುವುದಿಲ್ಲ. ಇದರಲ್ಲಿ ಎಷ್ಟು ಕಷ್ಟವಿದೆ ಎಂಬುದು ತಮಗೆಲ್ಲಾ ಗೊತ್ತು. ಫಾರಿನ್ "ಎಕ್ಸ್‌ಛೇಂಜ್", "Iron and Steel" ಬರಬೇಕು. ಇನ್‌ಸ್ಯುಲೇಟರ್ಸ್ ಪ್ರತಿಯೊಂದಕ್ಕೂ ಇಂಪೋರ್ಟ್ ಲೈಸೆನ್ಸ್ ಬರಬೇಕಾಗುತ್ತದೆ. ಇದು ಬರುವುದಕ್ಕೆ ಸ್ವಲ್ಪ ತಡವಾಗಿದೆ. ಆರ್ಡರ್ ಮಾಡಿದ್ದೇವೆ. ಎರಡು ಯೂನಿಟ್ ಸಲುವಾಗಿ ಬೇಕಾಗುವಂಥಾ ಟರ್ಬೈನ್ಸ್, ಜನರೇಟರ್ಸ್, ಟ್ರಾನ್ಸ್‌ಫಾರ್ಮರ್ಸ್ ಈ ಸಾಮಾನುಗಳ ಪೈಕಿ ಈಗಾಗಲೇ ಕೆಲವು ಬಂದಿವೆ. ಇನ್ನೂ ಬರುತ್ತಾ ಇವೆ, ಷಿಪ್‌ನಲ್ಲಿ ಇವೆ, ಇಷ್ಟರಲ್ಲೇ ಬರಬಹುದು. ಯಾವುದೇ ರೀತಿಯಿಂದ ತಡಮಾಡುತ್ತಾ ಇದ್ದೇವೆ ಎಂಬ ಮಾತು ಇಲ್ಲ. ಆದಷ್ಟು ಹೆಚ್ಚು ಗಮನ ಕೊಡುತ್ತಾ ಇದೆ. ಅಂದಾಜು ಪ್ರಕಾರ 1963ರ ಅಂತ್ಯದೊಳಗೆ ಮೊದಲನೆಯ ಸ್ಟೇಜ್ ಕೆಲಸ ಮುಗಿಯಬಹುದು ಎಂದು ಅನಿಸುತ್ತದೆ. ಫಸ್ಟ್ ಯೂನಿಟ್ ಏನಿದೆ ಅದರಿಂದ 89,100 ಕಿಲೋವಾಟ್ ಉತ್ಪನ್ನವಾಗುತ್ತದೆ. ಅಂಥಾ ಹತ್ತು ಯೂನಿಟ್‌ಗಳನ್ನು ಹಾಕಬೇಕೆನ್ನುವಂಥಹ ಒಂದು ಪ್ರಾಜೆಕ್ಟು ಇದು. ಹತ್ತು ಯೂನಿಟ್‌ಗಳನ್ನು ಹಾಕುತ್ತೇವೆ. ಇದರ ಅರ್ಥ ಎಂಟು ಲಕ್ಷದ 90 ಸಾವಿರ ಕಿಲೋವಾಟ್ ಪವರ್ ಜನರೇಟ್ ಮಾಡಬೇಕಾದ ಒಂದು ಯೋಜನೆ ಇದು, 2 ಯೂನಿಟ್ ಹಾಕುವಂಥಾದ್ದು ಮೊದಲನೇ ಸ್ಟೇಜಿನ ಕೆಲಸ, ಎರಡನೇ ಸ್ಟೇಜ್‌ನಲ್ಲಿ ಇನ್ನು ಎಂಟು ಯೂನಿಟ್‌ಗಳನ್ನು ಹಾಕಬೇಕೆಂದು ಇದೆ. ಮೊದಲನೆಯ ಸ್ಟೇಜ್‌ನ ಎರಡು ಯೂನಿಟ್‌ಗಳಿಗೆ ಬೇಕಾಗುವಂಥ ಮೆಷಿನರಿಗಳಿಗೆ ಈಗಾಗಲೇ ಆರ್ಡರ್ ಮಾಡಿದ್ದೇವೆ. ಫಾರಿನ್ ಎಕ್ಸ್‌ಛೇಂಜ್ ದೊರಕಿಸಿಕೊಂಡಿದ್ದೇವೆ. ಇಂಪೋರ್ಟ್ ಲೈಸೆನ್ಸ್ ಇದೆ. ಎರಡಕ್ಕೂ ಬೇಕಾಗುವಂಥ ಮೆಷಿನರಿ ಈಗಾಗಲೇ ಬಹುಭಾಗ ಬಂದಿದೆ. ಅದೂ ಅಲ್ಲದೆ ಟ್ರಾನ್ಸ್‌ಮಿಷನ್ ಲೈನ್ ಹಾಕುವುದೂ ಕೂಡ ಬಹಳ ಇದೆ. ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕೆ ಟವರ್ಸ್ ಮ್ಯಾನುಫ್ಯಾಕ್ಚರ್ ಮಾಡಬೇಕು. ಅದಕ್ಕೆ ಬೇಕಾದ ಐರನ್ ಅಂಡ್ ಸ್ಟೀಲ್ ಒದಗಿಸಿಕೊಂಡಿದ್ದೇವೆ. ಟವರ್ ಮಾಡುವಂಥಾ ಕೆಲಸ ಪ್ರಾರಂಭವಾಗಿದೆ. ಬಹುಶಃ 1963ರ ಮಾರ್ಚಿ ಒಳಗೆ ಟ್ರಾನ್ಸ್‌ಮಿಷನ್ ಲೈನ್ ಶರಾವತಿಯಿಂದ ಬೆಂಗಳೂರಿಗೆ ತರುವಂಥಾ ಕೆಲಸ ಮಾಡಬಹುದು ಎಂಬ ಆಶೆ ಇದೆ. ಅದೇ ರೀತಿ 1963ರ ಅಂತ್ಯದೊಳಗಾಗಿ ಒಂದು ಯೂನಿಟ್ ಆದರೂ—89 ಸಾವಿರದ 100 ಕಿಲೋವಾಟ್ ಜನರೇಟ್ ಮಾಡುವಂಥಾ ಯೂನಿಟ್ ಇನ್‌ಸ್ಟಾಲ್ ಮಾಡಿ ಕಮಿಷನ್ ಮಾಡಬೇಕೆಂದು ವಿಚಾರ ಮಾಡಿದ್ದೇವೆ, ಸದ್ಯಕ್ಕೆ

(ಶ್ರೀ ವೀರೇಂದ್ರಪಾಟೀಲ್)

ಎಂದು ತಿಳಿದುಕೊಂಡಿದ್ದೇನೆ. ಇನ್ನು ಮೊದಲೇ ಹೇಳಿದಂತೆ ಉದ್ದವಾದ ಭಾಷಣ ಮಾಡಿ ತೀವ್ರವಾಗಿ ಮಾಡುತ್ತೇವೆ ಎಂದು ಹೇಳಿ ಅನಂತರ ಆಗಲಿಲ್ಲ ಎಂದು ಹೇಳುವುದು ಬೇಡ, ಸೆಪ್ಟೆಂಬರ್ ಅಥವಾ ಅಕ್ಟೋಬರ್ ನಲ್ಲಿ ಒಂದು ಯೂನಿಟ್ ಕಮಿಷನ್ ಮಾಡಬಹುದು ಎಂದು ಅಂದರೂ ವರ್ಷದ ಅಂತ್ಯದೊಳಗೆ ಆಗಬಹುದು ಎಂದು ಭರವಸೆ ಇವೊತ್ತು ಕೊಡುತ್ತೇನೆ. ಇನ್ನೊಂದು ಯೂನಿಟ್ ಇನ್‌ಸ್ಟಾಲ್ ಮಾಡುವುದು ಆದಾದಮೇಲೆ ಎರಡುಮೂರು ತಿಂಗಳು ತಡವಾಗಬಹುದು. ಈ ರೀತಿ ಎಲ್ಲಕ್ಕೂ ಗಮನ ಕೊಟ್ಟು ತೀವ್ರ ಮುಗಿಸ ಬೇಕೆಂದು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಆಗ ಮಿನಿಸ್ಟರು ಭಾಷಣ ಮಾಡಿದ್ದನ್ನು ಓದಿ ಹೇಳಬಹುದಲ್ಲಾ !

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಚನ್ನ ಬಸಪ್ಪನವರು 1962 ರ ಒಳಗೆ ಶತಾಯ ಗತಾಯ ಮಾಡಿಯೇ ಮಾಡುತ್ತೇವೆ ಎಂದು ಹೇಳಿರಬಹುದು. ಆದರೂ ಕೆಲವು ಅಡ್ಡಿ ಆತಂಕಗಳು ಬರುತ್ತವೆ. ಅವನ್ನು ಪಾರು ಮಾಡಿಕೊಂಡು ಹೋಗತಕ್ಕ ಸಂದರ್ಭದಲ್ಲಿ ತಡ ಆಗುತ್ತದೆ. ಅದನ್ನು ಯಾವ ರೀತಿಯಿಂದಲೂ ನಿಲ್ಲಿಸುವುದಕ್ಕಾಗುವುದಿಲ್ಲ. ಅದೇ ರೀತಿ ಶ್ರೀಮಾನ್ ವೀರಣ್ಣಗೌಡರು, 1962 ರಲ್ಲಿ ಸಾಧ್ಯವಿಲ್ಲ ; 1963 ರ ಒಳಗೆ ಫಸ್ಟ್ ಸ್ಟೇಜ್ ಮುಗಿಯುವಂಥ ಕೆಲಸ ಮಾಡುತ್ತೇವೆ ಎಂದು ಹೇಳಿರಬಹುದು. ಇದರಲ್ಲಿ ಕಷ್ಟ ಏನು ಬರುತ್ತಿದೆ ಎಂದರೆ...

ಶ್ರೀ ವಿ. ಎಂ. ದೇವ್ (ಗುಬ್ಬಿ).— ಯಾವ ಯಾವ ಇಂಪೋರ್ಟ್ ಲೈಸೆನ್ಸ್ ಬರುವುದಕ್ಕೆ ಎಷ್ಟು ತಡ ವಾಯಿತು, ಫರ್ಮ್‌ನವರು "orders follow up" ಮಾಡಿ ಇಲ್ಲಿಗೆ ಕಳುಹಿಸುವುದಕ್ಕೆ ಎಷ್ಟು ಕಾಲ ಆಯಿತು ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.— ಇಂಪೋರ್ಟ್ ಲೈಸೆನ್ಸ್ ಬರುವುದಕ್ಕೆ ತಡವಾಯಿತು ಎಂದು ಅಲ್ಲ, ಅನೇಕ ಕಾರಣಗಳಿಂದ ತಡವಾಗಿದೆ. ನಮಗೆ ಬರುವಂಥಾ ಮೆಷಿನರಿ ಹೊರಗಡೆಯಿಂದ ಇಂಪೋರ್ಟ್ ಮಾಡಬೇಕಾಗುತ್ತದೆ. ಫಾರಿನ್ ಎಕ್ಸ್‌ಚೇಂಜ್ ಪಡೆಯಬೇಕು. ಅದಕ್ಕೆ ಬೇಕಾಗುವಂಥಾ "Iron and Steel" ದೊರಕಿಸಿಕೊಳ್ಳಬೇಕು. ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕೆ ಟವರ್ಸ್ ಮ್ಯಾನುಫ್ಯಾಕ್ಚರ್ ಮಾಡಬೇಕಾಗುತ್ತದೆ. ಈ ಪ್ರತಿಯೊಂದು ಕೆಲಸ ಕೂಡ ಟೈಂನಲ್ಲಿ ಆಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಅನೇಕ ಕಷ್ಟಗಳು ಬರುತ್ತವೆ. ಉದಾಹರಣೆಗೆ ಈಗ ಅರ್ದನ್ ಡ್ಯಾಂ ಹಾಕುವಂಥಾ ಪ್ರಶ್ನೆ ಇದೆ, ಡಿಸೈನ್ ಬದಲಾವಣೆ ಮಾಡುವಂಥಾ ಆವಶ್ಯಕತೆ ಕಂಡುಬರುತ್ತಿದೆ. ಇದನ್ನು ಬದಲಾವಣೆ ಮಾಡಿದಾಗ ಕಂಟ್ರಾಕ್ಟ್‌ದಾರ ಮೊದಲಿನ ರೇಟ್‌ನಲ್ಲಿ ಕೆಲಸ ಮಾಡುವುದಕ್ಕೆ ತಯಾರಾಗಿರುವುದಿಲ್ಲ. ಹೊಸ ರೇಟ್ ಕೊಡಬೇಕೆಂದು ಹೇಳುತ್ತಾನೆ. ನಮಗೆ ಆತುರತೆ ಇದೆ ಎಂದು ಅವರಿಗೆ ಗೊತ್ತಾಗಿದೆ, ಶತಾಯ ಗತಾಯ ಮುಗಿಸಬೇಕೆಂದು ಅವರಿಗೆ ಗೊತ್ತು. ಅವರು ರೇಟ್ಸ್ ಮನಸ್ಸಿಗೆ ಬಂದಂತೆ ಕೇಳುತ್ತಾರೆ. ಆ ಪ್ರಕಾರ ರೇಟ್ಸ್ ಕೊಟ್ಟರೆ ತಾವು ಹೇಳುತ್ತೀರಿ ಕಂಟ್ರಾಕ್ಟರರೂ ಆಫೀಸರರೂ ಸೇರಿಕೊಂಡು ಕುಂಭಕೋಣಂ ಮಾಡಿದ್ದಾರೆ ಎಂದು. ಆ ರೀತಿ ಮಾಡದೇ ಇದ್ದರೆ ಕೆಲಸ ನಿಧಾನವಾಗುತ್ತದೆ. ಆಗ ತಾವು ಶತಾಯ ಗತಾಯ ಮಾಡುತ್ತೇವೆ ಎಂದು ಹೇಳಿದಿರಿ ; ಏಕೆ ಮಾಡಲಿಲ್ಲ ಎಂದು ಕೇಳುತ್ತೀರಿ.

ಶ್ರೀ ವಿ. ಎಂ. ದೇವ್.—ನಮ್ಮದು ಡೆವಲಪಿಂಗ್ ಎಕಾನಮಿ. ದೊಡ್ಡದೊಡ್ಡ ಕೆಲಸಗಳನ್ನು ಮಾಡಬೇಕಾಗಿದೆ. ನಿರ್ದಿಷ್ಟ ಕಾರಣಗಳೇನು ಎಂಬುದನ್ನು ತಿಳಿದುಕೊಂಡು ಕೆಲಸ ಮಾಡಿದರೆ ಪ್ರಯೋಜನವಾಗುತ್ತದೆ. ಎಲ್ಲಾ ಸುಲಭವಾಗಿದ್ದಿದ್ದರೆ ಸಾಧಿಸುವುದು ಏನಿದೆ ? ಆ ದೃಷ್ಟಿಯಿಂದ ನಿರ್ದಿಷ್ಟವಾದ ಕಾರಣಗಳೇನೆಂಬುದನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಪ್ರತಿಯೊಂದಕ್ಕೂ ನಿರ್ದಿಷ್ಟ ಕಾರಣಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಹೊರಗಡೆಯಿಂದ ಸಾಮಾನುಗಳನ್ನು ತರುತ್ತಾ ಇದ್ದ ಹಡಗು ಮುಳುಗಿಹೋಯಿತು. ಏನು ಮಾಡುತ್ತೀರಿ ? ಸಾಮಾನು ಬರುವುದು ತಡವಾಯಿತು. ಅದಕ್ಕೇ 40 ಕೋಟಿ ರೂಪಾಯಿನ ಒಂದು ಪ್ರಾಜೆಕ್ಟು ಒಂದು ವರ್ಷ ತಡವಾಗುತ್ತದೆ ಎಂದರೆ ಅದು ಬಹಳ ತಡವಲ್ಲ ಎಂದು ಅನಿಸುತ್ತದೆ.

ಶ್ರೀ ವಿ. ಎಂ. ದೇವ್.—ಒಂದೇ ಒಂದು ಮುಖ್ಯ ವಿಚಾರವನ್ನು ಗಮನಿಸಬೇಕಾಗಿದೆ. ನಲವತ್ತು ಕೋಟಿ ರೂಪಾಯಿನ ಯೋಜನೆಯನ್ನು ಒಂದು ವರ್ಷ ಮುಂದುವರಿಸಿದರೆ, ದೇಶ ಎಷ್ಟೋ ಮಟ್ಟಿಗೆ ಮುಂದುವರಿಯುತ್ತಿದ್ದುದು ಹಿಂದೆ ಬಿದ್ದಿತು ಎಂಬುದನ್ನು ಯೋಚನೆ ಮಾಡಿದರೆ ಗೊತ್ತಾಗುತ್ತದೆ. ಮುಂದುವರಿಸುದುದಕ್ಕೆ ಈ ರೀತಿಯ ಕಾರಣಗಳನ್ನು ಯಾರು ಬೇಕಾದರೂ ಹೇಳಬಹುದು. ಆದರೆ ನಿರ್ದಿಷ್ಟವಾಗಿ ಇಂಥಿಂಥ ಕಾರಣಗಳಿಂದ ತಡವಾಗುತ್ತದೆ ಎಂಬುದನ್ನು ತಿಳಿದುಕೊಂಡರೆ, ಮುಂದಾದರೂ ಹೀಗಾಗದಿರಲು ಅವಕಾಶವಾಗುತ್ತದೆಂದು ನಿರ್ದಿಷ್ಟವಾದ ಕಾರಣಗಳೇನೆಂದು ಕೇಳುತ್ತಿದ್ದೇನೆ. ಸರ್ಕಾರ ನಿರ್ದಿಷ್ಟವಾದ ಕಾರಣಗಳಿಂಥವೆಂಬುದನ್ನು ತಿಳಿದುಕೊಂಡು ಕೆಲಸ ಮಾಡಿದರೆ ದೇಶದ ಹಿತದೃಷ್ಟಿಯಿಂದ ಉತ್ತಮ.

ಶ್ರೀ ವೀರೇಂದ್ರ ಪಾಟೀಲ್.—ಏನೇ ಅದರೂ ಯೋಜನೆ ಬೇಗ ಮುಗಿಯಬೇಕೆಂಬ ಕಾತುರವಿಟ್ಟು ಕೊಂಡು ಮಾಡಬೇಕೆಂದು ಹೇಳುವುದು ಅಷ್ಟು ಸರಿಯೆಂದು ನನಗೆ ಕಾಣುವುದಿಲ್ಲ. ಇಂಥ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ Technical Experts ಏನು ಹೇಳುತ್ತಾರೋ ಅದನ್ನನುಸರಿಸಬೇಕಾಗುತ್ತದೆ. ದೊಡ್ಡ ಯೋಜನೆಯನ್ನು ಮಾಡುವಾಗ ಅದು ಇಂಥ ತಾರೀಕಿಗೇ ಮುಗಿಯಬೇಕೆಂಬುದು ಮಾತ್ರ ಇರಬಾರದು. ಅದರಲ್ಲಿ ಯಾವ ನ್ಯೂನತೆಯೂ ಬಾರದಂತೆ ನೋಡಿಕೊಳ್ಳಬೇಕು. ಈ ಯೋಜನೆಗೆ ಒಂದು ಬೋರ್ಡಿದೆ. ಇಂಡಿಯಾ ಸರ್ಕಾರದ ತಜ್ಞರಿದ್ದಾರೆ. ಅವರೂ ಇದರಲ್ಲಿ ಆಗುವ ಪ್ರಗತಿಯನ್ನು ನೋಡುತ್ತಿರುತ್ತಾರೆ. ಹಣವನ್ನು ಕೇಂದ್ರ ಸರ್ಕಾರದವರು ಒದಗಿಸುತ್ತಾರೆ. ಹೋದ ವರ್ಷ ಐದು ಕೋಟಿ ರೂಪಾಯಿ ಹೆಚ್ಚಾಗಿ ಕೊಟ್ಟಿದ್ದಾರೆ. ಈ ವರ್ಷ ಕೂಡ D.L.F. ಲೋನ್‌ನಿಂದ ಹಣ ಬರುತ್ತದೆ. ದೊಡ್ಡ ಯೋಜನೆಗಳನ್ನು ಆದಷ್ಟು ಬೇಗ ಮುಗಿಸಬೇಕೆಂಬ ಕಾತರ ನನಗೂ ಇದೆ. ನಿರೀಕ್ಷಿಸಿದ್ದುದಕ್ಕಿಂತ ಎರಡು ಮೂರು ತಿಂಗಳು ನಂತರ ಮುಗಿಯುತ್ತದೆ, ಎಂದರೆ, 1963ರ ಅಂತ್ಯದಲ್ಲಿ ಮೊದಲ ಘಟ್ಟ ಮುಗಿಯುತ್ತದೆ, ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆಂಬ ಭರವಸೆಯಿದೆ.

ಶ್ರೀ ಗಂಗಾಧರ ನಾಮೋಷಿ.—ಮೈಸೂರು ರಾಜ್ಯಕ್ಕೆ ಬೇಕಾದ ಸಲಕರಣೆಗಳನ್ನೊದಗಿಸಲು ಅಗತ್ಯವಾದ "Foreign Exchange" ಒದಗಿಸುವುದರಲ್ಲಿ priority ಕೊಡದೆ ಕೇಂದ್ರ ಸರ್ಕಾರದವರು

ಮೈಸೂರಿಗೆ ಅನ್ಯಾಯ ಮಾಡಿದ್ದಾರೆಂಬುದು ಗೊತ್ತಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಅನ್ಯಾಯ ಮಾಡಿದ್ದಾರೆಂದು ದೋಷಾರೋಪಣೆ ಮಾಡಬಾರದು. ಕೇಂದ್ರ ಸರ್ಕಾರದವರು ಬಹಳ ಸಹಾನುಭೂತಿಯಿಂದ ಆದಷ್ಟು ಬೇಗ ಈ ಕೆಲಸ ಮುಗಿಯಲೆಂದು ಆಶಿಸಿದ್ದಾರೆ. ಇದಕ್ಕೆ ಸಹಾಯ ಮಾಡಿದ್ದಾರೆಂದು ಹೇಳಿದ್ದೇನೆ.

